ಎಚ್. ಎಲ್. ಎನ್. ಭಾರತಿ, ಎಂ.ಎ.,

ಪ್ರಾಚೀನ ಹಸ್ತಪ್ರತಿಗಳು

ಪ್ರಚಾರ ಪುಸ್ತಕಮಾಲೆ ೧೮೬

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೭೧

ಪ್ರಚಾರ ಪುಸ್ತಕಮಾಲೆ—೧೮೭

ಪ್ರಾಚೀನ ಹಸ್ತಪ್ರತಿಗಳು

ಎಚ್. ಎಲ್. ಎನ್. ಭಾರತಿ, ಎಂ.ಎ.

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೭೧

ಮೊದಲನೆಯ ಮುದ್ರಣ : ೧೯೭೧
(೫,೦೦೦ ಪ್ರತಿಗಳು)

ಬೆಲೆ ೨೫ ಪೈಸೆ

ಪ್ರಕಾಶಕರು
ಡೈರೆಕ್ಟರ್, 'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು-೬

ಮುದ್ರಕರು
ಕಪಿಲಾ ಪವರ್ ಪ್ರೆಸ್
ನಂಜನಗೂಡು

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯು ಪ್ರಾರಂಭೋತ್ಸವದ ಸಮಯದಲ್ಲಿಯೂ, ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ, ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ-ಮೂಲೆಗೂ ಪ್ರಸರಿಸಿ, ಉಚ್ಚ ಶಿಕ್ಷಣವನ್ನು ಪಡೆಯಲು ಅವಕಾಶ ಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿಸಿ, ಸಮಷ್ಟಿ ಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯ ವನ್ನು ವ್ಯಕ್ತಪಡಿಸಿದರು. ಅವರ ಆಶಯ ಇಂದು ಫಲದಾಯಕ ವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿಪ್ರಸಾರ ಕಾರ್ಯವನ್ನು ಬಹಳ ಸಮರ್ಪಕರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ ಸುಲಭ ಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳಿವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕ ವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನ ನೆಲೆಸಿ, ಸಾಮಾನ್ಯ

ಜನರಂತೆಯೇ ಇದ್ದುಕೊಂಡು ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾ ಇತರರಿಗೂ ಆನಂದವನ್ನು ಉಂಟುಮಾಡುತ್ತಾರೆ. ಈ ಉಪನ್ಯಾಸಗಳು ವಿಶ್ವವಿದ್ಯಾನಿಲಯದ ಮೆಟ್ಟಿಲನ್ನು ಹತ್ತಲು ಅವಕಾಶವಿಲ್ಲದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ. ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ, ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ. ನಮ್ಮ ಸಮಾಜದಲ್ಲಿ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಸಹಾಯವಾಗುತ್ತವೆ; ವಿಶ್ವವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ ; ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ದುಃಖಕ್ಕೆ ಮೂಲಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ ವಿಶಾಲಭಾವನೆಯು ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು ಓದಿ ತಿಳಿವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಅಚ್ಚಿನ ಮನೆಯಿಂದ ಹೊರಬಿದ್ದಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೇ ಭೌತವಿಜ್ಞಾನ, ರಸಾಯನವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಗಣಿತ ವಿಜ್ಞಾನ, ಸಮಾಜವಿಜ್ಞಾನ, ಅರ್ಥಶಾಸ್ತ್ರ, ತತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ ಮುಂತಾದ ವಿಷಯಗಳನ್ನು ಕುರಿತು ನೂರೆಂಭತ್ತೈದು

ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗಿದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಶ್ರೀ ಎಚ್. ಎಲ್. ಎನ್. ಭಾರತಿ, ಎಂ.ಎ. ಅವರ 'ಪ್ರಾಚೀನ ಹಸ್ತಪ್ರತಿಗಳು' ಹೆಚ್ಚು ಜನಪ್ರಿಯವಾಗಲೆಂದು ನಾನು ಆಶಿಸುತ್ತೇನೆ.

ಮೈಸೂರು
೧–೧೦–೧೯೭೧

ದೇ. ಜವರೇಗೌಡ
ವೈಸ್-ಛಾನ್ಸಲರ್

ನಿವೇದನೆ

ಪ್ರಾಚೀನ ಹಸ್ತಪ್ರತಿಗಳ ಪರಿಚಯವು ಪ್ರಥಮವಾಗಿ ನನಗೆ ಲಭಿಸಿದ್ದು ೧೯೬೩–೬೪ರಲ್ಲಿ ಪಂಜಾಬ್ ವಿಶ್ವವಿದ್ಯಾನಿಲಯದ ಹಸ್ತಪ್ರತಿಗಳ ವಿಭಾಗದಲ್ಲಿ ನನ್ನ ಸೇವೆಯನ್ನು ಸಲ್ಲಿಸುತ್ತಿದ್ದಾಗ. ೧೯೬೫ರಲ್ಲಿ ನಾನು ದೆಹಲಿಯಲ್ಲಿದ್ದಾಗ ಅಲ್ಲಿನ ನ್ಯಾಷನಲ್ ಮ್ಯೂಸಿಯಂ ಹಾಗೂ ನ್ಯಾಷನಲ್ ಆರ್ಕೈವ್ಸ್‌ಗಳ ನಿರಂತರ ಸಂಪರ್ಕವನ್ನು ಹೊಂದಿದ್ದುದರಿಂದ ಭಾರತೀಯ ಹಸ್ತಪ್ರತಿಗಳ ಇತಿಹಾಸವನ್ನು ವಿಶದವಾಗಿ ಅರಿಯಲು ಸಾಧ್ಯವಾಯಿತು. ಅಂದಿನಿಂದ ಪ್ರಾಚೀನ ಹಸ್ತಪ್ರತಿಗಳ ಪರಿಷ್ಕರಣದ ವಿಚಾರವಾಗಿ ನನ್ನದೇ ಆದ ಭಾಷೆಯಲ್ಲಿ ಒಂದು ಸಣ್ಣ ಗ್ರಂಥವನ್ನು ಸಾಮಾನ್ಯ ಜನತೆಯ ತಿಳುವಳಿಕೆಗಾಗಿ ರಚಿಸಬೇಕೆಂಬ ಇಚ್ಛೆ ಉಂಟಾಯಿತು. ನಂತರ ೧೯೬೮ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಯವನ್ನು ಸೇರಿದ ಮೇಲೆ ಈ ಇಚ್ಛೆಯು ಪುನಃ ನನ್ನಲ್ಲಿ ಜಾಗೃತವಾಯಿತು. ಅದರಂತೆ ಸಮಯ ದೊರೆತಾಗಲೆಲ್ಲಾ ಹಸ್ತಪ್ರತಿಗಳಿಗೆ ಸಂಬಂಧಿಸಿದ ವಿಷಯಗಳನ್ನು ಸಂಗ್ರಹಿಸಿ ಒಂದು ಲೇಖನಮಾಲೆಯನ್ನು ಪ್ರಾರಂಭಿಸಿದೆ.

ಈ ಗ್ರಂಥದಲ್ಲಿರುವ "ಹಸ್ತಪ್ರತಿಗಳ ಸ್ವರೂಪ ಮತ್ತು ಸಂಗ್ರಹ" ಎಂಬ ಭಾಗವು "ನಶಿಸಿಹೋಗುತ್ತಿರುವ ಆಸ್ತಿ, ಪ್ರಾಚೀನ ಹಸ್ತ ಪ್ರತಿಗಳು" ಎಂಬ ಶೀರ್ಷಿಕೆಯಲ್ಲಿ ೪–೧–೧೯೭೦ರ 'ಕನ್ನಡ ಪ್ರಭ'

ಪತ್ರಿಕೆಯಲ್ಲಿ ಪ್ರಕಟವಾಯಿತು. "ಹಸ್ತಪ್ರತಿಗಳ ವಿವರಣಾತ್ಮಕ ಗ್ರಂಥಸೂಚಿ" ಮತ್ತು "ಪ್ರಾಚೀನ ಹಸ್ತಪ್ರತಿಗಳ ಸಂರಕ್ಷಣೆಗೆ ಆಧುನಿಕ ಯುಗದ ಕೊಡುಗೆ–ಮೈಕ್ರೋಫಿಲ್ಮಿಂಗ್" ಎಂಬ ಭಾಗ ಗಳು ಕ್ರಮವಾಗಿ ೨೯–೩–೧೯೭೦ ಮತ್ತು ೧೨–೪–೧೯೭೦ರ 'ಕನ್ನಡ ಪ್ರಭ'ದಲ್ಲಿ ಪ್ರಕಟವಾದುವು. ಇವುಗಳನ್ನು ಸೂಕ್ತ ಕಂಡಲ್ಲಿ ಬದಲಾವಣೆಗಳನ್ನು ಮಾಡಿ ಉಳಿದ ಭಾಗಗಳನ್ನು ಸೇರಿಸಿದ್ದೇನೆ. ಇದರ ರಚನೆಯಲ್ಲಿ ಜಟಿಲವಾದ ವಿಷಯಗಳನ್ನು ನಿವೇದಿಸುವಾಗ ಮತ್ತು ಅನೇಕ ಗ್ರಂಥಗಳಿಂದ ಉದಾಹರಣೆ ಯನ್ನು ನಿರೂಪಿಸುವಾಗ ಡಾ॥ ಎಸ್. ಎಂ. ಕತ್ರೆಯವರ "ಇಂಟ್ರೊಡಕ್ಷನ್ ಟು ಇಂಡಿಯನ್ ಟೆಕ್ಸ್‌ಚುಯಲ್ ಕ್ರಿಟಿಸಿಸಮ್" ಎಂಬ ಗ್ರಂಥದ ಮೊರೆ ಹೊಕ್ಕಿದ್ದೇನೆ. ಸ್ಥೂಲವಾದ ಒಂದು ವಿಷಯವನ್ನು ಸಾಮಾನ್ಯರಿಗೆ ಅರ್ಥವಾಗುವಂತೆ ಸಂಗ್ರಹವಾಗಿ ರಚಿಸಲು ಮೊದಲು ಪ್ರೋತ್ಸಾಹಿಸಿದವರು ನನ್ನ ಮಿತ್ರರೂ ಹಿತೈಷಿಗಳೂ ಆದ ಶ್ರೀ ಗರುಡನಗಿರಿ ನಾಗರಾಜರವರು. 'ಕನ್ನಡ ಪ್ರಭ'ದಲ್ಲಿ ಪ್ರಕಟವಾದ ನನ್ನ ಲೇಖನಗಳನ್ನು ಈ ಸಣ್ಣ ಪುಸ್ತಕ ದಲ್ಲಿ ಅಳವಡಿಸಿ ಪ್ರಕಟಿಸಲು ಅನುಮತಿ ನೀಡಿ ಪ್ರೋತ್ಸಾಹಿಸಿ ದವರು ಆ ಪತ್ರಿಕೆಯ ಸಂಪಾದಕರಾದ ಶ್ರೀ ಕೆ. ಎಸ್. ರಾಮ ಕೃಷ್ಣಮೂರ್ತಿಯವರು. ಈ ಇಬ್ಬರಿಗೂ ನನ್ನ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ. ನನ್ನ ಬರವಣಿಗೆಯಲ್ಲಿ ಅಮೂಲ್ಯವಾದ

ಸಲಹೆಯನ್ನಿತ್ತು ಪ್ರೋತ್ಸಾಹಿಸಿದ ಶ್ರೀ ಆರ್. ಎಲ್. ಅನಂತ ರಾಮಯ್ಯನವರಿಗೂ, ಪುಸ್ತಕವನ್ನು ಅಂದವಾಗಿಯೂ ಸಕಾಲದಲ್ಲೂ ಮುದ್ರಿಸಿದ ಕಪಿಲಾ ಪ್ರೆಸ್ ಮಾಲೀಕರಿಗೂ ನನ್ನ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

ಎಚ್. ಎಲ್. ಎಸ್. ಭಾರತಿ

ಪ್ರಾಚ್ಯವಿದ್ಯಾ ಸಂಶೋಧನಾಲಯ
ಮೈಸೂರು
ವಿಜಯದಶಮಿ
೧೦-೧೦-೧೯೭೦

ವಿಷಯಾನುಕ್ರಮಣಿಕೆ

		ಪುಟಗಳು
	ನಿವೇದನೆ	vii
1.	ಹಸ್ತಪ್ರತಿಗಳ ಸ್ವರೂಪ ಮತ್ತು ಸಂಗ್ರಹ	೧
2.	ಹಸ್ತಪ್ರತಿಗಳ ವಿವರಣಾತ್ಮಕ ಗ್ರಂಥಸೂಚಿ ...	೧೧
3.	ಮೈಕ್ರೋಫಿಲ್ಮಿಂಗ್	೨೬
4.	ವೈಜ್ಞಾನಿಕ ವಿಷಯಗಳ ಹಸ್ತಪ್ರತಿಗಳು	೩೪
5.	ಪರಿಷ್ಕರಣ ಮತ್ತು ಸಂಪಾದನೆ	೪೬
6.	ಮೂಲ ಗ್ರಂಥದ ಪ್ರತಿಗಳಲ್ಲಿ ಉಂಟಾಗಬಹುದಾದ ಭಾಷಾಮಾಲಿನ್ಯಕ್ಕೆ ಕಾರಣಗಳು ...	೫೯
7.	ವಿಮರ್ಶಾತ್ಮಕ ಪರಿಷ್ಕರಣದಲ್ಲಿ ಅನುಸರಿಸಬೇಕಾದ ಕೆಲವು ಮುಖ್ಯ ಅಂಶಗಳು	೬೬

೧. ಹಸ್ತಪ್ರತಿಗಳ ಸ್ವರೂಪ ಮತ್ತು ಸಂಗ್ರಹ

ಶೋಭಾಯಮಾನವಾದ ಭಾರತೀಯ ವಿಚಾರಶಕ್ತಿಯ ಇತಿಹಾಸ ಯಾವ ಅಡ್ಡಿ-ಆತಂಕಗಳಿಲ್ಲದೆ ಸುಮಾರು ಮೂರು ಸಾವಿರ ವರ್ಷಗಳು ನಿರರ್ಗಳವಾಗಿ ನಡೆದು ಬಂದದ್ದು. ಅಲ್ಲದೆ, ಭಾರತೀಯ ನಾಗರಿಕತೆ ಒಂದು ಕಾಲದಲ್ಲಿ ಬಹಳ ಮುಂದು ವರಿದಿತ್ತೆಂಬುದು ನಿರ್ವಿವಾದ. ಆ ನಾಗರಿಕತೆಯ ಕಾಲದಲ್ಲಿ ನಮ್ಮಲ್ಲಿದ್ದ ಬಹುಮುಖ ಪ್ರೌಢಿಮೆಯು ನಾನಾ ಉಪಯುಕ್ತ ಗ್ರಂಥಗಳ ರಚನೆಯಲ್ಲಿ ಬಹಿರಂಗವಾಯಿತು. ಆ ಪ್ರಕಾರವಾಗಿ ವೇದಾಂತ, ಧರ್ಮ, ರಾಜಕೀಯ, ಸಾಹಿತ್ಯ, ಕಲೆ, ಶಿಲ್ಪ, ಇತಿಹಾಸ, ಪುರಾಣ, ನಿಘಂಟುಗಳು, ವ್ಯಾಕರಣ, ಗಣಿತ, ವೈದ್ಯಕ ಮುಂತಾದ ಶಾಸ್ತ್ರ ಸಂಬಂಧವಾದ ಗ್ರಂಥಗಳು ರಚಿಸಲ್ಪಟ್ಟವು. ಈ ಗ್ರಂಥಗಳ ಬಹುಭಾಗ ಹಸ್ತಪ್ರತಿಗಳು. ತಾಳಪತ್ರಾದಿಯಾಗಿ ಅನೇಕ ವಿಧವಾದ ಬರವಣಿಗೆಯ ಸಾಮಗ್ರಿಗಳ ಮೇಲೆ ರಚಿಸಿದವುಗಳು. ಇಂಥ ಹಸ್ತಪ್ರತಿಗಳನ್ನು ಸಾಧ್ಯವಾದಷ್ಟು ಕಂಡುಹಿಡಿದು, ಅಭ್ಯಸಿಸಿ, ಸಂಶೋಧಿಸಿ, ಪ್ರಕಟಣೆ ಪಡಿಸುವುದು ಇಂದಿನ ಪೀಳಿಗೆಯ ಆದ್ಯಕರ್ತವ್ಯವಾಗಿದೆ. ಈ ದೃಷ್ಟಿಯಲ್ಲಿ ಭಾರತೀಯ ಪ್ರಾಚ್ಯವಿದ್ಯಾ ಸಂಶೋಧನಾಲಯಗಳು ಮಾಡಿರುವ ಮತ್ತು ಮಾಡುತ್ತಿರುವ ಬಹುಮುಖವಾದ ಸೇವೆ ಸ್ತುತ್ಯರ್ಹ. ಅಳಿದು ಹೋಗುತ್ತಿರುವ ನಮ್ಮ ಜ್ಞಾನಭಂಡಾರವನ್ನು ಅರ್ಥ ಮಾಡಿಕೊಂಡು ಪುನಃ ಅದರ ಪುರೋಭಿವೃದ್ಧಿಗೆ ಶ್ರಮಿಸ ಬೇಕಾದರೆ ಮೊದಲು ಸಂಸ್ಕೃತ ಭಾಷೆಯ ಪರಿಚಯವಾಗಬೇಕು. ಭಾಷಾಜ್ಞಾನ ಮಾತ್ರವಲ್ಲದೆ ಆಯಾ ಶಾಸ್ತ್ರವಿಭಾಗಗಳಲ್ಲಿ ಪಾಂಡಿತ್ಯವೂ ಇರಬೇಕು.

ಪ್ರಾಚೀನ ಭಾರತದಲ್ಲಿ ಅಧ್ಯಯನ ಮತ್ತು ವಿದ್ಯಾಭ್ಯಾಸ ಕ್ರಮಗಳು ಗುರುವಿನಿಂದ ಶಿಷ್ಯರಿಗೆ ಬೋಧಿಸಲ್ಪಡುತ್ತಿದ್ದವು. ಅಂದರೆ, ಈಗಿನಂತೆ ಪಠ್ಯಪುಸ್ತಕಗಳಾಗಲಿ, ಪರಿಕರ ಗ್ರಂಥಗಳಾಗಲಿ ಇರಲಿಲ್ಲ. ಶಿಷ್ಯರೂ ಕೂಡ ಈಗಿನಂತೆ ಟಿಪ್ಪಣಿಗಳನ್ನು ಗುರುತು ಹಾಕಿಕೊಳ್ಳುತ್ತಿರಲಿಲ್ಲ. ಕೇವಲ ಗುರುಮುಖೇನ ಕಿವಿಗೆ ಬಿದ್ದ ಅಂಶವು ಶಿಷ್ಯರಿಂದ ಗ್ರಹಿಸಲ್ಪಟ್ಟು, ಹಾಗೆ ಗಮನವಿಟ್ಟು ಕೇಳಿದ ವಿದ್ಯಾ ವಿಷಯಗಳು ಸ್ಮೃತಿಯಲ್ಲಿ ವಿಕಾಸ ಹೊಂದಿ ಸಂಸ್ಕಾರ ವಾಗುತ್ತಿತ್ತು. ಕಾಲಕ್ರಮೇಣ ಈ ಶಕ್ತಿಯು ಕುಗ್ಗುತ್ತಾ ಹೋದುದರಿಂದಲೋ ಅಥವಾ ಬರವಣಿಗೆಯು ರೂಢಿಗೆ ಬಂದಾಗಲೋ ಜ್ಞಾನ ಸಂಬಂಧವಾದ ವಿಷಯುಗಳನ್ನು ಬರೆದಿಡುವ ಪದ್ಧತಿ ಪ್ರಾರಂಭವಾಯಿತು. ಕಾಗದವು ಬರವಣಿಗೆಯ ಸಾಧನವಾಗಿ ಬಳಕೆಗೆ ಬರುವುದಕ್ಕೆ ಮುಂಚೆ ಪ್ರಕೃತಿದತ್ತವಾದ ಅನೇಕ ಉಪಕರಣಗಳನ್ನು ಬರವಣಿಗೆಗೆ ಬಳಸುತ್ತಿದ್ದರು. ಭಾರತೀಯ ಹಸ್ತಪ್ರತಿಗಳಲ್ಲಿ ಮುಖ್ಯವಾಗಿ ಸಂಸ್ಕೃತಭಾಷೆಯಲ್ಲಿ ವಿಷಯ ಪ್ರತಿಪಾದನೆ ಮಾಡಿದ್ದರೂ ಲಿಪಿಯು ಮಾತ್ರ ನಾನಾ ವಿಧ. ನಾಗರಿ, ದೇವನಾಗರಿ, ಶಾರದಾ, ಆಂಧ್ರ, ಕನ್ನಡ ಮುಂತಾದ ಲಿಪಿಗಳನ್ನು ಬಳಸುತ್ತಿದರು. ಪ್ರಾಚೀನ ಭಾರತದಲ್ಲಿ ಮುಂದೆ ಹೇಳಿರುವ ಲೇಖನ ಸಾಮಗ್ರಿಗಳನ್ನು ಉಪಯೋಗಿಸು ತ್ತಿದ್ದರೆಂದು ತಿಳಿದುಬರುತ್ತದೆ.

ಭೂರ್ಜಪತ್ರ (Birch-bark)

ಹಿಮಾಲಯ ಪರ್ವತದಲ್ಲಿ ಸಮೃದ್ಧವಾಗಿ ಬೆಳೆಯುವ ಭೂರ್ಜ ವೃಕ್ಷದ ಒಳತೊಗಟೆ. ಇದು ಅಲೆಕ್ಸಾಂಡರನು ದಂಡಯಾತ್ರೆ ಮಾಡಿದ ಕಾಲದಲ್ಲಿ (ಕ್ರಿ.ಪೂ. ೩೨೬) ಉಪಯೋಗವಲ್ಲಿದ್ದ

ಲೇಖನ ಸಾಮಗ್ರಿ. ಕ್ರಮೇಣ ಈ ಹೆಸರು ಬ್ರಾಹ್ಮಣಿಕ ಮತ್ತು ಉತ್ತರೀಯ ಬೌದ್ಧ ಗ್ರಂಥಗಳಲ್ಲೂ ಕಂಡುಬರುವುದು. ಖರೋಷ್ಟ್ರೀ ದಮ್ಮಪದದ ಅತಿ ಪುರಾತನವಾದ ಹಸ್ತಪ್ರತಿಯು ಭೂರ್ಜ ಪತ್ರದ ಮೇಲೆ ಬರೆದದ್ದಾಗಿದೆ. ಅದಾದಮೇಲೆ. ಗಾಡ್‌ಫ್ರೆ ಸಂಗ್ರಹದ ತುಂಡುಗಳು (fragments) ಮತ್ತು ಆಳತ್ತೆಗೆ ಕತ್ತರಿಸಲ್ಪಟ್ಟ ಬೋವರ್ ಹಸ್ತಪ್ರತಿಗಳು ಭೂರ್ಜ ಪತ್ರದ ಮೇಲೆ ಬರೆದವು. ಭಕ್ಷಾಲಿ ಹಸ್ತಪ್ರತಿಗಳು ಮತ್ತು ಇತರ ಭೂರ್ಜಪತ್ರಗಳ ಮೇಲೆ ಬರೆದ ಹಸ್ತಪ್ರತಿಗಳು ಪೂನ. ಲಾಹೋರ್. ಕಲ್ಕತ್ತ. ಲಂಡನ್. ಆಕ್ಸ್‌ಫರ್ಡ್. ವಿಯನ್ನ ಮತ್ತು ಬರ್ಲಿನ್ ಗ್ರಂಥಾಲಯಗಳಲ್ಲಿ ಸಂಗ್ರಹಿಸಲ್ಪಟ್ಟಿವೆ. ಇವೆಲ್ಲವೂ ಕ್ರಿ.ಶ. ೧೫ನೇ ಶತಮಾನಕ್ಕೆ ಈಚಿನವು.

ಹತ್ತಿ ಬಟ್ಟೆ

ಇದನ್ನು 'ಪಟ'. 'ಪಟಿಕಾ' ಅಥವಾ 'ಕಾರ್ಪಾಸಿಕ ಪಟ'ವೆಂದು ಕರೆಯುತ್ತಾರೆ. ಖಾಸಗಿ ಮತ್ತು ಸರ್ಕಾರಿ ಬರವಣಿಗೆಗಾಗಿ ಇದು ಉಪಯೋಗಿಸಲ್ಪಡುತ್ತಿತ್ತೆಂದು ಸಾತವಾಹನನ ಕಾಲದ ಶಾಸನ ಗಳಿಂದ ತಿಳಿದುಬರುತ್ತದೆ. ಬರ್ನೆಲ್ ಮತ್ತು ರೈಸ್‌ರವರ ಪ್ರಕಾರ ಕರ್ಣಾಟಕ ಪ್ರಾಂತ್ಯದ ವಣಿಕರು ಹುಣಿಸೆಬೀಜವನ್ನು ಅರೆದು ನೀರಿನಲ್ಲಿ ಬೆರೆಸಿ, ಆ ಹಿಟ್ಟನ್ನು 'ಕಡತಂ' ಎಂಬ ಬಟ್ಟೆಯ ಮೇಲೆ ಬಳಿದು, ಇಜ್ಜಲು ಹುಡಿಯನ್ನು ಸಿಂಚಿಸಿ ಸೀಮೆಸುಣ್ಣ ದಿಂದ ಬರೆಯುತ್ತಿದ್ದರೆಂದು ತಿಳಿದುಬರುತ್ತದೆ. ಇಷ್ಟೇ ಅಲ್ಲದೆ, ಜೈನಸೂತ್ರಗಳ ಪಟ್ಟಿಯನ್ನು ರೇಷ್ಮೆಬಟ್ಟೆಯ ಮೇಲೆ ಬರೆದಿರುವ ಹಸ್ತಪ್ರತಿಯನ್ನು ಜೆಸಾಲ್ಮೀರ್ ಎಂಬಲ್ಲಿ ಬ್ಯೂಲರ್‌ರವರು ಪತ್ತೆ ಹಚ್ಚಿದರು.

ಮರದ ಹಲಗೆಗಳು

ಬೌದ್ಧ ಜಾತಕಗಳಲ್ಲೂ, ವಿನಯಪಿಟಕದಲ್ಲೂ ಮರದ ಹಲಗೆಯನ್ನು ಬರವಣಿಗೆಗೆ ಉಪಯೋಗಿಸುತ್ತಿದ್ದರೆಂದು ಉಲ್ಲೇಖಿಸಿದೆ. ಪಶ್ಚಿಮೀಯ ಕ್ಷತ್ರಪ ನಹಪಾನ ಶಾಸನದಿಂದ ಲೇವಾದೇವಿಗೆ ಸಂಬಂಧಿಸಿದ ಕರಾರುಗಳನ್ನು ಬರೆಯಲು 'ಫಲಕ'ವೆಂಬ ಹಲಗೆಗಳನ್ನು ಉಪಯೋಗಿಸುತ್ತಿದ್ದರೆಂದು ಕಂಡುಬರುತ್ತದೆ. ನುಣುಪು ಮಾಡಿದ ಮರದ ಹಲಗೆಗಳ ಮೇಲಿನ ಬರವಣಿಗೆಗಳು ಬರ್ಮಾ ದೇಶದಲ್ಲಿ ಸಾಮಾನ್ಯವಾಗಿದ್ದವು. ಇಂಥದೇ ಒಂದು ಭಾರತೀಯ ಹಸ್ತಪ್ರತಿ ಆಕ್ಸ್‌ಫರ್ಡ್‌ನ ಗ್ರಂಥಾಲಯ ಒಂದರಲ್ಲಿ ರಕ್ಷಿಸಲ್ಪಟ್ಟಿದೆ.

ತಾಳೆ ಪತ್ರಗಳು (Palm leaves)

ತಾಳಪತ್ರಗಳನ್ನು ಬರವಣಿಗೆಯ ಸಾಧನವಾಗಿ ಉಪಯೋಗಿಸುತ್ತಿದ್ದರೆಂದು ಕ್ರಿ.ಶ. ೭ನೇ ಶತಮಾನದಲ್ಲಿದ್ದ ಹ್ಯೂಯೆನ್‌ತ್ಸಾಂಗ್‌ನಿಂದ ತಿಳಿಯುತ್ತದೆ. ಆದರೆ ಈ ಪದ್ಧತಿ ಆ ಕಾಲಕ್ಕಿಂತ ಹಿಂದೆಯೇ ಬಳಕೆಯಲ್ಲಿತ್ತೆಂದು ಕಾಣಬರುತ್ತದೆ. ಭಾರತದಲ್ಲಿನ ತಾಳಪತ್ರಗಳು "ಕೋರಿಫ ಅಂಬ್ರಾಕ್ಯುಲಿಫೆರ" ಅಥವಾ "ಬೊರಾಸಸ್ ಫ್ಲಾಬೆಲಿಫೆರ" ಎಂಬ ಮರದ ಎಲೆಗಳಿಂದ ಮಾಡಲ್ಪಟ್ಟುದಾಗಿವೆ. ಮೊದಲನೆಯದು ಭಾರತದಲ್ಲೇ ಬೆಳೆಯುವ ಮರ, ಎರಡನೆಯದು ಕಾಲಕ್ರಮೇಣ ಆಫ್ರಿಕಾ ದೇಶದಿಂದ ಆಮದು ಮಾಡಿಕೊಂಡು ಬೆಳೆಸಿದ ಮರ. ಇದರ ಎಲೆಗಳು ಉದ್ದವಾಗಿಯೂ, ಕೊನೆಯಲ್ಲಿ ಮೊನಚಾಗಿಯೂ ಇದ್ದು ಮಧ್ಯೆ ಕಡ್ಡಿಯಂತೆ ದಪ್ಪ ಭಾಗವು ಎಲೆಯ ಉದ್ದಕ್ಕೂ ಇದೆ.

ಈ ತಾಳಪತ್ರಗಳ ಮಧ್ಯೆ ರಂಧ್ರವನ್ನು ಕೊರೆದು ಅದರ ಮೂಲಕ ದಾರವನ್ನು ಹಾಯಿಸಿ ಪತ್ರಗಳನ್ನು ಒಟ್ಟಿಗೆ ಸೇರಿಸಿ ಕಟ್ಟುತ್ತಾರೆ.

ಚರ್ಮ

ಸುಬಂಧುವಿನ 'ವಾಸವದತ್ತಾ' ಎಂಬ ನಾಟಕದಲ್ಲಿ ಬರವಣಿಗೆಗಾಗಿ ಚರ್ಮದ ಉಪಯೋಗವನ್ನು ಉದಾಹರಿಸಲಾಗಿದೆ. ಆದರೆ ಪ್ರಾಚೀನ ಹಿಂದುಗಳ ದೃಷ್ಟಿಯಲ್ಲಿ ಇದು ಅಪವಿತ್ರವಾದುದರಿಂದ ಇದರ ಸಾಧ್ಯತೆ ಅನುಮಾನಾಸ್ಪದ.

ಲೋಹ

ಭಾರತೀಯ ಗ್ರಂಥಗಳಲ್ಲಿ ಲೋಹವನ್ನು ಬರವಣಿಗೆಯ ಸಾಧನವಾಗಿ ಉಪಯೋಗಿಸಿದ್ದ ನಿದರ್ಶನಗಳಿವೆ. ಅದಲ್ಲದೆ ಹೇರಳವಾದ ಶಾಸನಗಳು ಲೋಹದ ಮೇಲೆ ಕೆತ್ತಲ್ಪಟ್ಟಿವೆ. ತಕ್ಷಶಿಲೆಯ ಸುತ್ತಮುತ್ತಲಲ್ಲಿನ ಕೆಲವು ಸ್ತೂಪಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಪಟ್ಟಿಗಳನ್ನು ಬರವಣಿಗೆಗಾಗಿ ಬಳಸಲಾಗಿದೆ. ಲೋಹಶಾಸನಗಳಲ್ಲಿ ಅತಿ ಹೆಚ್ಚಾಗಿ ಕಂಡುಬರುವುದು ತಾಮ್ರ ಶಾಸನಗಳು. ಈ ತಾಮ್ರಶಾಸನಗಳು ಬುದ್ಧನ ಕಾಲದಿಂದಲೂ ಬಳಕೆಯಲ್ಲಿದ್ದವೆಂದು ಚೀನೀಯಾತ್ರಿಕ ಫಾಹಿಯಾನ್(ಕ್ರಿ.ಶ ೪೦೦) ಸೂಚಿಸಿದ್ದಾನೆ. ಮೌರ್ಯರ ಕಾಲದಲ್ಲಿ ರಾಜಾಜ್ಞೆಯನ್ನು ತಾಮ್ರದಮೇಲೆ ಕೆತ್ತುತ್ತಿದ್ದರೆಂದು ತಿಳಿದುಬರುತ್ತದೆ. ಸರ್ಕಾರಿ ವಿಷಯಗಳಿಗೆ, ತಕ್ಕಂತೆ ಲೋಹವನ್ನು ಕತ್ತರಿಸಿ, ಅದರಮೇಲೆ ಬರವಣಿಗೆಯನ್ನು ಕೆತ್ತುತ್ತಿದ್ದರು.

ಶಿಲೆ

ಒಂದು ನಿರ್ದಿಷ್ಟ ಅಳತೆಗೆ ಕತ್ತರಿಸಿದ ನುಣುಪು ಮಾಡಿದ ಶಿಲೆಗಳೂ, ಕೆಲವು ಪಾರದರ್ಶಕ ಶಿಲೆಗಳೂ ಬಹಳ ಹಿಂದಿನ ಕಾಲ

ದಿಂದಲೂ ಬರವಣಿಗೆಗಾಗಿ ಉಪಯೋಗಿಸಲ್ಪಡುತ್ತಿದ್ದವು. ಸರ್ಕಾರಕ್ಕೆ ಸಂಬಂಧಿಸಿದ ಅಥವಾ ಖಾಸಗಿ ಶಾಸನಗಳು ಹಾಗೂ ಕಾವ್ಯಶಾಸನಗಳು ಒಂದಕ್ಕೊಂದು ಭಿನ್ನವಾಗಿವೆ. ಚಾಹಮಾನ ಆಳ್ವಿಕೆಯ ನಾಲ್ಕನೆ ವಿಗ್ರಹರಾಜನ ನಾಟಕದ ತುಂಡುಗಳು ಮತ್ತು ಅವನ ಆಸ್ಥಾನ ಕವಿ ಸೋಮದೇವನ ಬರವಣಿಗೆಗಳೂ ರಾಜಾಸ್ಥಾನದ ಆಜ್ಮೀರ್ ಬಳಿ ದೊರೆತವು. ಜೈನಪುರಾಣಕ್ಕೆ ಸಂಬಂಧಿಸಿದ ಪುರಾಣಶಾಸನಗಳೂ ಇತರ ಕಡೆಗಳಲ್ಲಿ ದೊರೆತಿವೆ.

ಇಟ್ಟಿಗೆ

ಬೌದ್ಧ ಸೂತ್ರಗಳನ್ನು ಕೆತ್ತಿರುವ ಇಟ್ಟಿಗೆಗಳು ಭಾರತದ ವಾಯುವ್ಯ ಗಡಿಯಲ್ಲಿ ದೊರೆತಿವೆ. ಮಣ್ಣಿನ ಮೇಲೆ ಮೊದಲು ಅಕ್ಷರಗಳನ್ನು ಬರೆದು ಆಮೇಲೆ ಅದನ್ನು ಸುಟ್ಟಿರುವಂತೆ ಕಂಡು ಬರುತ್ತದೆ.

ಕಾಗದ

ಕಾಗದದ ಮೇಲಿನ ಬರವಣಿಗೆ ಬಹುಶಃ ಕ್ರಿ. ಶ. ೧೩ನೇ ಶತಮಾನಕ್ಕಿಂತ ಮುಂಚಿನದಾಗಿರಲಾರದೆಂದು ವಿದ್ವಾಂಸರ ಅಭಿಪ್ರಾಯ. ಹಾಗೆ ದೊರೆತಿರುವ. ವಿಚಿತ್ರವಾದ ಕಾಗದದ ಮೇಲೆ ಬರೆಯಲಾದ, ಕಶಾಗರ್ ಹಸ್ತಪ್ರತಿ ನಮ್ಮ ದೇಶದಲ್ಲಿ ಉದ್ಭವವಾಯಿತೇ ಎಂಬುದು ಅನುಮಾನ. ಕೆಲವು ವಿದ್ವಾಂಸರು ಅವೆಲ್ಲವೂ ಮಧ್ಯ ಏಷ್ಯದಲ್ಲಿ ಬರೆಯಲಾಯಿತೆಂದೂ ನಿರ್ಧರಿಸಿದ್ದಾರೆ. ಕಾಗದದ ಹಸ್ತಪ್ರತಿಗಳ ವಿಚಾರದಲ್ಲಿ ಹೆಚ್ಚಿನ

ಸಂಶೋಧನೆ ಅಗತ್ಯವಾಗಿದೆ. ಒಟ್ಟಿನಲ್ಲಿ ಭಾರತ ದೇಶದಲ್ಲಿ ಭೂರ್ಜ ಪತ್ರವನ್ನು ಉತ್ತರ ಭಾಗದಲ್ಲಿ ಹೆಚ್ಚಾಗಿ ಬಳಸುತ್ತಿದ್ದರು ದಕ್ಷಿಣದಲ್ಲಿ ತಾಳಪತ್ರದ ಬಳಕೆಯೇ ಹೆಚ್ಚಾಗಿದ್ದಂತೆ ವಿದ್ವಾಂಸರ ಅಭಿಪ್ರಾಯ.

ನಮ್ಮ ದೇಶದ ನಾನಾ ಭಾಗಗಳಲ್ಲಿ ಪ್ರಾಚ್ಯವಿದ್ಯಾ ಸಂಶೋಧನಾಲಯಗಳಲ್ಲಿ ಸಂಗ್ರಹಿಸಿರುವ ಹಸ್ತಪ್ರತಿಗಳ ಸಂಖ್ಯೆ ಒಂದು ಲಕ್ಷಕ್ಕೂ ಮೇಲ್ಪಟ್ಟಿದೆ. ಅಷ್ಟೇ ಸಂಖ್ಯೆಯಲ್ಲಿ ಯುರೋಪ್ ಮತ್ತು ಅಮೆರಿಕಾ ದೇಶಗಳಲ್ಲೂ ಸಂಸ್ಕೃತ ಹಸ್ತಪ್ರತಿಗಳ ಸಂಗ್ರಹವಿದೆ. ಭಾರತದಲ್ಲಿ ಪ್ರಾಚೀನ ಹಸ್ತಪ್ರತಿಗಳ ವೈಜ್ಞಾನಿಕ ಅಧ್ಯಯನವು ಸುಮಾರು ೧೮೬೮-೬೯ರಲ್ಲಿ ಪ್ರಾರಂಭವಾಯಿತೆನ್ನಬಹುದು. ೧೮೬೮ರಲ್ಲಿ ಪ್ರಕಟವಾದ ಸರಕಾರದ ವರದಿಯಂತೆ ಆಗಿನ ಸರಕಾರದವರು ಪ್ರಾಚೀನ ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಅಧ್ಯಯನಕ್ಕಾಗಿ ಕ್ರಮಬದ್ಧವಾದ ವಿಧಾನವನ್ನು ಭಾರತದ ನಾನಾ ಭಾಗಗಳಲ್ಲಿ ಅನುಷ್ಠಾನಕ್ಕೆ ತಂದರೆಂದು ದಾಖಲೆಗಳಿಂದ ತಿಳಿಯುವುದು. ಇಷ್ಟೇ ಅಲ್ಲದೆ, ನಮ್ಮ ದೇಶದಲ್ಲಿ ಅನೇಕ ವ್ಯಯಕ್ತಿಕ ಸಂಗ್ರಹಗಳು ನಾನಾ ಕಡೆಗಳಲ್ಲಿ ಪಂಡಿತರುಗಳ ವಶದಲ್ಲಿವೆ. ಇವು ಸಂಸ್ಕೃತ ಭಾಷೆಯಲ್ಲದೆ ಇತರ ಭಾರತೀಯ ಭಾಷೆಗಳಲ್ಲಿ ರಚನೆಯಾಗಿರುವ, ಬೇರೆ ಕಡೆಗಳಲ್ಲಿ ಅನುಪಲಬ್ಧವಾದ ಹಸ್ತಪ್ರತಿಗಳಾಗಿರುತ್ತವೆ. ಇಂಥ ವೈಯಕ್ತಿಕ ಸಂಗ್ರಹಗಳನ್ನು ಪತ್ತೆಮಾಡಿ ಅಧಿಕೃತ ಪ್ರಾಚ್ಯವಿದ್ಯಾ ಸಂಶೋಧನಾಲಯಗಳಲ್ಲೂ, ಸಂಗ್ರಹಾಲಯಗಳಲ್ಲೂ ಸಂರಕ್ಷಿಸುವುದರಿಂದ ಸರಿಯಾದ ಆರೈಕೆಯಿಲ್ಲದೆ ನಶಿಸಿಹೋಗಬಹುದಾದ ಅಮೂಲ್ಯವಾದ ಹಸ್ತಪ್ರತಿಗಳನ್ನು ಕಾಪಾಡಿದಂತಾಗುತ್ತದೆ. ಇದು ಬಹು

ತುರ್ತಾಗಿ ಆಗಬೇಕಾದ ಕಾರ್ಯಕ್ರಮ. ಹಲವು ವರ್ಷಗಳ ಕೆಳಗೆ ಮಧ್ಯ ಏಷ್ಯದಲ್ಲಿ ಮರಳಿನಲ್ಲಿ ಹೂತುಹೋಗಿದ್ದ ನಗರಗಳ ಅವಶೇಷಗಳನ್ನು ಭಾರತೀಯ, ಫ್ರೆಂಚ್ ಮತ್ತು ಜರ್ಮನ್ ಪ್ರಾಚ್ಯ ಸಂಶೋಧನಾತಜ್ಞರು ತಪಾಸಣೆ ಮಾಡಿದಾಗ ಅವರಿಗೆ ದೊರೆತ ಅವಶೇಷಗಳಲ್ಲಿ ಹತ್ತುಸಾವಿರ ಹಸ್ತಪ್ರತಿಗಳು ಇದ್ದವು. ಇದರಲ್ಲಿ ಬಹುಭಾಗವನ್ನು ಪ್ಯಾರಿಸ್‌ನಲ್ಲಿ ಸುರಕ್ಷಿತವಾಗಿಡಲಾಗಿದೆ.

ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಸಂರಕ್ಷಿಸಿರುವ ಏಕೈಕ ಹಸ್ತಪ್ರತಿಯಾದ ಕೌಟಿಲ್ಯನ 'ಅರ್ಥಶಾಸ್ತ್ರ' ವೆಂಬ ಗ್ರಂಥದ ಪರಿಷ್ಕರಣ ಮತ್ತು ಸಂಪಾದನೆಯಿಂದ ನಮ್ಮ ರಾಷ್ಟ್ರಕ್ಕೆ ಸಂದ ಗೌರವ ಅಷ್ಟಿಷ್ಟಲ್ಲ. ಹಾಗೆಯೇ ಪೂನಾದ ಭಂಡಾರ್ಕರ್ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಪರಿಷ್ಕರಿಸಿ ಮುದ್ರಿತವಾದ 'ಮಹಾಭಾರತ' ಮತ್ತು ಬರೋಡದ ಮಹಾರಾಜ ಸಯಾಜಿರಾವ್ ವಿಶ್ವವಿದ್ಯಾನಿಲಯದ 'ರಾಮಾಯಣ' ಇತ್ಯಾದಿಯಾಗಿ ಅನೇಕ ಉಪಯುಕ್ತ ಗ್ರಂಥಗಳು ವಿಶ್ವವಿಖ್ಯಾತವಾಗಿವೆ. ಹೀಗೆಯೇ ನಾನಾ ಶಾಸ್ತ್ರ ಸಂಬಂಧವಾದ – ವಿಜ್ಞಾನವೂ ಸೇರಿ– ವಿಷಯ ಪ್ರತಿಪಾದನೆಗಳು ಇನ್ನೂ ಹಸ್ತಪ್ರತಿಯಾಗಿಯೇ ಉಳಿದಿವೆ.

ಭಾರತೀಯರಲ್ಲಿ ಅನುವಂಶಿಕವಾಗಿ ಬಂದಿರುವ ವ್ಯಾಮೋಹವೆಂದರೆ, ಪಿತ್ರಾರ್ಜಿತವಾಗಿ ಬಂದ ಯಾವುದೇ ಪದಾರ್ಥವನ್ನು. ಅದು ಉಪಯುಕ್ತವಾಗಿರಲಿ, ಇಲ್ಲದೇ ಇರಲಿ. ತಮ್ಮ ತಮ್ಮ ಮಕ್ಕಳ, ಮೊಮ್ಮಕ್ಕಳ ಇತ್ಯಾದಿ ಆಜೀವಪರ್ಯಂತ ಸಂರಕ್ಷಣೆ ಮಾಡಬೇಕೆಂಬ ಆಕಾಂಕ್ಷೆ. ಅತಿ ಉಪಯುಕ್ತವೂ. ಕೆಲವು

ಪುರಾತನ ಗ್ರಂಥಗಳ ಪರಿಷ್ಕರಣಕ್ಕೆ ಅವಶ್ಯವಾಗಿ ಅಧ್ಯಯನ ಮಾಡಬೇಕಾದವು. ಆದ ಹಸ್ತಪ್ರತಿಗಳು ಮೇಲೆ ಹೇಳಿದಂತೆ ಬಹುಜನ ಪಂಡಿತರ ವೈಯಕ್ತಿಕ ಸಂಗ್ರಹಗಳಲ್ಲಿವೆ. ಇಂಥ ಹಸ್ತ ಪ್ರತಿಗಳನ್ನು ಅವುಗಳ ಅಧ್ಯಯನ ಪರಿಷ್ಕರಣಗಳಿಗಾಗಿಯೇ ಇರುವ ಪ್ರಾಚ್ಯವಿದ್ಯಾ ಸಂಸ್ಥೆಗಳಿಗೆ ವಹಿಸಿದರೆ ಮಹದುಪಕಾರ ಮಾಡಿದಂತಾಗುತ್ತದೆ. ಆದರೆ, ಕೆಲವರು ಮೇಲೆ ಹೇಳಿದ ವ್ಯಾಮೋಹದಿಂದ ಇದಕ್ಕೊಪ್ಪುವುದಿಲ್ಲ. ಅಥವಾ ತಾವೇ ಪರಿಷ್ಕರಿಸಿ ಪ್ರಕಟಿಸುವುದಿಲ್ಲ. ಅವರ ದೃಷ್ಟಿಯಲ್ಲಿ ಹಸ್ತಪ್ರತಿಗಳು ಎಷ್ಟು "ಪವಿತ್ರ"ವೆಂದರೆ ಸೂರ್ಯನ ಕಿರಣಗಳೂ ಅವನ್ನು ಸ್ಪರ್ಶಿಸಬಾರದು ! ಭದ್ರವಾಗಿ ಮೂಟೆ ಕಟ್ಟಿ ಅಟ್ಟದ ಮೂಲೆ ಯಲ್ಲಿ ಬೆಚ್ಚಗೆ ಬಿದ್ದಿದ್ದರೇ ಇವರಿಗೆ ತೃಪ್ತಿ. ಅದರ ಪರಿಣಾಮವಾಗಿ ಇಂಥ ಉಪಯುಕ್ತ ಹಸ್ತಪ್ರತಿಗಳು ಗೆಜ್ಜಲಿಗೋ, ಇಲಿಗಳಿಗೋ ಪುಷ್ಕಳ ಆಹಾರವಾಗುತ್ತವೆ. ಕೆಲವು ದಶಕಗಳ ಹಿಂದೆ, ಕಾಶೀಕ್ಷೇತ್ರದಲ್ಲಿ ಒಬ್ಬ ಪಂಡಿತ ಹೇರಳವಾಗಿ ಹಸ್ತಪ್ರತಿಗಳನ್ನು ಹೊಂದಿದ್ದನಂತೆ. ಅವನು ಕಾಲವಾದಮೇಲೆ ಆ ಹಸ್ತಪ್ರತಿಗಳು ಪಿತ್ರಾರ್ಜಿತವೆನಿಸಿಕೊಂಡು, ಅವನ ಮಗ, ಮೊಮ್ಮಗ, ಹೀಗೆ ತಲೆ ಯಿಂದ ತಲೆಗೆ ಹಸ್ತಾಂತರವಾಯಿತು. ಕೊನೆಗೆ ಅದು ಸಾಂಸ್ಕೃತಿಕ ಜ್ಞಾನವೇ ಇಲ್ಲದ ಮರಿಮಗನಿಗೆ ಆಸ್ತಿಯಾಯಿತು. ಆದರೂ ಆತ ಆ ಹಸ್ತಪ್ರತಿಗಳನ್ನು ತನ್ನ ತಾತ ಮುತ್ತಾತಂದಿರ ಕಾಲದ್ದೆಂಬ ಭಯ ಭಕ್ತಿಯಿಂದ ಕಾಪಾಡುತ್ತಿದ್ದನಂತೆ, ಅಟ್ಟದ ಮೂಲೆಯಲ್ಲಿ. ಒಂದು ಸಂದರ್ಭದಲ್ಲಿ ಆ ಹಸ್ತಪ್ರತಿಗಳಿಗೆ ಬೇಡಿಕೆಗಳು ಬಂದಾಗ, ಆ ಬೇಡಿಕೆಯನ್ನು ಮಾನ್ಯಮಾಡಿ ತನ್ನ ಹಸ್ತಪ್ರತಿಗಳನ್ನು ವಿಲೇ ವಾರಿ ಮಾಡುವುದು ಮಹಾಪರಾಧವೆಂದು ಗಣಿಸಿ, ಆ ಅಮೂಲ್ಯವಾದ ಹಸ್ತಪ್ರತಿಗಳನ್ನು ಗಂಗಾನದಿಯಲ್ಲಿ ವಿಸರ್ಜನೆ

ಮಾಡಿದನಂತೆ. ನಮ್ಮ ಭಾರತೀಯ ವ್ಯಾಮೋಹ ಹೀಗಾದರೆ, ನಮ್ಮದೇ ಆದ ಸಂಸ್ಕೃತಿಯ ಅಧ್ಯಯನದಲ್ಲಿ ನಾವು ಹಿಂದೆ ಬಿದ್ದದ್ದು ಆಶ್ಚರ್ಯವೇನಲ್ಲ.

೨. ಹಸ್ತಪ್ರತಿಗಳ ವಿವರಣಾತ್ಮಕ ಗ್ರಂಥಸೂಚಿ

ಭಾರತೀಯ ಸಂಸ್ಕೃತಿಯ ಬಹುಮುಖವಾದ ಅಧ್ಯಯನವು ನಮ್ಮ ಪ್ರಾಚೀನ ಬರವಣಿಗೆಗಳಿಂದ ಪ್ರಾರಂಭವಾಗುತ್ತದೆನ್ನ ಬಹುದು. ಅಂತಹ ಬರವಣಿಗೆಗಳುಳ್ಳ ಹಸ್ತಪ್ರತಿಗಳ ಪರಿಷ್ಕರಣ ಮತ್ತು ಅಧ್ಯಯನಕ್ಕೆ ಮೊದಲು ಅವುಗಳನ್ನು ಕಲೆಹಾಕಿ ಪಟ್ಟಿ ಯನ್ನು ಸಿದ್ಧಪಡಿಸುವುದು ಅತ್ಯಗತ್ಯ.

ಬರವಣಿಗೆಯ ಬಳಕೆಯು ಪ್ರಾರಂಭವಾದಾರಭ್ಯ ನಮ್ಮ ಪೂರ್ವಿಕರು ಹಸ್ತಪ್ರತಿಗಳ ವಿಚಾರದಲ್ಲಿ ತೋರಿದ ಗೌರವದಿಂದಾಗಿ ಇಂದು ನಮ್ಮ ಸಾಂಸ್ಕೃತಿಕ ಜೀವನವು ಬಹುತೇಕ ಸಾಧ್ಯವಾಗಿದೆ ಯೆಂದು ಹೇಳಬಹುದು. ಅಂದರೆ, ನಮ್ಮ ದೇಶದಲ್ಲಿ ಅನಾದಿ ಕಾಲದಿಂದಲೂ ಖ್ಯಾತಿಹೊಂದಿದ್ದ ಉಚ್ಚತರ ಸಂಸ್ಕೃತಿಯು ಇಂದಿನವರೆಗೆ ಅನೂಚಾನವಾಗಿ ನಡೆದು ಬರುವುದಕ್ಕೆ ಕಾರಣ ನಮ್ಮ ಪ್ರಾಚೀನ ಗ್ರಂಥಗಳ ಅಧ್ಯಯನದಿಂದ ಕಂಡುಕೊಂಡು ಅದರಂತೆ ನಡೆದುಕೊಂಡು ಇಂದಿನವರೆಗೂ ಅನುಸರಿಸಿ ಬಂದಿರುವ ಭಾರತೀಯ ಸಂಸ್ಕೃತಿಯ ಮಹತ್ವ ನಮಗೆ ತಿಳಿಯುತ್ತಿರಲಿಲ್ಲ. ಬರವಣಿಗೆಗೂ ಮೊದಲು ಕೇವಲ ಮೌಖಿಕವಾಗಿ ಪ್ರಕಟವಾಗು ತ್ತಿದ್ದ ಬುದ್ಧಿ ವಿಷಯಗಳು ಕ್ರಮೇಣವಾಗಿ ಪೂರ್ವಿಕರಿಂದ ಬರೆಯಲ್ಪಟ್ಟು ಮುಂದಿನ ಪೀಳಿಗೆಗೆ ಅದರ ಲಾಭ ದೊರೆಯು ವಂತಾಯಿತು. ಪ್ರಪಂಚದ ಅತ್ಯಂತ ಪ್ರಾಚೀನ ಗ್ರಂಥವಾದ ಋಗ್ವೇದವೂ ಈ ಗುಂಪಿಗೆ ಸೇರುತ್ತದೆ. ಗಹನವಾದ ವಿಷಯ -ವಿಚಾರಗಳನ್ನು ಯಾವುದೇ ಒಂದು ಬರವಣಿಗೆಯ ಸಾಧನದಿಂದ ದಾಖಲೆಯಾಗಿಪರಿವರ್ತಿಸುವುದೇ ವೈಶಿಷ್ಟ್ಯವಾಯಿತು. ಹಸ್ತ ಪ್ರತಿಗಳ ಬರವಣಿಗೆ ಕ್ರಿಸ್ತಶಕೆಗೂ ಮುಂಚೆ ಪ್ರಾರಂಭವಾಗಿರಬೇಕು.

ಆದರೆ ಆ ಭಾಗದ ಯಾವ ಕಾಲದಲ್ಲಿ ಪ್ರಾರಂಭವಾಯಿತೆಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಆದಾಗ್ಯೂ ಕೂಡ, ಕ್ರಿಸ್ತಶಕೆಗೆ ನಂತರ ಪ್ರಾರಂಭವಾದ ಕಾಲವನ್ನು ನಮಗೆ ದೊರೆತಿರುವ ಕೆಲವು ಹಸ್ತಪ್ರತಿಗಳ ಆಧಾರದಮೇಲೆ ನಿರ್ದಿಷ್ಟವಾಗಿ ಹೇಳಬಹುದು. ಭೂರ್ಜಪತ್ರ, ತಾಳಪತ್ರ, ಇತ್ಯಾದಿ ಬರವಣಿಗೆಯ ಸಾಧನಗಳಲ್ಲದೆ ಚಿನ್ನವನ್ನು ಬಳಸಿದ ನಿದರ್ಶನವಿದೆ. ೧೯೨೬–೨೭ನೇ ಸಾಲಿನ ಭಾರತೀಯ ಪ್ರಾಕ್ತನಶಾಸ್ತ್ರ ವಿಭಾಗದ ವರದಿಯ ಪ್ರಕಾರ ೨೦ ಚಿನ್ನದ ಪತ್ರಗಳ ಮೇಲೆ ಬರವಣಿಗೆಯನ್ನು ಕೆತ್ತಿರುವ ಹಸ್ತಪ್ರತಿ ಬರ್ಮ ದೇಶದಲ್ಲಿ ದೊರಕಿತು. ಇದರ ಉದ್ದ ಆರೂವರೆ ಅಂಗುಲ, ಅಗಲ, ಒಂದೂಕಾಲು ಅಂಗುಲ. ಈ ಹಸ್ತಪ್ರತಿಯು ವಿನಯಪಿಟಕ ಮತ್ತು ಅಭಿಧಮ್ಮಪಿಟಕಗಳಿಗೆ ಸಂಬಂಧಿಸಿದ ವಿಷಯಗಳನ್ನು ಒಳಗೊಂಡಿದೆ. ಚಿನ್ನವು ಬಳಕೆಯಲ್ಲಿದ್ದ ಆ ಕಾಲದಲ್ಲಿ ಚೀನೀಯರು ಕಾಗದವನ್ನು ಬರವಣಿಗೆಗೆ ಬಳಸುತ್ತಿದ್ದರೆಂದೂ ತಿಳಿದುಬರುತ್ತದೆ. ಈ ಹಸ್ತಪ್ರತಿಯು ಕ್ರಿ.ಶ. ಸುಮಾರು ೬ ಅಥವಾ ೭ನೇ ಶತಮಾನಕ್ಕೆ ಸೇರಿದ್ದೆಂದು ನಿರ್ಧರಿಸಿದ್ದಾರೆ.

ಇಂಥ ಅಪರೂಪವಾದ ವಸ್ತುಗಳಿಂದ ನಮ್ಮ ಪೂರ್ವಿಕರು ಹಸ್ತಪ್ರತಿಗಳಿಗೆ ನೀಡಿದ್ದ ಸ್ಥಾನಮಾನಗಳು ಎಷ್ಟೆಂದು ವ್ಯಕ್ತವಾಗುತ್ತದೆ. ಹೀಗೆ ಪ್ರಾಚೀನ ಕಾಲದಲ್ಲಿ ಹಸ್ತಪ್ರತಿಗಳ ವಿಷಯದಲ್ಲಿ ಭಾರತೀಯರು ವಹಿಸಿದ್ದ ಆಸ್ಥೆ ಮತ್ತು ರಕ್ಷಣಾ ಕ್ರಮವಿದ್ದಾಗ್ಯೂ ನಮ್ಮ ದೇಶದಮೇಲೆ ಆದ ಪರಕೀಯರ ಧಾಳಿಗೆ ಸಿಕ್ಕು ನಮ್ಮ ಗ್ರಂಥಗಳಿಗೆ ಆದ ನಷ್ಟಕ್ಕಿಂತಲೂ ನಮ್ಮವರೇ ತೋರಿದ ಉದಾಸೀನದಿಂದ ನಶಿಸಿಹೋದ ಹಸ್ತಪ್ರತಿಗಳಿಗೆ ಲೆಕ್ಕವಿಲ್ಲ. ಪಿವಂಚ, ನಮ್ಮದೇ ಆದ ಗ್ರಂಥಗಳನ್ನು ಕಲೆಹಾಕಿ. ಪರಿಷ್ಕರಿಸಿ.

ಮುದ್ರಿಸಿ, ಆಧುನಿಕ ಯುಗದ ಆದಿಯಲ್ಲಿ ಭಾರತೀಯ ಸಂಸ್ಕೃತಿಯ ಅಧ್ಯಯನಕ್ಕೆ ನಾಂದಿ ಹಾಕಿದ ಯೂರೋಪಿಯನ್ನರಿಗೆ ನಾವು ಋಣಿಯಾಗಲೇಬೇಕು. ವಿಲಿಯಂ ಜೋನ್ಸ್, ಮ್ಯಾಕ್ಸ್‌ಮುಲರ್, ಕೋಲ್‌ಬ್ರೂಕ್‌ರವರೇ ಆದಿಯಾಗಿ ಬಹುಜನ ಯುರೋಪಿಯನ್ನರು ಹಸ್ತಪ್ರತಿಗಳ ಪರಿಷ್ಕರಣ ಪಾಂಡಿತ್ಯಕ್ಕೆ ಭದ್ರವಾದ ತಳಹದಿ ಹಾಕಿದರು.

ಪುರಾತತ್ವ ಶೋಧನೆಗಳಿಂದಲೂ, ಪಂಡಿತರುಗಳ ವೈಯಕ್ತಿಕ ಸಂಗ್ರಹಗಳಿಂದಲೂ ಮತ್ತು ಇತರ ಕಡೆಗಳಿಂದಲೂ ಸಂಗ್ರಹಿಸಿದ ಪ್ರಾಚೀನ ಹಸ್ತಪ್ರತಿಗಳನ್ನು ಪಟ್ಟಿಮಾಡಿಕೊಳ್ಳುವುದು ಮೊದಲ ಕರ್ತವ್ಯ. ಹೀಗೆ ದೊರಕಿದ ಪ್ರಾಚೀನ ಹಸ್ತಪ್ರತಿಗಳು, ಭಾರತೀಯ ಅಧ್ಯಯನದ ಯಾವ ಭಾಗಕ್ಕೆ ಸಂಬಂಧಿಸಿದವು, ಅವುಗಳ ಬರವಣಿಗೆಗೆ ಉಪಯೋಗಿಸಿರುವ ಸಾಧನಗಳೇನು, ಪತ್ರ ಸಂಖ್ಯೆ, ಲಿಪಿ, ಅವನ್ನು ರಚಿಸಿದ ಕರ್ತೃ, ಅವನ ದೇಶ, ಕಾಲ, ಗಳನ್ನು ಪಟ್ಟಿ ಮಾಡುವುದಕ್ಕೆ "ಪ್ರಾಚೀನ ಹಸ್ತಪ್ರತಿಗಳ ವಿವರಣಾತ್ಮಕ ಗ್ರಂಥಸೂಚಿ" (Descriptive Catalogue of Manuscripts) ಎಂದು ಹೆಸರು.

ಈಗ ನಮಗೆ ವಿವಿಧ ಕಡೆಗಳಿಂದ ಸಂಗ್ರಹಿಸಿದ ಒಂದು ಮೂಟೆ ಪ್ರಾಚೀನ ಹಸ್ತಪ್ರತಿಗಳು ದೊರಕಿದವೆಂದು ಇಟ್ಟುಕೊಳ್ಳೋಣ. ಆ ಗಂಟನ್ನು ಬಿಚ್ಚಿದಾಗ ವಿಧವಿಧವಾದ ವಸ್ತುಗಳ ಮೇಲೆ ವಿಧ ವಿಧವಾದ ಲಿಪಿಗಳಿಂದ ಬರೆಯಲಾದ ಹಸ್ತಪ್ರತಿಗಳು ನಮ್ಮ ಕಣ್ಣಿಗೆ ಗೋಚರವಾಗುತ್ತವೆ. ಒಂದೊಂದನ್ನೇ ತೆಗೆದು ಮೊದಲ ಕೆಲವು ಭಾಗಗಳನ್ನು ಪರಿಶೀಲಿಸಿದಾಗ ನಮಗೆ ಅದು ಯಾವ ಶಾಸ್ತ್ರಕ್ಕೆ ಸಂಬಂಧಿಸಿದುದೆಂದು ತಿಳಿಯುತ್ತದೆ. ಉದಾಹರಣೆಗೆ ದರ್ಶನ, ಧರ್ಮ, ವ್ಯಾಕರಣ, ಇತ್ಯಾದಿ ಶಾಸ್ತ್ರಗಳು. ಆಯಾ

ಶಾಸ್ತ್ರಕ್ಕೆ ಸಂಬಂಧಿಸಿದಂತೆ ಹಸ್ತಪ್ರತಿಗಳ ಹೆಸರುಗಳನ್ನು ಪಟ್ಟಿ ಮಾಡೋಣ. ಎರಡನೆಯದಾಗಿ ಆಯಾ ಶಾಸ್ತ್ರಗಳಲ್ಲಿ ಯಾವ ಭಾಗವನ್ನು ಆ ಹಸ್ತಪ್ರತಿಯಲ್ಲಿ ಪ್ರತಿಪಾದಿಸಿದೆ ಎಂಬುದನ್ನು ನಿರ್ಧರಿಸಬೇಕು. ಉದಾಹರಣೆಗೆ—ದರ್ಶನಶಾಸ್ತ್ರದಲ್ಲಿ ನ್ಯಾಯ, ವೈಶೇಷಿಕ, ಸಾಂಖ್ಯ ಇತ್ಯಾದಿ. ಮೂರನೆಯದಾಗಿ ಆ ಹಸ್ತ ಪ್ರತಿಯ ವ್ಯಾಪ್ತಿ, ಅಳತೆ, ಮೊದಲಾದುವನ್ನು ತಿಳಿಯುವುದು. ಆಮೇಲೆ ಆ ಗ್ರಂಥವನ್ನು ರಚಿಸಿದ ಕರ್ತೃವಿನ ಹೆಸರು. ಅದನ್ನು ಯಾವ ಕಾಲದಲ್ಲಿ ಬರೆಯಲಾಯಿತು ಇತ್ಯಾದಿಗಳನ್ನು ಪಟ್ಟಿ ಮಾಡುವುದು. ಇದರ ಉದ್ದೇಶವೇನೆಂದರೆ, ಪ್ರತಿ ಹಸ್ತಪ್ರತಿ ಯನ್ನೂ ಜಾಗರೂಕತೆಯಿಂದ ಪರಿಷ್ಕರಿಸಿ, ತುಲನೆಮಾಡಿ, ಪ್ರಕಟ ಮಾಡುವಾಗ ಅದಕ್ಕೆ ಸಹಾಯಕವಾಗುವ ಇತರ ಹಸ್ತಪ್ರತಿಗಳು ಇದ್ದಲ್ಲಿ, ಪರಿಷ್ಕರಿಸುವ ಹಸ್ತಪ್ರತಿಯ ಉಪಯುಕ್ತತೆ ಮತ್ತು ನಿಖರತೆ ಹೆಚ್ಚುತ್ತದೆ. ಅದಕ್ಕಾಗಿ ಪ್ರತಿ ಹಸ್ತಪ್ರತಿಯನ್ನೂ ನೋಡಿ ಅದರ ಉಪಯುಕ್ತತೆಯನ್ನು ನಿರ್ಧರಿಸುವ ಬದಲು ವಿವರಣಾತ್ಮಕ ಗ್ರಂಥಸೂಚಿಯ ಸಲಹೆಯನ್ನು ಪಡೆದರೆ ಇತರ ಹಸ್ತಪ್ರತಿಗಳನ್ನು ಕುರಿತ ಬೇಕಾದ ವಿಚಾರಗಳು ನಮಗೆ ಸಿದ್ಧವಾಗಿರುತ್ತವೆ. ಹೀಗೆ ಒಂದು ಗಂಟಿನಲ್ಲಿ ಹರಡಿ ಹಂಚಿಹೋಗಿದ್ದ ಹಸ್ತಪ್ರತಿಗಳನ್ನು ಮೇಲೆ ಹೇಳಿದ ಒಂದು ಕ್ರಮದಲ್ಲಿ ವಿಂಗಡಿಸಿ ಪಟ್ಟಿಮಾಡುವುದು ಅತ್ಯವಶ್ಯಕವಾಗುತ್ತದೆ.

ಉದಾಹರಣೆಗೆ, ಪೂನಾದ ಭಂಡಾರ್ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನಲ್ಲಿ ಪ್ರಕಟವಾದ "ಮಹಾಭಾರತದ" "ಆದಿಪರ್ವ"ದ ವಿಮರ್ಶಾತ್ಮಕ ಅಧ್ಯಯನದಲ್ಲಿ. ಪ್ರೊಫೆಸರ್ ವಿ. ಎಸ್. ಸುಕ್‌ಥಂಕರ್‌ರವರು ತಮ್ಮ 'ಪ್ರಾಲೆಗೋಮಿನ'ದಲ್ಲಿ

ಸೂಚಿಸಿರುವ ಒಂದು ಹಸ್ತಪ್ರತಿಯ ವಿವರಣೆಯನ್ನು ಗಮನಿಸೋಣ :

ಗ್ರಂಥದ ಹೆಸರು : ಆದಿಪರ್ವ (ಮಹಾಭಾರತ)

ಸಂಕೇತ : K_9

ಸ್ಥಳ : ಪೂನಾ (ಬೊಂಬಾಯಿ ಸರ್ಕಾರದ ಸಂಗ್ರಹ ; ಭಂಡಾರ್ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನಲ್ಲಿ ರಕ್ಷಿಸಲಾಗಿದೆ).

ಕ್ರಮ ಸಂಖ್ಯೆ : ೧೮೨ (೧೮೯೧–೯೫)

ಪುಟ ಸಂಖ್ಯೆ : ೨೯೭ (ಇದರಲ್ಲಿ ೨೨೦, ೨೨೭–೩೦, ೨೩೨–೩೩, ೨೩೯–೪೦—ಈ ಪುಟಗಳ ಬರವಣಿಗೆಯು ಬೇರೆಯವರಿಂದ ಬರೆದಂತಿದೆ).

ವ್ಯಾಪ್ತಿ : ಒಂದು ಪುಟದಲ್ಲಿ ಹನ್ನೊಂದು ಸಾಲುಗಳಿವೆ.

ಅಳತೆ : ೧೦.೮" × ೪.೮"

ಲಿಪಿ : ದೇವನಾಗರೀ (ಪೃಷ್ಠ ಮಾತ್ರೆಗಳೊಡನೆ)

ಕಾಲ : ವಿಕ್ರಮ ಸಂವತ್ಸರ ೧೭೯೪ (ಕ್ರಿ.ಶ.೧೭೩೮)

ಸಾಮಗ್ರಿ: ಭಾರತೀಯ ಕಾಗದ

ಟಿಪ್ಪಣಿ : 1. ಗ್ರಂಥದಲ್ಲಿ ಸಂಭವಿಸಿದ ತಪ್ಪುಗಳನ್ನು ಪರಿಸರದಲ್ಲೂ (ಮಾರ್ಜಿನ್), ಹಾಗೂ ಗ್ರಂಥ ಭಾಗದಲ್ಲೂ ತಿದ್ದಲು ಒಂದು ಬಗೆಯ ಹಳದಿ ಬಣ್ಣವನ್ನು ಉಪಯೋಗಿಸಿರುವಂತಿದೆ.

2. ಗ್ರಂಥದ ಅಂತ್ಯ ಭಾಗದಲ್ಲಿ (ಕೋಲೋಫೋನ್) ಉಪಪರ್ವಗಳ ಹೆಸರುಗಳೂ, ಅಧ್ಯಾಯಗಳ ಹೆಸರುಗಳೂ ಮತ್ತು ಅವುಗಳ ಸಂಖ್ಯೆಯನ್ನೂ ನಮೂದಿಸಲಾಗಿದೆ.

3. ಪರಿಸರದ (ಮಾರ್ಜಿನ್)ಲ್ಲಿರುವ ಟಿಪ್ಪಣಿಗಳಲ್ಲಿ ಪದಗಳ ಅನೇಕ ಪಾಠಾಂತರಗಳಿವೆ, ಹಾಗೂ ಮತ್ತೊಂದು ಹಸ್ತಪ್ರತಿಯಲ್ಲಿನ ಸಾಲುಗಳನ್ನೂ ಸೇರಿಸಲಾಗಿದೆ.

4. ಮೊದಲನೆಯ ಪತ್ರ ಹಾಗೂ ಎರಡನೆಯ ಪತ್ರದ ಸ್ವಲ್ಪ ಭಾಗವು (ಇದು ಮೊದಲನೆಯ ಪತ್ರಕ್ಕೆ ಅಂಟಿಕೊಂಡು ಹರಿದಿದೆ) ಬೇರೆ ಹಸ್ತದಿಂದ ಬರೆದಂತಿದೆ.

5. ೧೮೬ ಬಿ ಸಂಖ್ಯೆಯ ಪತ್ರದಲ್ಲಿ ಮೂರು ಸಾಲುಗಳನ್ನು ಬರವಣಿಗೆಕಾರನು (ಸ್ಕ್ರೈಬ್) ಖಾಲಿಯಾಗಿ ಬಿಟ್ಟಿದ್ದಾನೆ.

6. ಫಲಶ್ರುತಿಗಳ ನಾಲ್ಕು ಶ್ಲೋಕಗಳ ಕೊನೆಯಲ್ಲಿ ಪರ್ವಸಂಗ್ರಹವನ್ನು ಎರಡು ಶ್ಲೋಕಗಳಲ್ಲಿ ಕೊಟ್ಟಿದೆ. ಅದರಲ್ಲಿ, ಅಧ್ಯಾಯಗಳ ಸಂಖ್ಯೆ (೨೧೮), ಶ್ಲೋಕಗಳ ಸಂಖ್ಯೆ (೮೯೮೪), ಹಾಗೂ ಹಸ್ತಪ್ರತಿಯು ಬರೆಯಲ್ಪಟ್ಟ ಕಾಲವನ್ನು "ಸಂವತ್ ೧೬೯೪ ವರ್ಷೇ ಮಾಘ ಶುದ್ಧಿ ೧೦ ರವೌ ಲಿಖಿತಮಿದಮ್" ಎಂದು ಹೇಳಿದೆ. ಇದರಲ್ಲಿ ಬರವಣಿಗೆಕಾರನ ಹೆಸರಾಗಲೀ, ಕುಲಗೋತ್ರಗಳಾಗಲಿ, ಇಲ್ಲ.

ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯವು ೧೯೬೨ರಲ್ಲಿ ಪ್ರಕಟಿಸಿದ "ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ" ಎಂಬ ಗ್ರಂಥದಲ್ಲಿ, ಒಂದು ಹಸ್ತಪ್ರತಿಯ ಮುಖ್ಯ ಅಂಶಗಳನ್ನು ಹೇಗೆ ವಿಭಾಗಿಸಿ ಅದರ ವಿವರಣೆಯನ್ನು ಕೊಡಬಹುದು ಎಂಬುದನ್ನು ವಿವರಿಸಿರುವ ಒಂದು ಉದಾಹರಣೆಯನ್ನು ಪರಿಶೀಲಿಸೋಣ. ಈ ಗ್ರಂಥದ ಪೀಠಿಕೆಯಲ್ಲಿ ಕೊಟ್ಟಿರುವ ನಿರ್ದೇಶನವನ್ನು ಮೊದಲು ಗಮನಿಸೋಣ. ಆ ಭಾಗವನ್ನು ಯಥಾವತ್ತಾಗಿ ಕೆಳಗೆ ಕೊಟ್ಟಿದೆ.

"ಮೊದಲು ಆಂಗ್ಲ ಸಂಖ್ಯೆಯಲ್ಲಿ ಕೊಟ್ಟಿರುವುದು ಗ್ರಂಥಗಳ ಕ್ರಮಾಂಕ. ಇದಾದ ಬಳಿಕ ಗ್ರಂಥದ ಸಾಂಕೇತಿಕಾಂಕವನ್ನು ಕನ್ನಡ ಅಂಕಿಗಳಲ್ಲಿ ಕೊಟ್ಟಿದೆ. ಈ ಸಾಂಕೇತಿಕಾಂಕದ ಹಿಂದೆ 'ಕೆ' ಎಂದು ಮಾತ್ರ ಇದ್ದರೆ ಅದು ಓಲೆಯ ಪ್ರತಿಯೆಂದೂ, 'ಕೆ.ಎ' ಎಂದಿದ್ದರೆ ದೊಡ್ಡ ಅಳತೆಯ ಕಾಗದದ ಪ್ರತಿಯೆಂದೂ, 'ಕೆ.ಬಿ' ಎಂದಿದ್ದರೆ ಚಿಕ್ಕ ಅಳತೆಯ ಕಾಗದದ ಪ್ರತಿಯೆಂದೂ ಸೂಚನೆ. ಒಂದೇ ಪುಸ್ತಕದಲ್ಲಿ ಹೆಚ್ಚು ಗ್ರಂಥಗಳಿದ್ದಾಗ ಆ ಗ್ರಂಥವು ಆ ಕಟ್ಟಿನಲ್ಲಿ ಎಷ್ಟನೆಯದು ಎನ್ನುವುದನ್ನು ತಿಳಿಯುವುದಕ್ಕಾಗಿ ಸಾಂಕೇತಿಕಾಂಕದ ಮುಂದೆ ಒಂದು ಗೀಟನ್ನು ಹಾಕಿ ಅದರ ಮುಂದೆ ಗ್ರಂಥದ ಸಂಖ್ಯೆಯನ್ನು ಕೊಟ್ಟಿದೆ. ಅದೇ ಸಾಲಿನ ಮಧ್ಯದಲ್ಲಿ ದೊಡ್ಡ ಅಕ್ಷರಗಳಲ್ಲಿರುವುದು ಗ್ರಂಥದ ಹೆಸರು. ಕೊನೆಯಲ್ಲಿರುವುದು ಗದ್ಯ, ಪದ್ಯ, ವಚನ, ಷಟ್ಪದಿ ಮೊದಲಾದ ಗ್ರಂಥ ಪ್ರಭೇದ. ಎರಡನೆಯ ಸಾಲಿನ ಆರಂಭದಲ್ಲಿ ಪುಸ್ತಕದ ಅಳತೆಯನ್ನು ಅಂಗುಲಗಳಲ್ಲಿ ಕೊಟ್ಟಿದೆ. ಅಂಗುಲದ ವಿಭಾಗವನ್ನು ದಶಮಾಂಶದಿಂದ ಸೂಚಿಸಿದೆ. ಈ ಅಳತೆಯ ಅಂಕಿಗಳಲ್ಲಿ ಮೊದಲನೆಯದು ಉದ್ದ, ಎರಡನೆಯದು ಅಗಲ. ಇವೆರಡರ

ಮಧ್ಯೆ ವಿಭಾಗಕ್ಕಾಗಿ '×' ಚಿಹ್ನೆಯನ್ನು ಉಪಯೋಗಿಸಿದೆ. ಗ್ರಂಥದ ಹೆಸರಿನ ಕೆಳಗೆ, ಕವಿಯು ತಿಳಿದಿದ್ದರೆ ಆತನ ಹೆಸರನ್ನೂ ಅದೇ ಸಾಲಿನ ಕೊನೆಯಲ್ಲಿ ಕವಿಯ ಕಾಲವನ್ನೂ ಈ ಎರಡೂ ತಿಳಿಯದಿದ್ದಾಗ ಆ ಸ್ಥಳಗಳಲ್ಲಿ ಪ್ರಶ್ನಚಿಹ್ನೆ (?) ಯನ್ನೂ ಕೊಟ್ಟಿದೆ. ಕವಿ ಮತ್ತು ಕಾಲ ವಿಚಾರಗಳಿಗೆ ಬಹುಮಟ್ಟಿಗೆ ಕರ್ಣಾಟಕ ಕವಿಚರಿತೆಯನ್ನು ಅವಲಂಬಿಸಿದೆ.

"ಮೂರನೆಯ ಸಾಲಿನ ಆರಂಭದಲ್ಲಿ ಗ್ರಂಥ ಪ್ರಾರಂಭವಾಗುವ ಮತ್ತು ಮುಗಿಯುವ ಪತ್ರ ಸಂಖ್ಯೆಗಳನ್ನು ಹೇಳಿದೆ. ಪತ್ರಗಳಿಗೆ ಕ್ರಮಾಂಕವನ್ನು ಬರೆಯದಿರುವ ಪುಸ್ತಕಗಳಲ್ಲಿ ಒಟ್ಟು ಎಷ್ಟು ಪತ್ರಗಳಿವೆ ಎನ್ನುವುದನ್ನು ಲೆಕ್ಕಮಾಡಿ ಕೊಟ್ಟಿದೆ. ಕೆಲವು ಕಡೆಗಳಲ್ಲಿ ಪುಟಸಂಖ್ಯೆಯನ್ನೂ ಕೊಟ್ಟಿದೆ. ಪತ್ರ ಎಂದಿರುವ ಕಡೆ ಎರಡು ಪಾರ್ಶ್ವಗಳೂ ಸೇರಿ ಒಂದು ಎಂದೂ, ಪುಟ ಎಂದರೆ ಪ್ರತಿ ಪಾರ್ಶ್ವಕ್ಕೂ ಬೇರೆ ಬೇರೆ ಕ್ರಮಾಂಕ ಕೊಟ್ಟಿದೆ ಎಂದೂ ತಿಳಿಯಬೇಕು. ಒಂದೇ ಪಾರ್ಶ್ವದಲ್ಲಿ ಬರೆದಿರುವ ಕಡೆಗಳಲ್ಲೆಲ್ಲಾ ವಿಶೇಷ ಭಾಗದಲ್ಲಿ ಪತ್ರಗಳ ಒಂದೇ ಪಾರ್ಶ್ವದಲ್ಲಿ ಬರವಣಿಗೆ ಇದೆ ಎಂದು ತಿಳಿಸಿದೆ. ಇದೇ ಸಾಲಿನ ಮಧ್ಯದಲ್ಲಿ ಪ್ರತಿ ಪತ್ರದ ಒಂದೊಂದು ಪಾರ್ಶ್ವದಲ್ಲೂ ಇರುವ ಸಾಲಿನ ಸಂಖ್ಯೆಗಳನ್ನು. ಕೊನೆಯಲ್ಲಿ ಪ್ರತಿಸಾಲಿನಲ್ಲೂ ಇರುವ ಅಕ್ಷರ ಸಂಖ್ಯೆಗಳನ್ನೂ ಸರಾಸರಿ ಮಾನದಿಂದ ಕೊಟ್ಟಿದೆ. ಬಳಿಕ ಗ್ರಂಥದ ಆದಿಭಾಗವನ್ನು 'ಆದಿ:' ಎನ್ನುವುದರ ಮುಂದೆಯೂ ಅಂತ್ಯಭಾಗವನ್ನು 'ಅಂತ್ಯ:' ಎನ್ನುವುದರ ಮುಂದೆಯೂ ಕೊಟ್ಟಿದೆ. ಈ ಆದ್ಯಂತ ಗ್ರಂಥಭಾಗಗಳ ಕೆಲವು ಕಡೆಗಳಲ್ಲಿ.........ಈ ಗುರುತಿನ ಕಡೆ ಗ್ರಂಥ ತ್ರುಟಿತವಾಗಿದೆಯೆಂದೂ × × × × ಹೀಗಿರುವ ಕಡೆ ಪುಸ್ತಕದಲ್ಲಿ ಆ ಭಾಗದ ಗ್ರಂಥವಿದ್ದರೂ ಆ ಭಾಗವನ್ನು ಬಿಟ್ಟು

ಮುಂದುವರಿಸಿದೆ ಎಂದೂ ತಿಳಿದುಕೊಳ್ಳಬೇಕು. **ಆದಿ, ಅಂತ್ಯ** ಗಳಾದ ಬಳಿಕ ಇರುವ **ವಿಷಯ** ಎಂಬ ವಿಭಾಗದಲ್ಲಿ ಪ್ರತಿಪಾದ್ಯ ವಿಷಯವನ್ನು ಒಂದೊಂದು ವಾಕ್ಯದಲ್ಲಿ ಸೂಚಿಸಲಾಗಿದೆ.

"ಆ ಬಳಿಕ ಇರುವ **'ವಿಶೇಷ'** ಎಂಬ ವಿಭಾಗದಲ್ಲಿ ಆ ಪುಸ್ತಕಕ್ಕೆ ಸಂಬಂಧಪಟ್ಟಂತೆ ಲಿಪಿ, ಪುಸ್ತಕದ ಸ್ಥಿತಿ, ಶಕಟರೇಫದ ಬಳಕೆ, ಅಸಮಗ್ರ ಮತ್ತು ಲುಪ್ತ ಪತ್ರಗಳ ವಿವರಣೆ, ಅದೇ ಪುಸ್ತಕದಲ್ಲಿ ಇರುವ ಇತರ ಗ್ರಂಥಗಳ ಸಂಖ್ಯೆ ಇವುಗಳ ವಿವರವನ್ನು ಸಂಗ್ರಹವಾಗಿ ಕೊಟ್ಟಿದೆ. ಕೆಲವು ಕನ್ನಡ ಪುಸ್ತಕಗಳೊಡನೆ ಇರುವ ಸಂಸ್ಕೃತ ಮತ್ತು ತೆಲುಗು ಭಾಷೆಯ ಗ್ರಂಥಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿ ನಾಲ್ಕನೆಯ ಸಂಪುಟದ ಅನುಬಂಧದಲ್ಲಿ ಕೊಟ್ಟಿದೆ.

"ಪ್ರತಿ ಗ್ರಂಥದ ವರ್ಣನೆಯೂ 'ಕ್ರಮಾಂಕ' ಮೊದಲಾಗಿ 'ವಿಶೇಷ' ಕಡೆಯಾಗಿ ಹದಿನಾಲ್ಕು ವಿಭಾಗಗಳನ್ನೊಳಗೊಂಡಿದೆ."

ಮೇಲೆ ವಿವರಿಸಿರುವ ರೀತಿಯಲ್ಲಿ ಪಟ್ಟಿಮಾಡಲಾಗಿರುವ ಗ್ರಂಥಗಳಲ್ಲಿ ಒಂದಾದ "ಗಜೇಂದ್ರಮೋಕ್ಷ" ವೆಂಬ ಗ್ರಂಥದ ವಿವರಣೆಯನ್ನು ಉದಾಹರಣೆಗಾಗಿ ಯಥಾವತ್ತಾಗಿ ಕೆಳಗೆ ಕೊಟ್ಟಿದೆ.

379

ಕೆ.ಬಿ. ೧೩೮/೧	ಗಜೇಂದ್ರಮೋಕ್ಷ	ಯಕ್ಷಗಾನ
೭.೭" × ೬.೩"	ಸುಬ್ರಹ್ಮಣ್ಯ	ಸು.೧೮೫೦
೧–೨೩ ಪತ್ರ	೧೫ ಪಂಕ್ತಿ	೨೪ ಅಕ್ಷರ

ಆದಿ : ಭಾಗವತ ಗಜೇಂದ್ರಮೋಕ್ಷ ಯಕ್ಷಗಾನ
ನಾಟ್ಕ ಬರಿಯುವುದಕ್ಕೆ ನಿರ್ವಿಘ್ನಮಸ್ತು॥
ನಾಂದೀ ॥ ಶ್ರೀರಸ್ತು ॥

ಶ್ರೀ ಶೇಶಾದ್ರಿ ನಿವಾಸಂ। ರವಿ ಶತಭಾಸಂ। ಸುಂದರಂ ನಾರಾಯಣಂ।
ಈಶಾರಾಧಿಸುತಾಘವಂದಿತಪದಂ ವೃಂದಾವನಂ ಪಾಲನಂ
ತೋೀಶಂ ಭಕ್ತ್ರಜನಾರ್ಚಿತಂ। ಹರಿಪದಂ। ಮಂದಸ್ಮಿತಂ ಮಾಧವಂ
ಪಾಶಂ ತ್ರಿಭುವನ್ನೈಕ್ಯವೀರಸದೃಶಂ। ವಂದೇ ಸದಾ ವೆಂಕಟಂ॥ ॥ ೧ ॥

ಅಂತ್ಯ :

ಭಾಮಿನೀ॥ ಭರದಿ ಪೇಳಿದ ಭಾಗವತದೊಳು
ವರಗಜೇಂದ್ರಗೆ ಮೋಕ್ಷವಿತ್ತುದ
ನರಿತು ಮಾಡಿದೆ ಪರಮಪುರುಷನ ದಯುದಿ ನಾನಿ
ಕರುಣಸಿಂಗರ ದುರಿತಭಂಜನ
ಶರಣರಕ್ಷಕ ನರಕಮೋಚನ
ಗರುಡವಾಹನ ಶರಣುಹೊಕ್ಕೆನು ಸಲಹು ಕರುಣದಲಿ॥ ॥ ೨೫೮ ॥

* * * *

ಮಂಗಳಂ ಶ್ರೀ ಮಂಜುನಾಥನಿಗೆ
ಜಯಮಂಗಳಂ ಗಜಮುಖರೂಪನಿಗೆ ॥ ೨೬೨ ॥
ಮಂಗಳಂ ಶೇಷಗಿರೀಶನಿಗೆ
ಜಯಮಂಗಳಂ ಶ್ರೀವೆಂಕಟೇಶನಿಗೆ ॥ ೨೬೩ ॥
ಸಂಪೂರ್ಣಂ

ವಿಷಯ : ಪಾಂಡ್ಯದೇಶದ ಭೂವರನಾದ ಇಂದ್ರದ್ಯುಮ್ನನುಅಗಸ್ತ್ಯರ ಶಾಪಕ್ಕೊಳಗಾಗಿ ಗಜನಾಗಿ ಹುಟ್ಟಿ ಮೊಸಳೆಯಿಂದ ಹಿಡಿಯಲ್ಪಟ್ಟು ಕಡೆಗೆ ಶ್ರೀಹರಿಯ ಕೃಪಾಕಟಾಕ್ಷದಿಂದ ಬಿಡುಗಡೆ ಹೊಂದಿದ ಕಥೆ.

ವಿಶೇಷ : ಗ್ರಂಥವು ಸುಭದ್ರವಾಗಿದ್ದರೂ ಪತ್ರದ ಅಂಚಿನಲ್ಲಿ ಮಾತ್ರ ಹುಳು ತಿಂದಿದೆ. ಈ ಗ್ರಂಥವು ಮೈಸೂರರಸರಾದ ಶ್ರೀ ಕೃಷ್ಣರಾಯರ ಕಾಲದಲ್ಲಿ ಬರೆಯಲ್ಪಟ್ಟಿದೆ. ಈ ಗ್ರಂಥದೊಡನೆ ಶ್ರೀ ಕೃಷ್ಣಗೋವರ್ಧನವೆಂಬ ಮತ್ತೊಂದು ಯಕ್ಷಗಾನ ಗ್ರಂಥವಿದೆ.

ಅನೇಕ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹಾಲಯಗಳಲ್ಲೂ, ಪ್ರಾಚ್ಯವಿದ್ಯಾ ಸಂಶೋಧನಾಲಯಗಳಲ್ಲೂ, ಇಂತಹ ವಿವರಣಾತ್ಮಕ ಗ್ರಂಥಸೂಚಿಗಳನ್ನು ಸಿದ್ಧಪಡಿಸಿರುತ್ತಾರೆ. ಈ ದೃಷ್ಟಿಯಲ್ಲಿ ಥಿಯೋಡೋರ್ ಔಫ್ರೆಕ್ಟ್, ಆಪರ್ಟ್, ಮುಂತಾದವರು ಸ್ವಲ್ಪಮಟ್ಟಿಗೆ ಶ್ರಮವಹಿಸಿದ್ದಾರೆ. ಮದರಾಸು ವಿಶ್ವವಿದ್ಯಾನಿಲಯವು ತಯಾರಿಸುತ್ತಿರುವ "ನ್ಯೂ ಕ್ಯಾಟಲಾಗಸ್ ಕ್ಯಾಟಲೊಗೊರಮ್" (New Catalogus Catalogorum) ಎಂಬ ಗ್ರಂಥಸೂಚಿಯೂ ಬಹಳ ಮಟ್ಟಿಗೆ ಉಪಯುಕ್ತವಾಗಿದೆ.

ಹಸ್ತಪ್ರತಿಗಳ ವಿವರಣಾತ್ಮಕ ಗ್ರಂಥಸೂಚಿಯ ಆರಂಭ ಮತ್ತು ಬೆಳವಣಿಗೆಯ ವಿಚಾರವಾಗಿ ಡಾಕ್ಟರ್ ಎಸ್. ಕೆ. ಬೆಲ್ವಾಲ್ಕರ್‌ರವರು ಆಗಿನ ಬೊಂಬಾಯಿ ಸರ್ಕಾರದ ಹಸ್ತಪ್ರತಿಗಳ ಕೋಶಾಗಾರದ ವಿವರಣಾತ್ಮಕ ಗ್ರಂಥಸೂಚಿಯ ಮೊದಲನೆಯ

ಭಾಗದ ಪ್ರಸ್ತಾವನೆಯಲ್ಲಿ ವಿವರಿಸಿದ್ದಾರೆ. ಅವರ ಪ್ರಕಾರ, ೧೭೭೪-೭೯ರಲ್ಲಿ ರಾಬರ್ಟ್ ಛೇಂಬರ್ಸ್ ಎಂಬುವರು ಭಾರತೀಯ ಗ್ರಂಥಗಳನ್ನು ತಕ್ಕಮಟ್ಟಿಗೆ ಸಂಗ್ರಹಿಸಿದರು. ೧೮೪೨ರಲ್ಲಿ ಈ ಉಪಯುಕ್ತ ಹಸ್ತಪ್ರತಿಗಳ ಭಂಡಾರವನ್ನು ಪ್ರಷ್ಯ ಸರ್ಕಾರವು ಕೊಂಡು ಬರ್ಲಿನ್ನಿನಲ್ಲಿಟ್ಟು ಕಾಪಾಡಿಕೊಂಡು ಬಂದಿತು. ೧೭೯೬–೧೮೦೬ರ ಮಧ್ಯಭಾಗದಲ್ಲಿ ಮೆಕೆಂಸಿ ಎಂಬುವರು ಪ್ರಾಚೀನ ಭಾರತೀಯ ಹಸ್ತಪ್ರತಿಗಳನ್ನೂ, ಶಿಲಾಲೇಖಗಳನ್ನೂ, ಭೂಪಟಗಳನ್ನೂ ಮತ್ತು ಇತರ ಪ್ರಾಚೀನ ಭಾರತೀಯ ವಸ್ತುಗಳನ್ನೂ ಸಂಗ್ರಹಿಸಿದರೆಂದೂ, ಈ ಸಂಗ್ರಹವನ್ನು ಈಸ್ಟ್ ಇಂಡಿಯಾ ಕಂಪೆನಿಯವರು ಹತ್ತುಸಾವಿರ ಪೌಂಡುಗಳಿಗೆ ಕೊಂಡುಕೊಂಡರೆಂದೂ ತಿಳಿದು ಬರುತ್ತದೆ. ಇದೇ ಸಂಗ್ರಹದ ನಿಯಮಿತ ಪಟ್ಟಿಯನ್ನು ೧೮೨೮ರಲ್ಲಿ ವಿಲ್ಸನ್‌ರವರು ತಯಾರಿಸಿದರು. ೧೮೬೮ರಲ್ಲಿ ಲಾಹೋರ್ ದರ್ಬಾರಿನ ರಾಧಾಕೃಷ್ಣರೆಂಬ ಪಂಡಿತರು ಆಗಿನ ಭಾರತ ಸರ್ಕಾರದ ವೈಸ್‌ರಾಯ್‌ರವರಿಗೆ ಬರೆದ ಪತ್ರದಲ್ಲಿ ಆಗ ಪ್ರಚಲಿತವಾಗಿದ್ದ ಸಂಸ್ಕೃತ, ಅರಬ್ಬೀ ಮತ್ತು ಪರ್ಷಿಯನ್ ಗ್ರಂಥಗಳ ಸಂಗ್ರಹ ಕಾರ್ಯದಲ್ಲಿ ಸರ್ಕಾರದ ನೀತಿಯನ್ನು ಪ್ರಶಂಸಿಸಿ, ಭಾರತ ಹಾಗೂ ಯೂರೋಪ್ ದೇಶಗಳಲ್ಲಿ ದೊರಕಬಹುದಾದ ಸಂಸ್ಕೃತ ಹಸ್ತಪ್ರತಿಗಳ ಪಟ್ಟಿಯನ್ನು ತಯಾರಿಸುವುದರ ಅವಶ್ಯಕತೆಯನ್ನು ಬಣ್ಣಿಸಿದ್ದಾರೆ.

ಪಾಶ್ಚಾತ್ಯ ಜನಾಂಗದಲ್ಲಿ ಪ್ರಥಮವಾಗಿ ಸಂಸ್ಕೃತ ಭಾಷೆಯಲ್ಲಿ ಆಸ್ಥೆಯನ್ನಿಟ್ಟು ಅಭ್ಯಸಿಸಿದ ಕೀರ್ತಿ ಫಾದರ್ ಹೀನ್‌ರಿಷ್ ರಾತ್ ಎಂಬ ಜರ್ಮನ್ ಪಾದ್ರಿಗೆ ಸಲ್ಲುತ್ತದೆ. ಈತ ೧೬೫೦–೧೬೬೦ರ ಮಧ್ಯೆ ಸಂಸ್ಕೃತಾಭ್ಯಾಸ ಮಾಡಿದರೆಂದು ತಿಳಿದುಬರುತ್ತದೆ. ೧೬೬೫ರಲ್ಲಿ ರೋಮ್ ದೇಶಕ್ಕೆ ಮರಳಿದ ಮೇಲೆ ರಾತ್‌ರವರು

ಲೋಹದಿಂದ ಮಾಡಿದ ಐದು ಪತ್ರಗಳ ಮೇಲೆ ಸಂಸ್ಕೃತ ವರ್ಣ ಮಾಲೆಯನ್ನು ದೇವನಾಗರೀ ಲಿಪಿಯಲ್ಲಿ ಕೆತ್ತಿ, ಲ್ಯಾಟಿನ್ ಭಾಷೆ ಯಲ್ಲಿ ಅದರ ವಿವರಣೆಯನ್ನು ಕೊಟ್ಟಿದ್ದಾರೆ. ಇದು ಪ್ರಾಚೀನ ಪ್ರಥಮವಾಗಿ ಪುಸ್ತಕರೂಪದಲ್ಲಿ ಬಂದ ಮೊದಲ ಬರವಣಿಗೆ. ಇದನ್ನು ೧೬೬೭ರಲ್ಲಿ ಆಮ್‌ಸ್ಟರ್‌ಡ್ಯಾಮ್‌ನಲ್ಲಿ ಪ್ರಕಟಿಸ ಲಾಯಿತು. ಆದಾಗ್ಯೂಕೂಡ, ಸಂಸ್ಕೃತ ಹಸ್ತಪ್ರತಿಗಳ ಮೊದಲನೆಯ ಗ್ರಂಥಸೂಚಿಯು ಬೆಳಕಿಗೆ ಬಂದದ್ದು ೧೮೦೭ರಲ್ಲಿ. ಅಲ್ಲಿಂದ ಈಚೆಗೆ ೧೯೪೦ರವರೆಗೆ ಸುಮಾರು ೧೬೪ ಗ್ರಂಥ ಸೂಚಿಗಳು ಪ್ರಪಂಚದ ವಿವಿಧ ಭಾಗಗಳಲ್ಲಿ ಪ್ರಕಟವಾಗಿವೆ. ಅದರಲ್ಲಿ ಸುಮಾರು ನೂರು ಗ್ರಂಥಸೂಚಿಗಳು ಭಾರತದಲ್ಲೇ ಪ್ರಕಟವಾಗಿವೆ.

ಸಂಸ್ಕೃತ ಪ್ರಾಚೀನ ಹಸ್ತಪ್ರತಿಗಳ ಗ್ರಂಥಸೂಚಿಯ ಇತಿಹಾಸ ಸುಮಾರು ೧೩೩ ವರ್ಷಗಳ ಅವಧಿಗೆ ಒಳಪಟ್ಟಿದೆ. ಈ ಕಾರ್ಯ ದಿಂದ ಇಂದಿನ ಸಂಸ್ಕೃತ ವಿದ್ವಾಂಸರಿಗೆ ಹೆಚ್ಚಿನ ಲಾಭವಾಗಿದ್ದರೂ ಕೂಡ ಪ್ರಾಚೀನ ಹಸ್ತಪ್ರತಿಗಳ ವಿವರಣಾತ್ಮಕ (Descriptive) ಗ್ರಂಥಸೂಚಿಯ ಕೊರತೆ ನಿವಾರಣೆಯಾಗಿಲ್ಲ. ಭಾರತೀಯ ಅಧ್ಯಯನವು ಇಂಥ ಹಸ್ತಪ್ರತಿಗಳನ್ನೇ ಅವಲಂಬಿಸಿರುತ್ತದೆ. ನಶಿಸಿಹೋಗುತ್ತಿರುವ ಈ ಆಸ್ತಿಯನ್ನು ನಾವು ಬೇಗ ಉಪ ಯೋಗಿಸಿಕೊಂಡಷ್ಟೂ ನಮ್ಮ ಸಂಸ್ಕೃತಿಯ ಪ್ರವರ್ಧಮಾನಕ್ಕೆ ಸಹಕಾರಿಯಾಗುತ್ತದೆ. ಆದ್ದರಿಂದ ಕೇಂದ್ರ ಸರ್ಕಾರವೇ ಆಗಲೀ, ರಾಜ್ಯ ಸರ್ಕಾರವೇ ಆಗಲಿ, ಅಥವಾ ಪ್ರಾಚ್ಯವಿದ್ಯಾ ಸಂಶೋಧನಾ ಲಯಗಳೇ ಆಗಲಿ, ಪ್ರಥಮವಾಗಿ ತಮ್ಮಲ್ಲಿರುವ ಪ್ರಾಚೀನ ಹಸ್ತಪ್ರತಿಗಳ ಗ್ರಂಥಸೂಚಿಯನ್ನು ತಯಾರಿಸುವುದರ ಕಡೆಗೆ ಗಮನ ಹರಿಸಬೇಕು. ಇದಕ್ಕೂ ಮೇಲಾಗಿ ವಿವರಣಾತ್ಮಕ ಗ್ರಂಥ

ಸೂಚಿಯ ಅವಶ್ಯಕತೆಯನ್ನು ಗಮನಿಸಿ ಅದರಂತೆ ಹಸ್ತಪ್ರತಿಗಳ ಸಂಗ್ರಹವನ್ನೂ ಅವುಗಳು ಒಳಗೊಂಡ ವಿಷಯ ವಿಶೇಷಗಳನ್ನೂ ಪ್ರಕಟಗೊಳಿಸಬೇಕು.

ಒಂದು ಕಾಲದಲ್ಲಿ ಪ್ರಾಚೀನ ಹಸ್ತಪ್ರತಿಗಳ ವಿವರಣಾತ್ಮಕ ಗ್ರಂಥಸೂಚಿಯನ್ನು ತಯಾರುಮಾಡಲು ಪಡಬೇಕಾದ ಶ್ರಮ, ಕಾಲವ್ಯಯ ಮುಂತಾದುವು ಅರ್ಥವಿಹೀನವೆಂದು ಬಗೆಯುತ್ತಿದ್ದ ವಿದ್ವಾಂಸರೂ ಇದ್ದರು. ಅಷ್ಟೇ ಅಲ್ಲದೆ, ಗ್ರಂಥಸೂಚಿಯ ಕಾರ್ಯ ನಮ್ಮದಲ್ಲವೆಂಬ ಬಿಗುಮಾನವೂ ಅವರಲ್ಲಿತ್ತು. ಈ ಕಾರಣದಿಂದ ಅವಶ್ಯಕವಾದ ಒಂದು ಕಾರ್ಯ ನಮ್ಮ ದೇಶದಲ್ಲಿ ಹಿಂದೆ ಬಿತ್ತು. ಇದರ ಪರಿಣಾಮವಾಗಿ ಪ್ರಾಚೀನ ಹಸ್ತಪ್ರತಿಗಳ ಅಧ್ಯಯನ-ಪರಿಷ್ಕರಣಾದಿಗಳೂ ಸಮರ್ಪಕವಾಗಿ ನಡೆಯುವುದು ದುಸ್ಸಾಧ್ಯವಾಯಿತು. ಈ ಕಾರಣಗಳಿಂದ ಇಂದು ಪ್ರಾಚ್ಯವಿದ್ಯಾ ಸಂಶೋಧಕರಲ್ಲಿ ಹಸ್ತಪ್ರತಿಗಳ ವೈಜ್ಞಾನಿಕ ವಿವರಣಾತ್ಮಕ ಗ್ರಂಥ ಸೂಚಿಯ ಸಂಕಲನವನ್ನು ಎಷ್ಟೇ ಕಷ್ಟದ ಕೆಲಸವಾದರೂ ಕೈಗೊಳ್ಳಬೇಕೆಂಬ ನಿರ್ಧಾರವು ಉಂಟಾಗಿದೆ.

ಇಂಥ ಗ್ರಂಥಸೂಚಿಗಳನ್ನು ಸಿದ್ಧಪಡಿಸುವಾಗ ಅದಕ್ಕೆ ಬೇಕಾಗುವ ಕಾಲ, ಪ್ರತಿಯೊಂದು ಹಸ್ತಪ್ರತಿಯನ್ನೂ ತುಲನೆಮಾಡಿ ವಿಷಯವನ್ನು ಸಂಗ್ರಹಿಸುವುದರಲ್ಲಿ ಇರುವ ಕಠಿಣತೆಯಿಂದಾಗಿ ಈ ಕೆಲಸ ಪೂರೈಸುವುದು ಬಹಳ ನಿಧಾನವಾಗುತ್ತದೆ. ಆದ್ದರಿಂದ ಈ ಕಾರ್ಯದಲ್ಲಿ ಆಸ್ಥೆಯುಳ್ಳ ವಿದ್ವಾಂಸರು ಕೆಲವು ಮಂದಿ ಮಾತ್ರ. ಮೊದಲು ಮೇಲ್ನೋಟಕ್ಕೆ ಬಹು ಉಪಯುಕ್ತವೂ, ಪುರಾತನವೂ, ಆದದ್ದಾಗಿ ಗೋಚರಿಸುವ ಒಂದು ಹಸ್ತಪ್ರತಿಯು ಅದರ ವಿಷಯ ವಿಶೇಷವನ್ನು ಪರಿಶೀಲಿಸಿ ದೇಶ ಕಾಲಗಳನ್ನು

ನಿರ್ಧರಿಸುವ ವೇಳೆಗೆ ಅದೇ ಹಸ್ತಪ್ರತಿಯು ಆಗಲೇ ಪ್ರಕಟವಾಗಿರುವ ಪರಿಷ್ಕೃತ ಗ್ರಂಥ ಒಂದರ ಒಂದು ಭಾಗವಾಗಿರುವುದು ಸಹಜ. ಹೀಗೆ ನಿರುತ್ಸಾಹದಾಯಕವಾದ ಕೆಲಸವಾದರೂ ಅದರಿಂದ ಪ್ರಾಚೀನ ಹಸ್ತಪ್ರತಿಗಳ ಅಧ್ಯಯನ-ಪರಿಷ್ಕರಣಗಳಿಗೆ ಆಗುವ ಉಪಯೋಗ ಅಷ್ಟಿಷ್ಟಲ್ಲ. ನಶಿಸಿಹೋಗಿರುವ ಹಸ್ತಪ್ರತಿಗಳಲ್ಲಿ ಅದರ ಕರ್ತೃವಿನ ಹೆಸರಾಗಲೀ ಅಥವಾ ಗ್ರಂಥದ ಹೆಸರಾಗಲೀ ಗೊತ್ತುಪಡಿಸುವುದು ಅತಿ ಕಷ್ಟದ ಕೆಲಸ. ಕೆಲವು ವೇಳೆ ಒಂದೇ ಹೆಸರಿನ ಅನೇಕ ಹಸ್ತಪ್ರತಿಗಳಿರುವುದೂ ಉಂಟು. ಅಥವಾ ನಾನಾ ಹೆಸರುಗಳುಳ್ಳ ಒಬ್ಬನೇ ಗ್ರಂಥ ಕರ್ತೃವಿರುವುದೂ ಉಂಟು. ಉದಾಹರಣೆಗೆ, ಒಂದು ಹಸ್ತಪ್ರತಿಯಲ್ಲಿ " ಕುಜಪೇಡ "ಎಂದು ಕರ್ತೃವಿನ ಹೆಸರಾಗಿದ್ದಿತು. ಆದರೆ ಇದೇ ಹೆಸರೆಂದು ನಿರ್ಧರಿಸುವುದು ಹೇಗೆ? ಅಲ್ಲದೆ, ಇಂಥ ಹೆಸರನ್ನು ಇಟ್ಟುಕೊಳ್ಳುವುದೂ ಅಸಂಭವವೇ. ಆದರೆ ಅದೇ ಹಸ್ತಪ್ರತಿಯ ಮತ್ತೊಂದು ಭಾಗದಲ್ಲಿ ಅದರ ಕರ್ತೃವು ತನ್ನ ನಾಮಧೇಯದ ಬಗ್ಗೆ ವಿವರಣೆ ನೀಡುತ್ತಾನೆ. ಅವನ ನಿಜವಾದ ನಾಮಧೇಯ "ರಾಮಲೋಚನ" ಎಂದು. ಹೀಗೆಯೇ "ರಾಮಚರಣ" ನೆಂಬುವನು "ರಘುಪತಿಪಾದ", "ಸೀತಾಪತಿಪಾದ" ಇತ್ಯಾದಿ ಒಂದೇ ಅರ್ಥದಲ್ಲಿ ನಾಲ್ಕಾರು ಹೆಸರುಗಳನ್ನು ಹೊಂದಿರುವುದು ಸಹಜ. ಹೀಗಿರುವಾಗ ನಿರ್ದಿಷ್ಟವಾಗಿ ಇಂಥವನೇ ಗ್ರಂಥದ ಕರ್ತೃವೆಂದು ಸಿದ್ಧಪಡಿಸುವುದು ಬಹು ಕಠಿಣ.

ಹಸ್ತಪ್ರತಿಯು ಯಾವ ಶಾಸ್ತ್ರಕ್ಕೆ ಸಂಬಂಧಿಸಿದುದು, ಯಾವ ವಿಷಯವನ್ನು ನಿರೂಪಿಸುವುದು ಮುಂತಾಗಿ ನಿರ್ಧರಿಸಿ ವಿವರಣೆಯಲ್ಲಿ ಸೂಚಿಸುವಾಗ, ವಿದ್ವಾಂಸರು ಕೇವಲ ಉದಾಸೀನಭಾವದಿಂದ ಹಸ್ತಪ್ರತಿಯ ಶೀರ್ಷಿಕೆಯ ಆಧಾರದ ಮೇಲೆ ವಿಷಯ

ವನ್ನು ನಿರ್ಧರಿಸಿ ಬಿಡುತ್ತಾರೆ. ಹೀಗೆ ನಾನಾ ರೀತಿಯ ಕಷ್ಟಗಳನ್ನು ಎದುರಿಸಿ, ಯಾವ ಪ್ರತಿಫಲವೂ ಇಲ್ಲದೆ ಈ ಕಾರ್ಯವನ್ನು ಸಾಧಿಸಲು ಬಹಳ ಜನ ವಿದ್ವಾಂಸರು ಹಿಂದೆಗೆಯುತ್ತಾರೆ. ಆದ್ದರಿಂದ ಪ್ರಾಚೀನ ಹಸ್ತಪ್ರತಿಗಳ ವಿವರಣಾತ್ಮಕ ಗ್ರಂಥಸೂಚಿಯನ್ನು ಪರಿಷ್ಕರಿಸುವಾಗ ಎದುರಾಗಬಹುದಾದ ವಿಘ್ನಗಳ ಪಟ್ಟಿಯೊಂದನ್ನು ಕೀಲ್‌ಹಾರ್ನ್‌ರವರು ೧೮೭೦ರಲ್ಲಿ ಪ್ರಕಟಿಸಿ, ವಿದ್ವಾಂಸರನ್ನು ಎಚ್ಚರಿಸಿದರು. ಅಲ್ಲಿಂದ ಇಂದಿಗೆ ನೂರು ವರ್ಷಗಳು ಕಳೆದರೂ ಇಂಥ ವಿಘ್ನಗಳನ್ನು ನಿವಾರಿಸುವ ಗೋಜಿಗೆ ಯಾವ ವಿದ್ವಾಂಸನೂ ಕೈಹಾಕಿಲ್ಲ.

೩. ಮೈಕ್ರೋಫಿಲ್ಮಿಂಗ್

ರಾಜಶೇಖರನು (ಕಿ ಶ. ೯೦೦) ತನ್ನ "ಕಾವ್ಯಮೀಮಾಂಸಾ" ಎಂಬ ಗ್ರಂಥದಲ್ಲಿ (ಗಾಯಕವಾಡಾ ಪ್ರಾಚ್ಯ ಗ್ರಂಥಮಾಲಾ ೫೩) "ಸಿದ್ಧಂಚ ಪ್ರಬಂಧಂ ಅನೇಕಾದರ್ಶಗತಂ ಕುರ್ಯಾತ್" ಎಂದು ಗ್ರಂಥ ಕರ್ತೃಗಳಿಗೆ ಸಲಹೆ ಮಾಡಿದ್ದಾನೆ. ಪ್ರಾಚೀನ ಕಾಲದಲ್ಲಿ ಮುದ್ರಣ ಕಲೆಯು ಅಸ್ತಿತ್ವಕ್ಕೆ ಬರುವ ಮೊದಲು, ಏಕಕಾಲದಲ್ಲಿ ಹೆಚ್ಚು ಪ್ರತಿಗಳನ್ನು ಸಿದ್ಧಗೊಳಿಸುವುದು ಸಾಧ್ಯವಿರಲಿಲ್ಲ. ಆದ್ದರಿಂದ ಒಬ್ಬ ಕರ್ತೃವು ತನ್ನ ಗ್ರಂಥವನ್ನು ಬರೆದು ಸಿದ್ಧ ಪಡಿಸಿದಮೇಲೆ, ಹೆಚ್ಚಿನ ಪ್ರತಿಗಳಿಗೆ ಅವಶ್ಯಕತೆ ಕಂಡುಬಂದಾಗ ಅದೇ ಗ್ರಂಥವನ್ನು ಪುನಃ ಪುನಃ ಬರೆಯಬೇಕಾಗಿದ್ದಿತು. ಬರೆದ ಗ್ರಂಥ ಕಳುವಾಗಬಹುದು, ಬೆಂಕಿಬಿದ್ದು ಬೂದಿಯಾಗ ಬಹುದು, ಅಥವಾ ಯಾವುದೇ ಅನಿರೀಕ್ಷಿತ ಘಟನೆಯಿಂದ ಬರೆದ ಗ್ರಂಥಕ್ಕೆ ಅಪಾಯ ಒದಗಬಹುದು, ಇದಾವುದೂ ಅಲ್ಲದಿದ್ದರೆ, ಒಂದು ಗ್ರಂಥವನ್ನು ಓದಿದ ಬಳಿಕ ಹೆಚ್ಚು ಜನರು ಅದನ್ನು ಕೊಳ್ಳಲು ಅಪೇಕ್ಷಿಸಬಹುದು. ರಾಜಮಹಾರಾಜ ಇತ್ಯಾದಿ ಪೋಷಕರು ಗ್ರಂಥವನ್ನು ಹೊಂದಲು ಬಯಸಬಹುದು. ಈ ಎಲ್ಲಾ ಕಾರಣಗಳಿಂದಲೂ ಗ್ರಂಥಕರ್ತೃವು ತನ್ನ ಕೃತಿಯನ್ನು ಪದೇ ಪದೇ ಬರೆಯುವ ಸಂದರ್ಭ ಒದಗುತ್ತಿತ್ತು. ಆದ್ದರಿಂದಲೇ ರಾಜಶೇಖರನು ಈವತ್ತಿಗೂ ಅನುಸರಿಸಬಹುದಾದ ಮೇಲಿನ ಸಲಹೆಯನ್ನು ಲೇಖಕರಿಗೆ ಕೊಟ್ಟಿದ್ದಾನೆ.

ಮುದ್ರಣ ಕಲೆಯು ಮುಂದುವರಿದ ಈ ಕಾಲದಲ್ಲೂ ಒಂದು ಗ್ರಂಥವನ್ನು ಪುನರ್ಮುದ್ರಣ ಮಾಡಬೇಕಾದರೆ ಹಣದ ವೆಚ್ಚದ

ಪ್ರಶ್ನೆಗಿಂತ ಅದಕ್ಕೆ ತಗಲುವ ಶ್ರಮ ಅಧಿಕವಾದದ್ದು. ಅಂದ ಮೇಲೆ ತಾಳಪತ್ರಾದಿ ಪ್ರಕೃತಿ ದತ್ತ ಬರವಣಿಗೆಯ ಸಾಧನದ ಮೇಲೆ ಒಂದೇ ಗ್ರಂಥವನ್ನು ಪದೇ ಪದೇ ಬರೆಯಬೇಕಾದರೆ ಕರ್ತೃವು ಪಡಬೇಕಾದ ಶ್ರಮ, ತೋರಬೇಕಾದ ಸಹನೆ, ಹೊಂದಿರ ಬೇಕಾದ ಉತ್ಸಾಹ ಇವುಗಳನ್ನು ವರ್ಣಿಸಲು ಸಾಧ್ಯವಿಲ್ಲ. ಸ್ವಯಂಪ್ರತಿಭೆಯಿಂದುಂಟಾದ ಅನೇಕ ವಿಷಯವಿಶೇಷಗಳನ್ನೊಳ ಗೊಂಡ ಗ್ರಂಥದ ಉಪಯುಕ್ತತೆ ಮತ್ತು ವಿದ್ಯಾ ವಿಷಯಗಳಿಗೆ ಸಲ್ಲಬೇಕಾದ ಗೌರವ ಇವುಗಳನ್ನು ಅಂತಃಕರಣಪೂರ್ವಕವಾಗಿ ಅರ್ಥಮಾಡಿಕೊಂಡಿದ್ದರಿಂದಲೇ ರಾಜಶೇಖರನು ಆ ಸಲಹೆಯನ್ನು ನೀಡಿದ್ದಾನೆಂದು ನಂಬಬಹುದು.

ನೂರಾರು ವರ್ಷಗಳು ಕಳೆದಮೇಲೆ ನಮಗೆ ಸಿಕ್ಕುವ ಪ್ರಾಚೀನ ಹಸ್ತಪ್ರತಿಗಳಲ್ಲಿ ಒಂದೇ ಹೆಸರಿನ ಹತ್ತಾರು ಪ್ರತಿ ಗಳಿವೆ. ಇವುಗಳನ್ನು ಪರಿಶೀಲಿಸುವಾಗ ನಮಗೆ 'ಇಷ್ಟನ್ನೂ ಒಬ್ಬನೇ ಬರೆದನೆ ?' ಎಂದು ಆಶ್ಚರ್ಯವಾಗುತ್ತದೆ. ಕೆಲವು ವೇಳೆ ಒಬ್ಬ ಕರ್ತೃವು ತನ್ನ ಗ್ರಂಥವನ್ನು ಬೇರೆಯವರಿಗೆ ಹೇಳಿ ಬರೆಸುವುದೂ ಉಂಟು. ಅದೇನೇ ಇರಲಿ, ಆಧುನಿಕ ಯುಗದಲ್ಲಿ ಪ್ರಾಚೀನ ಗ್ರಂಥಗಳನ್ನು ಪರಿಷ್ಕರಿಸಿ ಪ್ರಕಟಿಸುವಾಗ, ನಾವು ಸಿದ್ಧಗೊಳಿಸುವ ಆಖೈರು ಪ್ರತಿ ಯಾವ ಲೋಪ ದೋಷಗಳನ್ನೂ ಹೊಂದಿರಬಾರದು. ಪ್ರತಿಯೊಂದು ಪ್ರತಿಯನ್ನೂ ತುಲನೆಮಾಡಿ, ನಿರ್ಧರಿಸಿ, ಬೇಕಾದ ವಿಷಯವನ್ನು ಅಳವಡಿಸಿಕೊಂಡು ಸರ್ವ ಸಮರ್ಪಕವಾದ ಗ್ರಂಥವನ್ನು ಪ್ರಕಟಿಸುವುದು ಭಾರತೀಯ ಹಸ್ತ ಪ್ರತಿಗಳು ವಿಮರ್ಶಾತ್ಮಕ ಅಧ್ಯಯನದ ಗುರಿ. ಈ ದಿಕ್ಕಿನಲ್ಲಿ ಎಷ್ಟು ಸಾಧ್ಯವೋ ಅಷ್ಟು ಪ್ರಾಚೀನ ಹಸ್ತಪ್ರತಿಗಳನ್ನು ಸಂಗ್ರಹಿಸುವ

ಕಾರ್ಯ ನಮ್ಮ ದೇಶದಲ್ಲಿ ನಡೆಯುತ್ತಿದೆ. ಹೀಗೆ ಸಂಗ್ರಹವಾದ ಹಸ್ತಪ್ರತಿಗಳಲ್ಲಿ ಪ್ರಾಚೀನ ಶಾಸ್ತ್ರಗ್ರಂಥಗಳೂ, ವೈಜ್ಞಾನಿಕ ಗ್ರಂಥಗಳೂ, ಕಾವ್ಯ, ನಾಟಕ ಇತ್ಯಾದಿ ಗ್ರಂಥಗಳೂ ಒಳಗೊಂಡಿರುವುವು. ಇವುಗಳನ್ನು ಸಂಗ್ರಹಿಸಿ ರಕ್ಷಿಸುವ ಪ್ರಾಚ್ಯವಿದ್ಯಾ ಸಂಸ್ಥೆಗಳಲ್ಲೂ, ಸರ್ಕಾರದ ಹಸ್ತಪ್ರತಿಗಳ ಸಂಗ್ರಹಾಲಯಗಳಲ್ಲೂ ಹಸ್ತಪ್ರತಿಗಳನ್ನು ವಿಂಗಡಿಸಿ ಆಯಾ ಶಾಸ್ತ್ರವಿಭಾಗಗಳನ್ನೂ, ವೈಜ್ಞಾನಿಕ ವಿಭಾಗಗಳನ್ನೂ ಗೊತ್ತುಮಾಡಿ ಒಂದು ಪಟ್ಟಿಯನ್ನು (Catalogue) ತಯಾರಿಸುತ್ತಾರೆ. ಇದರಿಂದ ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದ ಹಸ್ತಪ್ರತಿಯು ಅವಶ್ಯಕವಾದಾಗ ಎಲ್ಲಿ ಸಿಕ್ಕಬಹುದೆಂಬುದು ತಿಳಿಯುತ್ತದೆ. ಇಷ್ಟೇ ಅಲ್ಲದೆ ಪ್ರತಿ ಹಸ್ತಪ್ರತಿಯ ವಿವರಣಾತ್ಮಕ ಪಟ್ಟಿಯನ್ನೂ ಸಿದ್ಧಪಡಿಸಿ, ಅದರಲ್ಲಿ ಒಳಗೊಂಡ ವಿಷಯ, ಕರ್ತೃವಿನ ಕಾಲ, ದೇಶ, ಇತ್ಯಾದಿಗಳನ್ನು ನಮೂದಿಸಿರುವುದರಿಂದ ವಿದ್ವಾಂಸರಿಗೆ ನಿರ್ದಿಷ್ಟವಾದ ಹಸ್ತಪ್ರತಿಯ ಬಗ್ಗೆ ಬೇಕಾದ ವಿವರಗಳು ಶ್ರಮವಿಲ್ಲದೆ ಉಪಲಬ್ಧವಾಗುತ್ತದೆ. ಇಷ್ಟು ಕ್ರಮಗಳನ್ನು ಅನುಸರಿಸಿದ ಮೇಲೆ ಪ್ರತಿ ಹಸ್ತಪ್ರತಿಯನ್ನೂ ಜಾಗರೂಕತೆಯಿಂದ ರಕ್ಷಿಸಬೇಕಾದದ್ದು ಅತ್ಯವಶ್ಯಕ. ತಾಳಪತ್ರಾದಿ ಪ್ರಾಚೀನ ಬರವಣಿಗೆಯ ಸಾಮಗ್ರಿಗಳು ಬಹಳ ಬೇಗ ನಶಿಸಿಹೋಗುತ್ತವೆ. ಪ್ರತಿದಿನವೂ ಇವುಗಳನ್ನು ಆವರಿಸುವ ಧೂಳಿನಿಂದ ಶುಚಿಮಾಡಿ ಅವುಗಳ ಶುಭ್ರತೆಗಾಗಿಯೇ ತಯಾರಾಗುವ ತೈಲದಿಂದ ಲೇಪನಮಾಡಿ ಕ್ರಿಮಿಕೀಟಗಳ ಕಾಟ ತಗಲದಂತೆ ಸಾಕಷ್ಟು ಗಾಳಿ-ಬೆಳಕು ಇರುವ ಬೀರುಗಳಲ್ಲಿ ಕ್ರಮವಾಗಿ ಶೇಖರಿಸುತ್ತಾರೆ. ಇಂಥ ಶೇಖರಣೆಯಲ್ಲಿ ವರ್ಷಾನುಗಟ್ಟಳೆ ಹಸ್ತಪ್ರತಿಗಳನ್ನು ಸಂರಕ್ಷಿಸುವುದರಿಂದ ಎಷ್ಟೇ ಜಾಗರೂಕತೆಯಿಂದಿದ್ದರೂ ಕೂಡ ಅವು ನಶಿಸಿಹೋಗುವ ಸಂಭವವುಂಟು.

ಇಡೀ ಹಸ್ತಪ್ರತಿಯು ಗ್ರಂಥವಲ್ಲದಿದ್ದರೂ ಆ ಗ್ರಂಥದ ಯಾವುದೇ ಭಾಗದ ಒಂದು ಪತ್ರ ಅಥವಾ ಒಂದು ಪತ್ರದ ಒಂದು ಭಾಗವು ನಾಶವಾದರೂ ಕೂಡ ಅಧ್ಯಯನ ಮಾಡುವವರಿಗೆ ಹೇರಳ ನಷ್ಟವುಂಟಾಗುತ್ತದೆ.

ಈ ಕಾರಣಗಳಿಂದಾಗಿ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹಾಲಯಗಳಲ್ಲಿ ಒಂದು ಗ್ರಂಥದಲ್ಲಿ ಒಂದೊಂದು ಪತ್ರವನ್ನೂ ವಿಂಗಡಿಸಿ ಅದರ ಅತಿ ಸೂಕ್ಷ್ಮವಾದ ಛಾಯಾಚಿತ್ರವನ್ನು ತೆಗೆಯುತ್ತಾರೆ. ಇದಕ್ಕೆ "ಮೈಕ್ರೋಫಿಲ್ಮಿಂಗ್" ಎಂದು ಹೆಸರು. ಒಂದು ಹಸ್ತಪ್ರತಿಯು ಎಷ್ಟೇ ದೊಡ್ಡ ಅಳತೆಯದಾಗಿದ್ದರೂ ಅದನ್ನು ನಿರ್ದಿಷ್ಟ ಅಳತೆಗೆ (ಸಾಮಾನ್ಯವಾಗಿ ೩೫ ಮಿಲಿಮೀಟರ್) ಸಂಕುಚಿಸಿ ಅದರ ಪ್ರತಿಕೃತಿಯನ್ನು ಸಿದ್ಧಗೊಳಿಸಬಹುದು. ಹೀಗೆ ಮಾಡುವುದರಿಂದ ಹಸ್ತಪ್ರತಿಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾವಣೆ ಮಾಡುವಾಗ ಯಾವ ತೊಂದರೆಯೂ ಇರುವುದಿಲ್ಲ. ಹಸ್ತಪ್ರತಿಯನ್ನು ಬೇರೊಂದು ಕಡೆಗೆ ಅಂಚೆಯ ಮೂಲಕವಾಗಲಿ ಅಥವಾ ಇತರ ವಿಧಾನಗಳಿಂದಾಗಲಿ ಸಾಗಿಸುವಾಗ ಸಂಭವಿಸಬಹುದಾದ ನಷ್ಟವನ್ನು ಮೈಕ್ರೋಫಿಲ್ಮ್ ನಿಂದ ತಪ್ಪಿಸಬಹುದು. ಅಲ್ಲದೆ ಹಸ್ತಪ್ರತಿಗಳ ಚಿತ್ರಗಳನ್ನೊಳಗೊಂಡ ಮೈಕ್ರೋಫಿಲ್ಮ್‌ಗಳನ್ನು ಶೇಖರಿಸಲು ಬೇಕಾದ ಸ್ಥಳ ಅತ್ಯಲ್ಪ. ಉದಾಹರಣೆಗೆ ಸಾಮಾನ್ಯ ಅಳತೆಯ ಒಂದು ಬೀರುವಿನಲ್ಲಿ ಕನಿಷ್ಠಪಕ್ಷ ೫೦ ಹಸ್ತಪ್ರತಿಗಳನ್ನು ಇಡಬಹುದು. ಆದರೆ ಮೇಜದ ಒಂದು ಡ್ರಾಯರಿನಲ್ಲಿ ಸುಮಾರು ೨೫೦-೩೦೦ ಹಸ್ತಪ್ರತಿಗಳ ಮೈಕ್ರೋಫಿಲ್ಮ್ ರೀಲುಗಳನ್ನು ಇಡಬಹುದು. ಅಂದರೆ, ಅಸಲು ಹಸ್ತಪ್ರತಿಗಳನ್ನು ಶೇಖರಿಸಲು ಬೇಕಾದ ಸ್ಥಳ

ವೈಶಾಲ್ಯವು ಮೈಕ್ರೋಫಿಲ್ಮ್ ರೀಲುಗಳನ್ನು ಶೇಖರಿಸಲು ಬೇಕಾಗುವುದಿಲ್ಲ. ಇವನ್ನು ಬೇಕಾದರೆ ಜೇಬಿನಲ್ಲಿ ಹಾಕಿಕೊಂಡು ಓಡಾಡಬಹುದು. ಎರಡನೆಯದಾಗಿ ಹಸ್ತಪ್ರತಿಯು ಮೈಕ್ರೋಫಿಲ್ಮ್ ಮಾಡುವುದರಿಂದ ಅತ್ಯಲ್ಪ ಕಾಲದಲ್ಲಿ ಬೇಕಾದಷ್ಟು ನಕಲುಗಳನ್ನೂ ತಯಾರಿಸಬಹುದು. ಯಾವುದಾದರೂ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ ಅಥವಾ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹಾಲಯದಲ್ಲಿ ನಮಗೆ ಬೇಕಾದ ಒಂದು ಹಸ್ತಪ್ರತಿಯ ನಕಲನ್ನು ಅಪೇಕ್ಷಿಸಿದರೆ ಅದನ್ನು ತಯಾರಿಸಿಕೊಡಲು ಶುಲ್ಕವನ್ನು ವಿಧಿಸುತ್ತಾರೆ. ಸಾಮಾನ್ಯವಾಗಿ ೧೦೦೦ ಗ್ರಂಥಗಳನ್ನು (ಇಲ್ಲಿ ಒಂದು ಗ್ರಂಥವೆಂದರೆ ೩೨ ಅಕ್ಷರಗಳು) ಕೈಬರವಣಿಗೆಯಲ್ಲಿ ನಕಲು ಮಾಡಿದರೆ ಸುಮಾರು ಐವತ್ತು ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಹೀಗೆ ನಕಲು ಮಾಡುವವರು ಕನ್ನಡ, ಆಂಧ್ರ, ಗ್ರಂಥ, ನಾಗರಿ, ಮೈಥಿಲಿ. ಮಲೆಯಾಳ ಮುಂತಾದ ಲಿಪಿಗಳನ್ನು ತಪ್ಪಿಲ್ಲದೆ ಓದಬಲ್ಲವರಾಗಿರುತ್ತಾರೆ. ಪ್ರತಿ ಅಕ್ಷರವನ್ನೂ ಬಹಳ ಜಾಗರೂಕತೆಯಿಂದ ಅದರ ಸಂಕೇತವನ್ನು ಹಿಡಿದು ಅರ್ಥಮಾಡಿ (decipher) ಅದರಂತೆ ನಕಲಿನಲ್ಲಿ ಬರೆಯುವುದು ಇವರಲ್ಲಿರುವ ಒಂದು ಸಾಮರ್ಥ್ಯ. ಇಂತಹ ಕಾಠಿಣ್ಯಗಳನ್ನು ಬಗೆಹರಿಸಿ ನಮಗೆ ಬೇಕಾದ ಹಸ್ತಪ್ರತಿಯ ಕರಾರುವಾಕ್ಕಾದ ನಕಲನ್ನು ಸಿದ್ಧಪಡಿಸುವಲ್ಲಿ ತಗಲುವ ಶ್ರಮ ಮತ್ತು ಉಪಕರಣಗಳಿಗಾಗಿ ಶುಲ್ಕವನ್ನೂ ತೆರಬೇಕಾಗುತ್ತದೆ. ಆದರೆ ಒಂದು ಹಸ್ತಪ್ರತಿಯನ್ನು ಮೈಕ್ರೋಫಿಲ್ಮ್ ಮಾಡಿಬಿಟ್ಟರೆ, ಈ ಶ್ರಮವು ತಪ್ಪಿ ಕಡಿಮೆ ವೆಚ್ಚದಲ್ಲಿ ಬೇಕಾದ ಸಂಖ್ಯೆಯಲ್ಲಿ ನಕಲುಗಳನ್ನು ಸಿದ್ಧಪಡಿಸಿಕೊಳ್ಳಬಹುದು. ಒಂದು ವೇಳೆ ಮೂಲ ಹಸ್ತಪ್ರತಿಯು ಅನಿರೀಕ್ಷಿತ ಘಟನೆಗಳಿಂದ ನಾಶವಾದರೆ ಅದರ ಪ್ರತಿಯು ಮೈಕ್ರೋಫಿಲ್ಮ್ ರೂಪದಲ್ಲಿ ಭದ್ರವಾಗಿರುವುದರಿಂದ ವ್ಯಥೆಪಡಬೇಕಾಗಿಲ್ಲ.

ಹೀಗೆ ಹಸ್ತಪ್ರತಿಗಳನ್ನು ಮೈಕ್ರೋಫಿಲ್ಮ್ ಮಾಡಿದಮೇಲೆ ಅವುಗಳ ಲಿಪಿಗಳನ್ನು ಯಾವ ಸಾಧನವೂ ಇಲ್ಲದೆ ಓದುವುದು ಕಠಿಣವಾಗುತ್ತದೆ. ಏಕೆಂದರೆ ಹಸ್ತಪ್ರತಿಯು ಸ್ವಾಭಾವಿಕ ಅಳತೆಯನ್ನು ೩೫ಮಿಲಿಮೀಟರ್ ಅಳತೆಗೆ ಕುಗ್ಗಿಸಿದಾಗ ಅದರಲ್ಲಿರುವ ಲಿಪಿಗಳೂ ಬಹುತೇಕ, ಅಂದರೆ ಸಾಸಿವೆಕಾಳಿಗಿಂತ ಚಿಕ್ಕದಾಗುವುವು. ಆದರೂ ಸ್ಪಷ್ಟವಾಗಿರುವುವು. ಅವುಗಳನ್ನು ಓದುವುದಕ್ಕೂ ಬೇರೆ ಸಾಧನವಿದೆ. ಅದಕ್ಕೆ "ಮೈಕ್ರೋಫಿಲ್ಮ್ ರೀಡರ್" ಎಂದು ಹೆಸರು ಇದು ಸಾಮಾನ್ಯವಾಗಿ ಕಾರ್ಯನಿರ್ವಹಣೆಯಲ್ಲಿ ಸಿನೇಮಾ ಪ್ರೊಜೆಕ್ಟರನ್ನು ಹೋಲುವುದು. ಫಿಲ್ಮನ್ನು ಇದರ ಗೊತ್ತಾದ ಭಾಗಕ್ಕೆ ಜೋಡಿಸಿದರೆ, ಅದಕ್ಕೆ ಅಳವಡಿಸಿರುವ ಭೂತಕನ್ನಡಿಯ ಮುಖೇನ ವಿದ್ಯುದ್ದೀಪದ ಸಹಾಯದಿಂದ ಒಂದು ಪ್ಲಾಸ್ಟಿಕ್ ತೆರೆಯಮೇಲೆ ಫಿಲ್ಮಿನ ಛಾಯೆಯು ಬೀಳುತ್ತದೆ. ಆದರ ಮೇಲೆ ಅಕ್ಷರಗಳು ದೊಡ್ಡದಾಗಿ ಬೀಳುವುದರಿಂದ ಶ್ರಮವಿಲ್ಲದೆ ಲಿಪಿಗಳನ್ನು ಓದಬಹುದು.

ಮೈಕ್ರೋಫಿಲ್ಮ್‌ಗೆ ಉಪಯೋಗಿಸುವುದಕ್ಕಾಗಿಯೇ ವಿಶೇಷ ರೀತಿಯ ಫಿಲ್ಮ್‌ಗಳನ್ನು ತಯಾರಿಸುತ್ತಾರೆ. ಸಾಧಾರಣವಾಗಿ ನಾವು ಛಾಯಾಚಿತ್ರವನ್ನು ತೆಗೆಯಲು ಉಪಯೋಗಿಸುವ ಫಿಲ್ಮ್‌ನಿಂದ ಈ ಕಾರ್ಯವಾಗುವುದಿಲ್ಲ. ಇವುಗಳಲ್ಲಿ **Slow, Panchromatic** ಮತ್ತು **Fine grain** ಎಂಬ ಮೂರು ವಿಧವಾದ ಫಿಲ್ಮ್‌ಗಳು ಉಪಯೋಗದಲ್ಲಿವೆ. ಹಸ್ತಪ್ರತಿಯನ್ನು ಚಿತ್ರಿಸುವುದಕ್ಕೆ ಮಾತ್ರ ೩೫ಮಿಲಿಮೀಟರ್‌ನ ಯಾವುದೇ ಕ್ಯಾಮರಾವನ್ನು ಉಪಯೋಗಿಸಬಹುದು. **"Leitz Reprovit II"** ಎಂಬ ಉಪಕರಣವನ್ನು ಮೈಕ್ರೋಫಿಲ್ಮ್‌ಗಾಗಿ ಉಪಯೋಗಿಸುತ್ತಾರೆ. "ಮೈಕ್ರೋಫಿಲ್ಮ್ ಸ್ಕ್ಯಾನರ್ ಎಂಬ" ಜೇಬಿನಲ್ಲಿ ಸಾಗಿಸಬಹುದಾದ

ಉಪಕರಣವು ಪಾಶ್ಚಾತ್ಯ ದೇಶಗಳಲ್ಲಿ ಬಳಕೆಗೆ ಬಂದಿದೆ. ಎಲ್ಲಿಂದ ರಲ್ಲಿ ಬೇಕಾದ ಯಾವುದೇ ಬರವಣಿಗೆಯನ್ನು ನಿಮಿಷ ಮಾತ್ರದಲ್ಲಿ ಇದರ ಸಹಾಯದಿಂದ ಓದಬಹುದು.

ಹೀಗೆ ಸರಿಯಾದ ಆರೈಕೆಯಿದ್ದರೂ ಪ್ರಕೃತಿ ವಿಶೇಷದಿಂದ ನಶಿಸಿಹೋಗಬಹುದಾದ ಬಹು ಪುರಾತನ ಹಸ್ತಪ್ರತಿಗಳನ್ನು ಛಾಯಾಚಿತ್ರ ರೂಪದಲ್ಲಿ ಸಂರಕ್ಷಿಸುವುದು ಆಧುನಿಕ ಯುಗದ ಒಂದು ಕೊಡುಗೆ. ಹಸ್ತಪ್ರತಿಗಳ ಸಂರಕ್ಷಣೆಯಲ್ಲಿ ಪಡಬೇಕಾದ ಶ್ರಮ, ತೋರಬೇಕಾದ ಜಾಗರೂಕತೆ, ಮೈಕ್ರೋಫಿಲ್ಮ್ ಕಾರ್ಯ ದಿಂದ ಬಹಳ ಮಟ್ಟಿಗೆ ಸುಧಾರಿಸುತ್ತದೆ. ಈ ಕಲೆಯಲ್ಲಿ ಪರಿಣತ ರಾದ ಛಾಯಾಚಿತ್ರಕಾರರು ನಮ್ಮಲ್ಲಿ ಕೆಲವರು ಮಾತ್ರ ದೊರೆ ಯುತ್ತಾರೆ. ಈ ಕೆಲಸದಿಂದ ಅವರಿಗೆ ಯಾವ ಭಾಗ್ಯವೂ ಬರದೇ ಹೋದರೂ ಅವರು ಮಾಡುವ ಅತಿ ಉಪಯುಕ್ತವಾದ ಈ ಕಾರ್ಯ ಪ್ರಾಚೀನ ಹಸ್ತಪ್ರತಿಗಳ ಸಂರಕ್ಷಣೆಯಲ್ಲಿ ಮಹತ್ವ ವಾದದ್ದು.

೪. ವೈಜ್ಞಾನಿಕ ವಿಷಯಗಳ ಹಸ್ತಪ್ರತಿಗಳು

"ಚಾರುಚರ್ಯ" ಎಂಬ ಹಸ್ತಪ್ರತಿಯಲ್ಲಿ ಮುಂಜಾನೆ ಏಳುವುದರಿಂದ ಹಿಡಿದು ರಾತ್ರಿ ಮಲಗುವ ತನಕ ಅನುಸರಿಸಬೇಕಾದ ವಿಧಿ ನಿಯಮಗಳನ್ನು ಪ್ರತಿಪಾದಿಸಲಾಗಿದೆ. ಮದರಾಸಿನಲ್ಲಿ ಸಂರಕ್ಷಿಸಿರುವ ಈ ಹೆಸರಿನ ಹಸ್ತಪ್ರತಿಯಲ್ಲಿ ಮೇಲೆ ಹೇಳಿದ ವೈದ್ಯ ವಿಜ್ಞಾನಕ್ಕೆ ಸಂಬಂಧಿಸಿದ ೧೩೬ ಶ್ಲೋಕಗಳಿವೆ. ಮುಕ್ಕ್ಯಾಲದ ಹಸ್ತಪ್ರತಿಯಲ್ಲಿ ಸುಮಾರು ೪೦೪ ಮತ್ತು ಹೈದರಾಬಾದಿನ ಸಂಸ್ಕೃತ ಅಕ್ಯಾಡೆಮಿಯ ಹಸ್ತಪ್ರತಿಯಲ್ಲಿ ಸುಮಾರು ೫೦೦ ಶ್ಲೋಕಗಳಿವೆ. ಈ ಹಸ್ತಪ್ರತಿಯು ಕ್ರಿ.ಶ. ಹನ್ನೊಂದನೇ ಶತಮಾನದ ಪರಮಾರವಂಶದ ಭೋಜರಾಜನಿಂದ ಬರೆಯಲ್ಪಟ್ಟುದಾಗಿದೆ.

ಕರ್ಮವಿಪಾಕಕ್ಕೆ ಸಂಬಂಧಿಸಿದ "ಮಹಾರ್ಣವ"ವೆಂಬ ೧೩ ೧/೨" × ೧ ೧/೪" ಅಳತೆಯ ತಾಳಪತ್ರದ ಮೇಲೆ ಆಂಧ್ರ (ತೆಲುಗು) ಲಿಪಿಯಲ್ಲಿ ಬರೆದಿರುವ ಸಂಸ್ಕೃತ ಹಸ್ತಪ್ರತಿಯಲ್ಲಿ ಪೂರ್ವಜನ್ಮದ ಪಾಪಕಾರ್ಯಗಳಿಂದ ರೋಗಾದಿಗಳು ಉಂಟಾಗುವುವೆಂದೂ, ಅವುಗಳ ನಿವಾರಣೆಯು ಸತತ ಮಂತ್ರೋಚ್ಚಾರಣೆಯಿಂದಲೂ, ಬ್ರಾಹ್ಮಣರಿಗೆ ದಾನಾದಿಗಳನ್ನು ಮಾಡುವುದರಿಂದಲೂ, ಮತ್ತು ವ್ರತಾದಿನಿಯಮಗಳನ್ನು ಪಾಲಿಸುವುದರಿಂದಲೂ, ಸಾಧ್ಯವೆಂದೂ, ಅದೇ ವಿಧಿಯೆಂದೂ ಹೇಳಲಾಗಿದೆ. ಬಹುತೇಕ ರೋಗರುಜಿನಾದಿಗಳನ್ನು ಪ್ರತಿಮಾದಾನದಿಂದ ಪರಿಹರಿಸಬಹುದಾಗಿಯೂ ಉಲ್ಲೇಖಿಸಿದೆ. ಈ ಹಸ್ತಪ್ರತಿಯಲ್ಲಿ "ಮಾಂಧಾತೃವಿನ ಮಹಾರ್ಣವ"ವೆಂದು ವಿವರಣೆ ಇದ್ದರೂ ಅದೇ ಹಸ್ತಪ್ರತಿಯ ಕೊನೆಯ ಭಾಗದಲ್ಲಿ (ಕೋಲೋಫೋನ್)

ವಿಶ್ವೇಶ್ವರಭಟ್ಟನೆಂಬುವನು ಕರ್ತೃವೆಂದು ಹೇಳಿದೆ. ಮಧ್ಯ ಯುಗದಲ್ಲಿ ಧರ್ಮ ಕರ್ಮಗಳೆರಡೂ ವೈದ್ಯಶಾಸ್ತ್ರದಲ್ಲಿ ಅಳವಡಿಸುವ ಪದ್ಧತಿಗೆ ಈ ಮಹಾರ್ಣವವೆಂಬ ಗ್ರಂಥವೂ ಒಂದು ನಿದರ್ಶನ. ಮದರಾಸು ಸರ್ಕಾರದ ಹಸ್ತಪ್ರತಿಗಳ ಕೋಶಾಗಾರದಲ್ಲಿ ಈ ಹಸ್ತಪ್ರತಿಯ ಎಂಟು ಪ್ರತಿಗಳು ದೊರೆಯುತ್ತವೆ.

ವಾಗ್ಭಟನೆಂಬುವನು "ಅಷ್ಟಾಂಗಸಂಗ್ರಹ" ಮತ್ತು "ಅಷ್ಟಾಂಗಹೃದಯ"ವೆಂಬ ವೈದ್ಯಕೀಯ ಗ್ರಂಥಗಳನ್ನು ರಚಿಸಿದ್ದಾನೆ. ಈ ಗ್ರಂಥಗಳು ಕ್ರಿ.ಶ. ಸುಮಾರು ಆರು ಮತ್ತು ಏಳನೇ ಶತಮಾನಗಳಿಗೆ ಸೇರಿದ್ದಾಗಿವೆ.

ತಂಜಾವೂರಿನ ಅರಮನೆಯ ಹಸ್ತಪ್ರತಿಗಳ ಕೋಶಾಗಾರದಲ್ಲಿ ತಾಳಪತ್ರದಮೇಲೆ ತೆಲುಗು ಲಿಪಿಯಲ್ಲಿ ಬರೆದ "ಭೇಲಸಂಹಿತಾ" ಎಂಬ ಸಂಸ್ಕೃತ ಹಸ್ತಪ್ರತಿಯನ್ನು ಸಂರಕ್ಷಿಸಲಾಗಿದೆ. ಇದು ಆಯುರ್ವೇದದ ಆರು ಸಂಹಿತೆಗಳಲ್ಲಿ ಒಂದೆಂದು ಚರಕನ ಅಭಿಪ್ರಾಯ. ಪುರಾತನವೂ, ಉಪಯುಕ್ತವೂ ಆದ ಈ ಹಸ್ತಪ್ರತಿಯನ್ನು ಕ್ರಿ.ಶ. ೧೬೫೦ರಲ್ಲಿ ಸ್ಫುಟವಾಗಿ ಬರೆಯಲಾಗಿದೆ. ಈ ಹಸ್ತಪ್ರತಿಯಲ್ಲಿ ನಿದಾನಸ್ಥಾನ, ವಿಮಾನಸ್ಥಾನ, ಶರೀರಸ್ಥಾನ, ಇಂದ್ರಿಯಸ್ಥಾನ, ಚಿಕಿತ್ಸಾಸ್ಥಾನ ಮತ್ತು ಕಲ್ಪಸ್ಥಾನಗಳೆಂಬ ಆರು ಭಾಗಗಳಿವೆ. ವಾಗ್ಭಟನು ಈ ಗ್ರಂಥದಿಂದ ಉಪಯೋಗ ಪಡೆದುಕೊಂಡನೆಂದು ಪ್ರತೀತಿ. ಈ ಗ್ರಂಥವು ಪಂಜಾಬ್ ಪ್ರಾಂತ್ಯದಲ್ಲಿದ್ದ ಆತ್ರೇಯಮಹರ್ಷಿಯ ಆರು ಜನ ಶಿಶ್ಯರಲ್ಲೊಬ್ಬನಾದ ಭೇಲನಿಂದ ರಚಿತವಾಗಿದೆ. ಈ ಗ್ರಂಥದಲ್ಲಿ ಚರಕಸಂಹಿತೆಯಲ್ಲಿ ಅಥವಾ ಪ್ರಾಚೀನ ಭಾರತದ ವೈದ್ಯಶಾಸ್ತ್ರದ ಯಾವುದೇ ಗ್ರಂಥಗಳಲ್ಲಿ ಕಾಣಲಾಗದ ವೈದ್ಯಕೀಯ ವಿಷಯುಗಳು ಪ್ರತಿಪಾದಿತ

ವಾಗಿವೆ. ಆಲೋಚಕಪಿತ್ತ ಮತ್ತು ಚಕ್ಷುರ್ವೈಶೇಷಿಕವೆಂಬ ಅದರ ಭಾಗಗಳಲ್ಲಿ, ಭೋಜನಕ್ಕೆ ಮೊದಲು ಮತ್ತು ಅನಂತರ ವಿಧಿಸುವ ಆಮಲಕಿ ಮತ್ತು ಹರೀತಕಿ ಹಾಗೂ ಆಹಾರ ಜೀರ್ಣವಾದ ನಂತರ ವಿಧಿಸುವ ವಿಭೀತಕಿ, ಜಠರಾಗ್ನಿಯ ಪ್ರಮಾಣ ಮುಂತಾದವು ವಿವರಿಸಲ್ಪಟ್ಟಿವೆ. ನಮ್ಮ ದೇಶದ ನಾನಾ ಭಾಗಗಳಲ್ಲಿ ಪ್ರಕೃತಿನಿಯಮಕ್ಕನುಸಾರವಾಗಿಯೋ ಅಥವಾ ಆಹಾರವಿರೋಧದಿಂದಲೋ ಜನಗಳಲ್ಲಿ ತಲೆದೋರುವ ರೋಗಗಳ ಪಟ್ಟಿಯನ್ನೂ ಈ ಗ್ರಂಥದಲ್ಲಿ ಸೇರಿಸಲಾಗಿದೆ.

ಮಾನವನ ಜ್ಞಾನದೀವಿಗೆಯು ಭಾರತ, ಪರ್ಷಿಯಾ ಮತ್ತು ಈಜಿಪ್ಟ್ ದೇಶಗಳ ಮೂಲಕ ಗ್ರೀಸ್ ದೇಶದಲ್ಲಿ ಬೆಳಗಿತು ಎಂದು ಪ್ರಸಿದ್ಧ ಗ್ರೀಕ್ ಇತಿಹಾಸಕಾರ ಹಿರೋಡಾಟಸ್ ಅಭಿಪ್ರಾಯಪಡುತ್ತಾನೆ. ನಿಜಕ್ಕೂ ಗ್ರೀಸಿನ ವೈದ್ಯವಿಜ್ಞಾನದಲ್ಲಿ ಭಾರತೀಯ ವಿಚಾರಧಾರೆಯ ಪ್ರಭಾವವು ಬಹುಮಟ್ಟಿಗೆ ಉಂಟಾಗಿದೆಯೆಂದು ಹೇಳಬಹುದು. ಕ್ರಿ. ಶ. ಹದಿನಾರನೇ ಶತಮಾನದಿಂದೀಚೆಗೆ ಆಧುನಿಕ ವೈದ್ಯಶಾಸ್ತ್ರ ಮತ್ತು ಶಸ್ತ್ರಚಿಕಿತ್ಸೆಗಳಲ್ಲಿ ಬಹುತೇಕ ಅಭಿವೃದ್ಧಿಯಾಗಿದೆ.

"ರಾಮಚಂದ್ರಿಕಾ" ಎಂಬುದು ಕೈಯಿಂದ ತಯಾರಾದ ಹಳೇ ಕಾಗದದ ಹಸ್ತಪ್ರತಿ. ೯" × ೪ ೧/೨" ಅಳತೆಯುಳ್ಳ ಈ ಹಸ್ತಪ್ರತಿಯಲ್ಲಿ ಸಂಸ್ಕೃತ ಭಾಷೆಯಲ್ಲಿ, ದೇವನಾಗರೀ ಲಿಪಿಯಲ್ಲಿ ಬರೆದ ೧೪೦ ಹಾಳೆಗಳಿವೆ. ಇದು ಅಸಮಗ್ರವಾದರೂ ಇದರಲ್ಲಿ ಸುಮಾರು ೬೦ ರೋಗಗಳ ಕಾರಣ, ಕುರುಹು, ಲಕ್ಷಣ ಮತ್ತು ಅವುಗಳ ಚಿಕಿತ್ಸಾವಿಧಾನಗಳನ್ನು ವಿವರಿಸಲಾಗಿದೆ. ಇದರಲ್ಲೂ ಸಹ ಜ್ವರಾದಿ ದೈಹಿಕ ವೈಪರೀತ್ಯಗಳು ಜನ್ಮಾಂತರದ ಕರ್ಮಕ್ಕನು

ಸಾರವಾಗಿ ಅನುಭವಿಸಲ್ಪಡುತ್ತವೆಂದು ಹೇಳಿದೆ. ಇವುಗಳ ನಿವಾರಣೋಪಾಯುಗಳನ್ನೂ ಪ್ರತಿಪಾದಿಸಲಾಗಿದೆ. ಅಷ್ಟೇ ಅಲ್ಲದೆ, ಈ ಗ್ರಂಥದಲ್ಲಿ ಹತ್ತು ವಿಧವಾದ ಅತಿಸಾರವನ್ನು ವಿವರಿಸಲಾಗಿದೆ. ಈ ಹಸ್ತಪ್ರತಿಯು ಸುಮಾರು ಕ್ರಿ.ಶ. ೧೯ನೇ ಶತಮಾನಕ್ಕೆ ಸೇರಿದ್ದೆಂದೂ ತಿಳಿದುಬರುತ್ತದೆ.

"ದ್ರ ವ್ಯ ರ ತ್ನಾ ವ ಳೀ" ಎಂಬ ಮತ್ತೊಂದು ಕಾಗದದ ಹಸ್ತಪ್ರತಿಯು ಸಂಸ್ಕೃತ ಭಾಷೆಯಲ್ಲಿ ತೆಲುಗು ಲಿಪಿಯಲ್ಲಿ ಬರೆದಿರುವ ೧೦" × ೬ ೧/೨" ಅಳತೆಯುಳ್ಳ ಉಪಯುಕ್ತ ಗ್ರಂಥ ವಾಗಿದೆ. ಇದರಲ್ಲಿ ಸುಮಾರು ೧೪೨ ಹಾಳೆಗಳಿವೆ. ಈ ಗ್ರಂಥದಲ್ಲಿ ಆರೋಗ್ಯ ದೃಷ್ಟಿಯಿಂದ ದಿನಬಳಕೆಯ ವಸ್ತುಗಳಾದ ತರಕಾರಿ, ಬೇಳೆಕಾಳುಗಳು, ಹಣ್ಣು. ಹಾಲು, ಮೊಸರು, ಮೀನು-ಮಾಂಸಾ ದಿಗಳ ವಿಶ್ಲೇಷಣೆಯಿದೆ. ಒಟ್ಟಿನಲ್ಲಿ ಈ ಗ್ರಂಥವು ಆಧುನಿಕ "ಮೆಟೀರಿಯ ಮೆಡಿಕ"ವನ್ನು ಹೋಲುವುದು. ಈ ಹಸ್ತ ಪ್ರತಿಯು ಕ್ರಿ.ಶ. ಸುಮಾರು ೧೮ನೇ ಶತಮಾನಕ್ಕೂ ಹಿಂದಿನ ದೆಂದು ನಿರ್ಧರಿಸಲಾಗಿದೆ.

"ಆಯುರ್ವೇದಾಭಿಸಾರ"ವೆಂಬ ದೇವನಾಗರೀ ಲಿಪಿಯಲ್ಲಿ ಬರೆದ ೬೧೭ ಹಾಳೆಗಳುಳ್ಳ ಕಾಗದದ ಹಸ್ತಪ್ರತಿಯಲ್ಲಿ ಪ್ರಾಚೀನ ಮತ್ತು ಮಧ್ಯಯುಗದ ಗ್ರಂಥಗಳಿಂದ ವಿಷಯುಗಳನ್ನು ಸಂಗ್ರಹಿ ಸಲಾಗಿದೆ. ಇದರಲ್ಲಿ ಚರಕ, ಸುಶ್ರುತ, ವಾಗ್ಭಟ, ಹಾರೀತ, ಗಯಾದಾಸ ಮತ್ತು ಜೆಜ್ಜಟ ಇವರುಗಳನ್ನು ಉದಾಹರಿಸಲಾಗಿದೆ. ಈ ಗ್ರಂಥದಲ್ಲಿ ಪಂಚನಿದಾನಲಕ್ಷಣ, ಇಡೀ ಶರೀರವನ್ನು ಆವರಿ ಸುವ ರೋಗಗಳು, ವಿಶೇಷ ಅಂಗಾಂಗಗಳಿಗೆ ತಗಲುವ ರೋಗಗಳು,

ಸ್ತ್ರೀಯರ ಮತ್ತು ಮಕ್ಕಳ ಸಂಬಂಧವಾದ ರೋಗಗಳು, ವಾಜೀಕರಣ, ರಸಾಯನ ಮತ್ತು ವೈದ್ಯವಿಜ್ಞಾನದ ವಿಷಯವಾಗಿ ಪ್ರಸ್ತಾಪಿಸಲಾಗಿದೆ.

ಖಗೋಳ ಮತ್ತು ಗಣಿತಶಾಸ್ತ್ರ ನೈಪುಣ್ಯತೆಯಲ್ಲಿ ಜಗದ್ವಿಖ್ಯಾತರಾದ ಟೈಕೋ, ಬರ್ಹೆ, ಕಾರ್ಡನ್ ಮತ್ತು ಫರ್ಮ್ಯಾಟ್ ಎಂಬುವರಿಗಿಂತ ಭಾರತೀಯರು ಅಗ್ರಸ್ಥಾನವನ್ನು ಹೊಂದಿದ್ದರೇ ಹೊರತು ಕಡಿಮೆಯಾದವರಾಗಿರಲಿಲ್ಲ ಎಂದು ಬ್ರಜೇಂದ್ರನಾಥ್ ಸೀಲ್‌ರವರು ಅಭಿಪ್ರಾಯ ಪಟ್ಟಿದ್ದಾರೆ. ಹಾಗೆಯೇ ಭಾರತೀಯ ಶರೀರಶಾಸ್ತ್ರವು ಪ್ರಖ್ಯಾತನಾಮನಾದ ವೆಸಾಲಿಯಸ್‌ನ ಶರೀರ ಶಾಸ್ತ್ರಕ್ಕೆ ಸಮನಾಗಿದ್ದಿತಲ್ಲದೆ, ನ್ಯಾಯಶಾಸ್ತ್ರವು ರಾಮಸ್ ಎಂಬುವನ ಶಾಸ್ತ್ರವನ್ನು ಮೀರಿಸಿ ಬೇಕನ್ನನ ನ್ಯಾಯಶಾಸ್ತ್ರಕ್ಕೆ ಸಮನಾಗಿದ್ದಿತು. ಭೌತಿಕ ಮತ್ತು ರಸಾಯನಶಾಸ್ತ್ರತತ್ವ ಕೋವಿದರೆಂದು ಹೆಸರುಗೊಂಡಿರುವ ವಾನ್ ಹೆಲ್ಮಾಂಟ್ ಅಥವಾ ಸ್ಟಹಲ್‌ರಿಗಿಂತಲೂ ಮುಂಚೆ ಭಾರತೀಯರು ಅಗ್ನ್ಯುತ್ಪತ್ತಿ, ಉಷ್ಣ ಮತ್ತು ರಸಾಯನ ಸಂಬಂಧವಾದ ವಿಷಯಗಳನ್ನು ತೊಡಕಿಲ್ಲದೆ ಸೂಕ್ಷ್ಮವಾಗಿ ಗ್ರಹಿಸಲು ಸಾಧ್ಯವಾಗುವಂತೆ ಬರೆದಿಟ್ಟಿದ್ದರು.

ಪ್ರಾಚೀನ ಭಾರತದಲ್ಲಿ ದಶಮಾಂಶ ವರ್ತನದ (ಡೆಸಿಮಲ್ ನೊಟೇಷನ್) ಸಹಾಯವಿಲ್ಲದೆ ಗಣಿತ ಭಾಗವು ಬಹು ಕಷ್ಟವಾಗಿದ್ದಿತು. ಇದನ್ನು ಮೊದಲು ಕಂಡುಹಿಡಿದ ಭಾರತೀಯರಿಂದ ಅರಬ್ಬೀಯರು ಕಲಿತು ನಂತರ ಯೂರೋಪಿಯನ್ನರಿಗೆ ಪರಿಚಯವಾಯಿತು. ಭಾರತೀಯ ಗಣಿತಶಾಸ್ತ್ರವು ಜ್ಯೋತಿಷ್ಯ ಶಾಸ್ತ್ರದೊಂದಿಗೆ ಅಭ್ಯಾಸ ಮಾಡಲ್ಪಡುತ್ತಿತ್ತೆಂದು ತಿಳಿದು ಬರುತ್ತದೆ. ಯಜ್ಞ ಯಾಗಾದಿಗಳಿಗೆ ಅಗ್ನಿಕುಂಡದ ನಿರ್ಮಾಣದಲ್ಲಿ ರೇಖಾ

ಗಣಿತದ (ಜ್ಯಾಮಿಟ್ರಿ) ಆವಶ್ಯಕತೆಯೂ, ಯಜ್ಞವನ್ನು ಪ್ರಾರಂಭಿಸ ಬೇಕಾದ ಕಾಲ ನಿರ್ಣಯದಲ್ಲಿ ಅಂಕಗಣಿತದ (ಅರ್ತ್ಮಿಟಿಕ್) ಆವಶ್ಯಕತೆಯೂ ಹೆಚ್ಚಾಗಿದ್ದಿತು. ಜ್ಯೋತಿಷ್ಯಶಾಸ್ತ್ರದ ಅಧ್ಯಯನ ದಲ್ಲಿ ವ್ಯಕ್ತ ಮತ್ತು ಅವ್ಯಕ್ತವೆಂಬ ಎರಡು ವಿಧವಾದ ಗಣಿತವು ಉಪಯೋಗದಲ್ಲಿತ್ತು. ಕಾಲಕ್ರಮೇಣ ಗಣಿತವೇ ಒಂದು ಪ್ರಮುಖವೂ, ಸ್ವತಂತ್ರವೂ ಆದ ಶಾಸ್ತ್ರವಾಗಿ ಪರಿಣಮಿಸಿತು.

ಭಾಸ್ಕರಾಚಾರ್ಯನ "ಲೀಲಾವತೀ" ಎಂಬ ಗ್ರಂಥದಿಂದ ಸಂಖ್ಯೆಗಳ ಸಂಕಲನ (ಸಮ್ಮೇಷನ್ ಆಫ್ ನಂಬರ್ಸ್), ಗುಣಲಬ್ಧ (ಸ್ಕ್ವೇರ್) ಮತ್ತು ಘನಲಬ್ಧ (ಕ್ಯೂಬ್) ವಿಧಾನಗಳು ಹತ್ತನೇ ಶತಮಾನಕ್ಕೆ ಮುಂಚೆಯೇ ಭಾರತೀಯರಿಗೆ ತಿಳಿದಿದ್ದವೆಂದು ಮನ ವರಿಕೆಯಾಗುತ್ತದೆ. ಉದಯದಿವಾಕರನೆಂಬುವನು ಜಯದೇವ ನೆಂಬುವನಿಂದ ರಚಿತವಾದುವೆಂದು ಊಹಿಸಲಾದ ಕೆಲವು ಶ್ಲೋಕ ಗಳನ್ನು ಉದ್ಧರಿಸಿದ್ದಾನೆ. ಆ ಶ್ಲೋಕಗಳಲ್ಲಿ ನಿರ್ದಿಷ್ಟ ಮೂಲ್ಯ ವಿಲ್ಲದ $Nx^2+1=y^2$ ನಮೂನೆಯ ಸಮೀಕರಣಗಳನ್ನು ಬಗೆಹರಿಸುವ (ಸಾಲ್ವ್) ವಿಧಾನವನ್ನು ವಿವರಿಸಲಾಗಿದೆ. ಕ್ರಿ.ಶ. ೧೪ನೇ ಶತಮಾನದಲ್ಲಿದ್ದ ಮಾಧವನೆಂಬ ಪ್ರಸಿದ್ಧನಾದ ಗಣಿತ ಮತ್ತು ಖಗೋಳ ವೈಜ್ಞಾನಿಕನ ವಿಷಯವಾಗಿ "ಗೋಳದೀಪಿಕಾ" ಎಂಬ ಗ್ರಂಥದಲ್ಲಿ ಉಲ್ಲೇಖವಿದೆ. ಮಾಧವನು ಬರೆದ "ವೇಣ್ವಾರೋಹ" ಎಂಬ ಗ್ರಂಥದಲ್ಲಿ ಸೂರ್ಯನ ನಿಖರಸ್ಥಾನದ ಪ್ರಾಥಮಿಕ ಮಿತಿಯ ಲೆಕ್ಕಾಚಾರಕ್ಕೆ ಸಹಾಯವಾಗುವಂತೆ ಕ್ರಿ.ಶ. ೧೪೦೦ಕ್ಕೆ ಸರಿಸಮನಾದ ಒಂದು ದಿನವನ್ನು ಗೊತ್ತುಪಡಿಸಿದ್ದಾನೆ. ಅದೇ ಗ್ರಂಥದಲ್ಲಿ ಚಂದ್ರನ ನಿಖರ ಸ್ಥಾನದ ನಿರ್ಣಯಕ್ಕೆ ಸಹಾಯ ವಾಗುವ ನಿಷ್ಕೃಷ್ಟವಾದ ಒಂದು ವಿಧಾನವನ್ನು

ವರ್ಣಿಸಿದ್ದಾನೆ. ಮಾಧವನು ಸೈನ್ (ಎ+ಬಿ) = ಸೈನ್ ಎ × ಕಾಸ್ ಬಿ ± ಕಾಸ್ ಎ × ಸೈನ್ ಬಿ ಎಂಬ ಸಮೀಕರಣದ ನಿಗಮನ (ಡೆಡ್ಯೂಸ್) ಮಾಡಿದವನೆಂದ ಪ್ರಸಿದ್ಧಿಯಾಗಿದ್ದನು. ಅಷ್ಟೇ ಅಲ್ಲದೆ, ಅನಂತವಾದ ಸಂಖ್ಯಾಶ್ರೇಣಿಯ (ಇನ್‌ಫಿನೈಟ್ ಸೀರೀಸ್) ಆಧಾರದಮೇಲೆ ∏ ನ (ಪೈ) ಘನ ಅಳತೆಯನ್ನು ನಿಖರವಾಗಿ ಲೆಕ್ಕಾಚಾರಮಾಡಿದ ಮೊದಲನೆ ವಿಜ್ಞಾನಿಯೆಂದೂ ತಿಳಿದುಬರುತ್ತದೆ.

ಗ್ರೀಕ್ ಮತ್ತು ಭಾರತೀಯ ಜ್ಯೋತಿರ್ಗಣಿತ (ಆಸ್ಟ್ರೋ-ಮ್ಯಾಥೆಮ್ಯಾಟಿಕ್ಸ್)ದಲ್ಲಿ ಹೆಚ್ಚಿನ ವ್ಯತ್ಯಾಸವಿದೆಯೆಂದು ವಿದ್ವಾಂಸರ ಅಭಿಪ್ರಾಯ. ಟಾಲೆಮಿಯು ಕ್ರಿ.ಶ. ೧೫೦ರಲ್ಲಿ ತನ್ನ ಗ್ರಂಥವನ್ನು ಬರೆದಮೇಲೆ ಭಾರತದಲ್ಲಿ ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಬೃಹದ್ಗ್ರಂಥಗಳು ಶಕ ಸಂವತ್ಸರದ ೪೨೦ರ ಹೊತ್ತಿಗೆ ಬರೆಯಲ್ಪಟ್ಟವೆಂದು ಪ್ರತೀತಿ. ಈ ಆಧಾರದಮೇಲೆ ವೀಬರ್, ವ್ಹಿಟ್ನಿ, ಥಿಬಾಟ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರು ಗ್ರೀಕರ ಜ್ಯೋತಿಷ್ಯ ಶಾಸ್ತ್ರದಿಂದ ಭಾರತೀಯ ಜ್ಯೋತಿಷ್ಯಶಾಸ್ತ್ರವು ಸ್ಫೂರ್ತಿ ಪಡೆಯಿತೆಂದು ಅಭಿಪ್ರಾಯ ಪಡುತ್ತಾರೆ. ಆದರೆ ಭಾರತೀಯ ವಿದ್ವಾಂಸರ ತುಲನಾತ್ಮಕ ಅಧ್ಯಯನದ ಪ್ರಕಾರ ಭಾರತದಲ್ಲಿ ವೇದಗಳ ಕಾಲದಿಂದಲೂ ಪರಿಚಿತವಾದ ಜ್ಯೋತಿಷ್ಯ ಶಾಸ್ತ್ರವು ತನ್ನದೇ ಆದ ವೈಶಿಷ್ಟ್ಯದಿಂದ ಕ್ರಮೇಣ ಪ್ರವರ್ಧಮಾನಕ್ಕೆ ಬಂದಿತೆಂದೂ, ಈ ಶಾಸ್ತ್ರದಮೇಲೆ ಬೇರೆ ಯಾವ ದೇಶದ ಪ್ರಭಾವವೂ ಇಲ್ಲವೆಂದೂ ಅಭಿಪ್ರಾಯ ಪಡುತ್ತಾರೆ. ಟಾಲೆಮಿಯ ಜ್ಯೋತಿಷ್ಯಕ್ಕೂ ಭಾರತೀಯ ಜ್ಯೋತಿರ್ಗಣಿತಕ್ಕೂ ಇರುವ ವ್ಯತ್ಯಾಸವೇ ಇದಕ್ಕೆ ಮುಖ್ಯ ಆಧಾರ.

ಖಗೋಳ ವಿಜ್ಞಾನದಲ್ಲಿ ದೃಗ್ಗಣಿತ ವಿಧಾನದ ಹೆಸರಾಂತ ಸ್ಥಾಪಕನಾದ, ಸುಮಾರು ಕ್ರಿ.ಶ. ೧೫ನೇ ಶತಮಾನದಲ್ಲಿ ಜೀವಿಸಿದ್ದ ಪರಮೇಶ್ವರನೆಂಬುವನು ಖಗೋಳ ಮತ್ತು ಗಣಿತಶಾಸ್ತ್ರಗಳ ಅತ್ಯುನ್ನತ ಪ್ರತಿಪಾದಕನಾಗಿದ್ದನು. ಈತನು ಗ್ರಹಣಗಳ ಜಾಗರೂಕ ವೀಕ್ಷಣೆಯನ್ನು ಮಾಡಿ ಹರಿದತ್ತನ "ಪರಹಿತ" ಪದ್ಧತಿಯಲ್ಲಿ ಅಮೂಲ್ಯವಾದ ತಿದ್ದುಪಡಿಗಳನ್ನು ಮಾಡಿದನು. ಇವನ ದೃಗ್ಗಣಿತದ ವೈಶಿಷ್ಟ್ಯವೆಂದರೆ ಅದರಲ್ಲಿ ಖಗೋಳ ಸ್ಥಾಯಿತ್ವ (ಆಸ್ಟ್ರೊನಾಮಿಕಲ್ ಕಾನ್ಸ್‌ಟನ್ಟ್ಸ್), ಸೈನ್ ಲಂಬರೇಖೆಗಳ ಪಟ್ಟಿ (ಸೈನ್ ಆಫ್ ಟೇಬಲ್ಸ್) ಮುಂತಾದವುಗಳ ಪುನರ್ಪರಿಶೀಲನೆಯನ್ನು ಮಾಡಲಾಗಿದೆ. ಇದೇ ಕರ್ತೃವಿನ "ಗೋಳದೀಪಿಕಾ" ಎಂಬ ಗ್ರಂಥದಲ್ಲಿ ಕಾಲಮಾನದ ಛಾಯಾ ಯಂತ್ರ (ನೋಮನ್ — ಗುರುತು ಮಾಡಿರುವ ಮೇಲ್ಮೈಮೇಲೆ ಬಿದ್ದ ತನ್ನ ನೆರಳಿನಿಂದ ಹೊತ್ತನ್ನು ತೋರಿಸುವ ನೆರಳುಗಡಿಯಾರ) ಮತ್ತು ವಸ್ತುಸ್ಥಾನ (ಪ್ಯಾರಲಾಕ್ಸ್) ಇವುಗಳ ವಿಚಾರವಾಗಿ ದೀರ್ಘವಾದ ಚರ್ಚೆಯನ್ನು ಮಾಡಲಾಗಿದೆ. ಈತನ ಅದೇ ಹೆಸರಿನ ಮತ್ತೊಂದು ಗ್ರಂಥದಲ್ಲಿ ವಿಷುವವೃತ್ತ, ಕ್ರಾಂತಿವೃತ್ತ ಮೊದಲಾದುವನ್ನು ತೋರಿಸಲು ಲೋಹ ವಲಯಗಳಿಂದ ಮಾಡಿದ ಖಗೋಳಾಕೃತಿಯ (ಆರ್ಮಿಲರಿ ಸ್ಫಿಯರ್) ರಚನೆ, ಗ್ರಹಗಳ ಕರಾರುವಾಕ್ಕಾದ ಚಲನೆ, ಪೃಥ್ವಿಯ ವೃತ್ತದ ಅಳತೆ ಮುಂತಾದುವು ಚರ್ಚಿತವಾಗಿವೆ.

ಕ್ರಿ.ಶ. ೧೪೪೩–೧೫೪೩ರಲ್ಲಿ ಜೀವಿಸಿದ್ದ ನೀಲಕಂಠ ಸೋಮಯಾಜಿ ಎಂಬ ಕೇರಳೀಯ ಖಗೋಳ ಶಾಸ್ತ್ರಜ್ಞನು ತನ್ನ "ತಂತ್ರಸಂಗ್ರಹ"ವೆಂಬ ಗ್ರಂಥದಲ್ಲಿ ಕಾಲಮಾನ ಛಾಯಾ ಯಂತ್ರದ (ನೋಮನ್) ಪ್ರತಿಷ್ಠಾಪನೆ, ಅಭಿರುಚಿಗೆ ತಕ್ಕಂತೆ ಯೋಜಿಸಿದ ಖಗೋಳಧ್ರುವ (ಕ್ಯಾಲ್ಕ್ಯುಲೇಷನ್ ಆಫ್ ಮೆರಿಡಿಯನ್),

ಅಕ್ಷಾಂಶ (ಲ್ಯಾಟಿಟ್ಯೂಡ್), ದಿಕ್ಪೂಚಿಯ ಬಾಗು (ಡಿಕ್ಲೆನ್ಷನ್), ಗ್ರಹಣಗಳು ಮುಂತಾದ ವಿಷಯಗಳನ್ನು ಪ್ರತಿಪಾದಿಸಿದ್ದಾನೆ. ಈತನು "ಗ್ರಹಣನಿರ್ಣಯ"ವೆಂಬ ಗ್ರಂಥವನ್ನೂ ಬರೆದಿದ್ದಾನೆ.

ಪರಮೇಶ್ವರನ "ದೃಗ್ಗಣಿತ" ಮತ್ತು ನೀಲಕಂಠನ "ಆರ್ಯಭಟೀಯ" ಗ್ರಂಥಗಳ ರಚನೆಯಾದ ನಂತರದ ಕಾಲದಲ್ಲಿ ಖಗೋಳ ಮತ್ತು ಗಣಿತ ವಿಜ್ಞಾನಗಳಲ್ಲಿ ಬಹುಮುಖ ಅಭಿವೃದ್ಧಿಯುಂಟಾಯಿತು. ಚಿತ್ರಭಾನು, ಶಂಕರವಾರಿಯರ್, ಜ್ಯೇಷ್ಠದೇವ, ಅಚ್ಯುತ ಪಿಶಾರಟಿ, ಪುತ್ತುಮನ ಸೋಮಯಾಜಿ ಮೊದಲಾದ ದಾಕ್ಷಿಣಾತ್ಯ ವಿಜ್ಞಾನಿಗಳು ಖಗೋಳ ಶಾಸ್ತ್ರದ ಅಭಿವೃದ್ಧಿಗೆ ಬಹುಮಟ್ಟಿಗೆ ಕಾರಣರು. ಜ್ಯೇಷ್ಠದೇವನು ಆ ಕಾಲದಲ್ಲಿ (ಕ್ರಿ.ಶ. ೧೬ನೇ ಶತಮಾನ) ಖಗೋಳ ಶಾಸ್ತ್ರಜ್ಞರಲ್ಲಿ ಪ್ರಚಲಿತವಾಗಿದ್ದ ಬೀಜಾಂಕ ರೂಪದ ಸೂತ್ರಗಳು (ಫಾರ್ಮುಲೆ), ಪ್ರಮೇಯಗಳ ಸಿದ್ಧಾಂತ (ಡಿರೈವೇಷನ್ ಆಫ್ ತೀಯೊರೆಮ್)ದ ಯುಕ್ತಿಪೂರ್ವಕ ವಿವರಣೆ (ರ್‍ಯಾಷಿಯೊನೇಲಿ)ಯನ್ನು ಪ್ರತಿಪಾದಿಸಿದ್ದಾನೆ. ಪುತ್ತುಮನ ಸೋಮಯಾಜಿಯು ತನ್ನ "ಕರ್ಣಪದ್ಧತಿ" ಎಂಬ ಗ್ರಂಥದಲ್ಲಿ ಕುಟ್ಟಾಕಾರ ವಿಧಾನ, 'ಪೈ' ನ (π) ಮೂಲ್ಯ, ಲಂಬರೇಖೆಗೂ ತ್ರಿಜ್ಯಕ್ಕೂ ಇರುವ ಪ್ರಮಾಣ ಮತ್ತು ಗ್ರಹಗಳ ಸ್ಥಾನಗಳನ್ನು ವಿವರಿಸಿದ್ದಾನೆ.

ಭಾರತೀಯ ಭವಿಷ್ಯಶಾಸ್ತ್ರವು 'ಸಿದ್ಧಾಂತ', 'ಸಂಹಿತಾ' ಮತ್ತು 'ಹೋರಾ' ಎಂಬ ಮೂರು 'ಸ್ಕಂಧ' ಅಥವಾ ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಗಣಿತಶಾಸ್ತ್ರವು ಸಿದ್ಧಾಂತಸ್ಕಂಧದಲ್ಲಿ ಒಂದು ಭಾಗ. ಇದರಲ್ಲಿ 'ವ್ಯಕ್ತ' ಮತ್ತು 'ಅವ್ಯಕ್ತ'ವೆಂಬ ಅಂಕಗಣಿತ ಮತ್ತು ಬೀಜಗಣಿತದ ಸಂಖ್ಯೆಗನುಗುಣವಾಗಿ ಎರಡು ವಿಧ. ಯಜು

ವೇದದ "ಏಕಾ ಚ ಮೇ ತಿಸ್ರಶ್ಚ ಮೇ" ಎಂಬ ಮಂತ್ರದಲ್ಲಿ 'ಕಲನ'ದ (ಗಣಿತ ಶಾಸ್ತ್ರದಲ್ಲಿ ಒಂದು ಗೊತ್ತಾದ ಪದ್ಧತಿ= ಕ್ಯಾಲ್ಕ್ಯುಲಸ್) ಉಲ್ಲೇಖವಿದೆ. ವರರುಚಿಯೆಂಬ ಪಂಡಿತನಿಂದ ರಚಿತವಾದ "ವರರುಚಿವಾಕ್ಯ"ವೆಂಬ ಗ್ರಂಥದಲ್ಲಿ ಒಂದು ಆವರ್ತನದ (ಸೈಕಲ್) ೨೪೮ ದಿನಗಳಲ್ಲಿ ಪ್ರತಿದಿನವೂ ಚಂದ್ರನ ಸ್ಥಾನವನ್ನು ನಮೂದಿಸಲಾಗಿದೆ. ಹರಿದತ್ತನೆಂಬುವನು ಖಗೋಳ ಶಾಸ್ತ್ರ ಗಣನೆಯ 'ಪರಹಿತ' ಸಿದ್ಧಾಂತದಲ್ಲಿ ಉದ್ದಾಮ ಪಂಡಿತನಾಗಿದ್ದನು. ಆರ್ಯಭಟನ ಸಿದ್ಧಾಂತದಲ್ಲಿ ಶಕಾಬ್ದ ಸಂಸ್ಕಾರ ಅಥವಾ ಬೀಜಸಂಸ್ಕಾರ ವೆಂಬ ತಿದ್ದುಪಡಿಯನ್ನು ಅಳವಡಿಸಿದವನೂ ಇವನೇ. ಕೇರಳೀಯ ಖಗೋಳ ಶಾಸ್ತ್ರಜ್ಞ ಶಂಕರನಾರಾಯಣನೆಂಬುವನು ಸೂರ್ಯ ಗ್ರಹಣದ ಕೋನೋನ್ನತಿಯನ್ನು ನೇರವಾಗಿ ಅವಲೋಕಿಸಿ ಶಕಾಬ್ದ ವನ್ನು ಅನುಷ್ಠಾನಕ್ಕೆ ತಂದನು. ಈಗಲೂ ಇದೇ ಪದ್ಧತಿಯನ್ನು ಕೇರಳದಲ್ಲಿ ಅನುಸರಿಸಲಾಗುತ್ತಿದೆ. ಮಹೋದಯಪುರವೆಂಬಲ್ಲಿ ಈತನು ಗ್ರಹಗಳ ಚಲನವಲನಗಳ ಅಧ್ಯಯನಕ್ಕಾಗಿ ಅನೇಕ ಉಪ ಕರಣಗಳನ್ನು ಹೊಂದಿದ್ದನೆಂದೂ ತಿಳಿದುಬರುತ್ತದೆ.

ಭಾರತ ಸರ್ಕಾರದ ರಾಷ್ಟ್ರೀಯ ವಿಜ್ಞಾನ ಪರಿಷತ್ತಿನವರು (ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸಸ್) ತಯಾರಿಸಿರುವ ಪ್ರಾಚೀನ ವೈಜ್ಞಾನಿಕ ಹಸ್ತಪ್ರತಿಗಳ ಪಟ್ಟಿಯ ಪ್ರಕಾರ ೧೯೬೫ನೇ ಸುಮಾರಿಗೆ ಒಳಪಟ್ಟಂತೆ ವೈಜ್ಞಾನಿಕ ಹಸ್ತಪ್ರತಿಗಳನ್ನು ನಮ್ಮ ದೇಶದ ನಾನಾ ಪ್ರಾಚ್ಯವಿದ್ಯಾ ಸಂಶೋಧನಾಲಯಗಳಲ್ಲೂ, ಹಸ್ತ ಪ್ರತಿಗಳ ಕೋಶಾಗಾರಗಳಲ್ಲೂ ಸಂರಕ್ಷಿಸಲಾಗಿದೆ. ಕ್ರಿ.ಶ ಎಂಟನೇ ಶತಮಾನದಿಂದ ಕ್ರಿ.ಶ. ಇಪ್ಪತ್ತನೇ ಶತಮಾನದ ಒಳಕಟ್ಟಿನಲ್ಲಿ ಕೆಳ ಕಂಡ ವಿಷಯಗಳಿಗೆ ಸಂಬಂಧಿಸಿದ ವೈಜ್ಞಾನಿಕ ಹಸ್ತಪ್ರತಿಗಳನ್ನು ಆ ವಿಜ್ಞಾನ ಪರಿಷತ್ತಿನವರು ಪಟ್ಟಿಮಾಡಿದ್ದಾರೆ.

ರಸತಂತ್ರ (ಆಲ್ಕೆಮಿ)ಯಲ್ಲಿ ಸುಮಾರು ೧೯ ಕರ್ತೃಗಳಿಂದ ರಚಿತವಾದ ೨೦ ಹಸ್ತಪ್ರತಿಗಳು; ಶಿಲ್ಪ ವಿದ್ಯೆಯಲ್ಲಿ ಸುಮಾರು ೨೦ ಕರ್ತೃಗಳಿಂದ ರಚಿತವಾದ ೩೧ ಹಸ್ತಪ್ರತಿಗಳೂ; ಖಗೋಳ ಶಾಸ್ತ್ರದಲ್ಲಿ ೧೩೪ ಕರ್ತೃಗಳಿಗೆ ಸಂಬಂಧಿಸಿದಂತೆ ೨೬೨ ಹಸ್ತಪ್ರತಿಗಳೂ; ಸಸ್ಯಶಾಸ್ತ್ರದಲ್ಲಿ ೭ ಹಸ್ತಪ್ರತಿಗಳೂ; ನಿಘಂಟುಗಳಲ್ಲಿ ೯೧ ಕರ್ತೃಗಳಿಗೆ ಸಂಬಂಧಿಸಿದ ೧೨೨ ಹಸ್ತಪ್ರತಿಗಳೂ; ವಿಶ್ವಕೋಶದಲ್ಲಿ ೨ ಹಸ್ತಪ್ರತಿಗಳೂ; ಭೂಗೋಳ ಶಾಸ್ತ್ರದಲ್ಲಿ ೭ ಕರ್ತೃಗಳಿಗೆ ಸಂಬಂಧಿಸಿದಂತೆ ೭ ಹಸ್ತಪ್ರತಿಗಳೂ ; ಗಣಿತಶಾಸ್ತ್ರದಲ್ಲಿ ೩೦ ಕರ್ತೃಗಳಿಗೆ ಸಂಬಂಧಿಸಿದಂತೆ ೩೫ ಹಸ್ತಪ್ರತಿಗಳೂ; ವೈದ್ಯಕದಲ್ಲಿ ೧೦೦ ಕರ್ತೃಗಳಿಗೆ ಸಂಬಂಧಿಸಿದಂತೆ ೧೪೭ ಹಸ್ತಪ್ರತಿಗಳೂ; ಭೌತಶಾಸ್ತ್ರದಲ್ಲಿ ೨೯ ಕರ್ತೃಗಳಿಗೆ ಸಂಬಂಧಿಸಿದಂತೆ ೪೫ ಹಸ್ತಪ್ರತಿಗಳೂ; ಪ್ರಾಣಿಶಾಸ್ತ್ರದಲ್ಲಿ ೬ ಕರ್ತೃಗಳಿಗೆ ಸಂಬಂಧಿಸಿದಂತೆ ೬ ಹಸ್ತಪ್ರತಿಗಳೂ ಆ ಪಟ್ಟಿಯಲ್ಲಿವೆ.

ಹೀಗೆ ನಮ್ಮ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹಗಳಲ್ಲಿ ಬಹಿರಂಗವಾದ ವಿಜ್ಞಾನ ವಿಷಯಗಳು ಹೇರಳವಾಗಿದ್ದರೂ ಇನ್ನೂ ಬೆಳಕನ್ನು ಕಾಣದೇ ಇರುವ ವೈಜ್ಞಾನಿಕ ವಿಷಯಗಳ ನೊಳ್ಳಗೊಂಡ ಹಸ್ತಪ್ರತಿಗಳು ಲೆಕ್ಕವಿಲ್ಲದಷ್ಟು ದೊರಕಬಹುದು. ಇಂಥಾ ಪ್ರಾಚೀನ ಹಸ್ತಪ್ರತಿಗಳನ್ನು ಕೂಲಂಕಷವಾಗಿ ಪರಿಷ್ಕಾರ ಮಾಡಿ ಆಧುನಿಕ ವಿಜ್ಞಾನ ವಿಷಯಗಳೊಡನೆ ತುಲನೆಮಾಡಿದಾಗ ವಿಜ್ಞಾನಕ್ಕೆ ಸಂಬಂಧಿಸಿದ ಪ್ರಗತಿ ಪರವಾದ ಅನೇಕ ವಿಷಯಗಳು ನಮ್ಮ ಗಮನಕ್ಕೆ ಬರಬಹುದು. ಪಾಶ್ಚಾತ್ಯ ದೇಶಗಳಲ್ಲಿನ ವೈಜ್ಞಾನಿಕ ಮುನ್ನಡೆಯಿಂದ ಪ್ರಭಾವಿತರಾದ ವಿದ್ವಾಂಸರು ಒಂದಾನೊಂದು ಕಾಲದಲ್ಲಿ ಭಾರತೀಯರ ಬುದ್ಧಿಮಟ್ಟವು

ಯಾವುದಕ್ಕೂ ಕಡಿಮೆ ಇರಲಿಲ್ಲವೆಂಬುದನ್ನು ಮರೆಯುತ್ತಾರೆ. ಹಾಗೆಂದಮಾತ್ರಕ್ಕೆ ನಮ್ಮ ಗತವೈಭವವನ್ನು ನೆನೆದು ಕೊಚ್ಚಿ ಕೊಳ್ಳುವುದರಲ್ಲಿ ಯಾವ ಪುರುಷಾರ್ಥವನ್ನೂ ಸಾಧಿಸಿದಂತಾಗು ವುದಿಲ್ಲ. ಇಂದಿನ ವೈಜ್ಞಾನಿಕ ಪ್ರಗತಿಗೆ ಪ್ರಾಚೀನ ಭಾರತದ ಕೊಡುಗೆ ಎಷ್ಟು ಸಹಾಯಕವಾಗಬಹುದು ಎಂಬುದನ್ನು ಸಕಲರೂ ವಿಚಾರಮಾಡಬೇಕಾದ ಅಂಶ. ಈ ದೃಷ್ಟಿಯಲ್ಲಿ ಭಾರತೀಯ ಪ್ರಾಚೀನ ಹಸ್ತಪ್ರತಿಗಳಲ್ಲಿ ಅಡಗಿರುವ ವೈಜ್ಞಾನಿಕ ವಿಷಯ-ವಿಶೇಷಗಳು ಬಹಳ ಮಟ್ಟಿಗೆ ಸಹಕಾರಿಯಾಗುವುವು.

೫. ಪರಿಷ್ಕರಣ ಮತ್ತು ಸಂಪಾದನೆ

ಪ್ರಾಚೀನ ಹಸ್ತಪ್ರತಿಗಳ ಸಂಸ್ಕರಣ ದೃಷ್ಟಿಯಲ್ಲಿ ಆಯಾ ಹಸ್ತಪ್ರತಿಗಳಲ್ಲಿ ಅಡಗಿರಬಹುದಾದ ಐತಿಹಾಸಿಕ ದಾಖಲೆಗಳನ್ನು ಕಾಪಾಡುವುದು ಅಥವಾ ಗ್ರಂಥರಚನೆಯಲ್ಲಿ ಕರ್ತೃವಿನ ಸ್ವಂತ ಪದ ಜೋಡಣೆಯನ್ನು ರಕ್ಷಿಸುವುದರ ಮೂಲಕ ಕರಾರುವಾಕ್ಕಾದ ಗ್ರಂಥವನ್ನು ಸಿದ್ಧಗೊಳಿಸುವುದು ಪ್ರಾಚೀನ ಹಸ್ತಪ್ರತಿಗಳ ವಿಮರ್ಶಾತ್ಮಕ ಸಂಪಾದನೆಯ ಮುಖ್ಯ ಉದ್ದೇಶ. ಅಂದರೆ, ಬುದ್ಧಿವಂತಿಕೆಯಿಂದ ನಿಯಮಿತ ಕ್ರಮದಲ್ಲಿ ಒಂದು ಗ್ರಂಥದ ವಿಷಯವಿಶೇಷದ ಗಮನಾರ್ಹ ಅಧ್ಯಯನದ ಮುಖೇನ ಆ ಗ್ರಂಥದ ಪರಿಷ್ಕರಣವ ಾಡುವುದರಿಂದ ಆ ಹಸ್ತಪ್ರತಿಯನ್ನು ಸರ್ವ ವಿಧದಲ್ಲೂ ಸಮರ್ಪಕವಾದ ಗ್ರಂಥವನ್ನಾಗಿ ಪ್ರಕಟಿಸುವುದು. ಇಲ್ಲಿ ವಿಷಯದ ಪಾಂಡಿತ್ಯ ಮತ್ತು ವಿಮರ್ಶಾತ್ಮಕ ದೃಷ್ಟಿ ಅತ್ಯಗತ್ಯ.

ಪ್ರಾಚೀನ ಗ್ರಂಥಗಳ ಹಸ್ತಪ್ರತಿಗಳ ಸಂಪಾದನೆಯಲ್ಲಿ ಸರ್ವಸಮ್ಮತವಾದ ಎರಡು ವಿಧಗಳಿವೆ. ಒಂದು, ಒಂದೇ ಹೆಸರಿನ ಹತ್ತಾರು ಗ್ರಂಥಗಳಲ್ಲಿ ಅತ್ಯುತ್ತಮವಾದ ಪ್ರತಿಯನ್ನು ಸಂಪಾದನೆಗೆ ಆಯ್ಕೆಮಾಡುವುದು. ಹಾಗೆ ಆಯ್ಕೆಮಾಡುವಾಗ ಪ್ರತಿ ಹಸ್ತಪ್ರತಿಯನ್ನೂ ತುಲನೆಮಾಡಿ ಪ್ರಥಮವಾಗಿ ಕರ್ತೃವಿನ ಸ್ವಹಸ್ತದಿಂದಲೇ ರಚಿಸಲಾದ ಗ್ರಂಥ ಅಥವಾ ಅಂತಹ ಗ್ರಂಥ ದಿಂದ ಹೆಚ್ಚು ವ್ಯತ್ಯಾಸವನ್ನು ಹೊಂದದೇ ಇರುವಂತಹ ಗ್ರಂಥ ವನ್ನು ಸಂಪಾದನೆಗೆ ಬುನಾದಿಯಾದ ಗ್ರಂಥ (ಬೇಸಿಕ್ ಟೆಕ್ಸ್ಟ್) ವೆಂದು ಪರಿಗಣಿಸುವುದು. ಹೀಗೆ ಆಯ್ಕೆ

ಮಾಡುವಾಗ ಸಂಬಂಧಪಟ್ಟ ಸಮಗ್ರ ಪುರಾವೆಗಳನ್ನೂ ಪರಿಶೋಧಿಸಿ ತೀರ್ಮಾನಿಸಬೇಕಾಗುತ್ತದೆ. ಎರಡನೆಯದು, ಹಸ್ತಪ್ರತಿಯಲ್ಲಿ ಪರಿಷ್ಕರಣ ಮತ್ತು ಸಂಪಾದನೆಯ ನಿಯಮಗಳಿಗನುಸಾರವಾಗಿ ಕಠಿಣವೂ, ಅಪ್ರಕೃತವೂ ಆದ ವಿಷಯಗಳಿದ್ದಲ್ಲಿ ಅವುಗಳನ್ನು ಗ್ರಂಥದಿಂದ ತೆಗೆದು ಹಾಕುವುದು. ಇಂತಹ ಸಂದರ್ಭಗಳಲ್ಲಿ ಈ ಅಂಶಗಳು ಕರ್ತೃವಿನ ಉದ್ದೇಶಗಳಿಗನುಗುಣವಾಗಿದ್ದರೂ ಸಹ ನಂಬಲು ಅನರ್ಹವಾದ ವಿಷಯಗಳನ್ನು ಕೈಬಿಡಬೇಕಾಗುತ್ತದೆ.

ಈ ಹಿಂದೆ ಹೇಳಿದ ರಾಜಶೇಖರನ "ಸಿದ್ಧಂಚ ಪ್ರಬಂಧಂ ಅನೇಕಾದರ್ಶಗತಂ ಕುರ್ಯಾತ್" ಎಂಬ ಸಲಹೆಯ ಪ್ರಕಾರ ಒಬ್ಬ ಕರ್ತೃವು ತನ್ನ ಗ್ರಂಥವನ್ನು ಪದೇ ಪದೇ ಬರೆದಾಗ, ಅಥವಾ ಬೇರೊಬ್ಬರಿಂದ ಬರೆಸಿದಾಗ, ಹಾಗೂ ಬೇರೊಬ್ಬರು ಬೇರೆ ಬೇರೆ ಸ್ಥಳಗಳಲ್ಲಿ ಅದೇ ಗ್ರಂಥದ ನಕಲುಗಳನ್ನು ತಯಾರಿಸಿದಾಗ, ಲೆಕ್ಕವಿಲ್ಲದಷ್ಟು ಬದಲಾವಣೆಗಳಾಗುವುದು ಸಹಜ. ವಿಷಯ ಒಂದೇ ಆದರೂ ಪದಜೋಡಣೆಯಲ್ಲಾಗಲೀ ಅಥವಾ ವ್ಯಾಖ್ಯಾನದಲ್ಲಾಗಲೀ ಮಾರ್ಪಾಡಾಗುವ ಸಂಭವವುಂಟು. ಇದಕ್ಕೆ ಕಾರಣ, ನಕಲು ತಯಾರಿಸುವವನು ಹಸ್ತಪ್ರತಿಯ ಯಾವುದಾದರೊಂದು ಸ್ಥಳದಲ್ಲಿ ತನಗೆ ಸರಿತೋರಿದ ಪದವನ್ನೋ ಅಥವಾ ವಾಕ್ಯವನ್ನೋ ಸೇರಿಸಿ, ಮೂಲ ಕೃತಿಯನ್ನು ಮಾರ್ಪಡಿಸುವುದು. ಈ ಕಾರಣದಿಂದಲೇ ನಮಗೆ ದೊರಕುವ ಒಂದೇ ಹೆಸರಿನ ಹತ್ತಾರು ಹಸ್ತಪ್ರತಿಗಳು ಒಂದಕ್ಕೊಂದು ತಾಳೆಯಾಗುವುದು ದುರ್ಲಭ. ಹೀಗಿರುವಾಗ ಇಂತಹ ಒಂದು ಹಸ್ತಪ್ರತಿಯನ್ನು ವಿಮರ್ಶಾತ್ಮಕವಾಗಿ ಸಂಪಾದಿಸುವಾಗ ಮೊದಲು ಆ ಹಸ್ತಪ್ರತಿಯ ಇತಿಹಾಸವನ್ನೇ ತಿಳಿಯಬೇಕಾಗುತ್ತದೆ.

ಸಂಪಾದನೆಯ ಕ್ರಮ:

ಸಂಪಾದನೆಗಾಗಿ ಆಯ್ಕೆಮಾಡಿದ ಹಸ್ತಪ್ರತಿಗೆ ಸಂಬಂಧಿಸಿದಂತೆ ಇತರ ಹಸ್ತಪ್ರತಿಗಳೂ ದೊರಕಬಹುದು. ಇಂಥ ಹಸ್ತಪ್ರತಿಗಳು ಯಾವುದಾದರೂ ಒಂದು ವಿಷಯದ ಸಂಕಲನವಾಗಿರಬಹುದು. ಉದಾಹರಣೆಗೆ, ಜಲ್ಹಣನ "ಸೂಕ್ತಿಮುಕ್ತಾವಳಿ". ಹೀಗೆ ದೊರೆತ ಸಂಕಲನವು ಮೂಲ ಹಸ್ತಪ್ರತಿಯ ಸಂಪಾದನೆಯಲ್ಲಿ ಅದರ ನಿಖರತೆಯನ್ನು ನಿರ್ಧರಿಸುವಾಗ ಸಹಾಯಕವಾಗುತ್ತದೆ. ಹೀಗೆಯೇ ಭಾಷಾಂತರ ಮಾಡಿದ, ಮೂಲ ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳೂ ಬಹುಮಟ್ಟಿಗೆ ಉಪಯುಕ್ತವಾದ ಸಾಧನಗಳಾಗುತ್ತವೆ. ಭಾರತದಲ್ಲಿ ದೊರೆತ ಬೌದ್ಧಗ್ರಂಥಗಳ ಹಸ್ತಪ್ರತಿಗಳ ಪರಿಷ್ಕರಣ ಮತ್ತು ಸಂಪಾದನೆಯಲ್ಲಿ ಚೀನೀ ಹಾಗೂ ಟಿಬೆಟ್ಟಿನ ಭಾಷೆಗಳಿಗೆ ಭಾಷಾಂತರ ಮಾಡಿದ ಗ್ರಂಥಗಳು ಬಹುತೇಕ ಸಹಾಯಕಗಳಾಗಿವೆ. ಅಂದರೆ, ಮೂಲ ಗ್ರಂಥದಲ್ಲಿನ ಯಾವುದಾದರೂ ಪದ ಅಥವಾ ವಾಕ್ಯವು ಜಟಿಲವಾಗಿದ್ದಲ್ಲಿ, ಆಯಾ ಪದ ಅಥವಾ ವಾಕ್ಯದ ಅರ್ಥ ವಿಶ್ಲೇಷಣೆ ಮಾಡುವಾಗ ಅದರ ಭಾಷಾಂತರಮಾಡಿದ ಬೇರೆ ಯಾವುದಾದರೂ ಹಸ್ತಪ್ರತಿಯಲ್ಲಿ ಆ ಪದ-ವಾಕ್ಯಗಳ ನಿಖರವಾದ ಅಥವಾ ನಿಖರತೆಗೆ ಹತ್ತಿರವಾದ ವಿವರಣೆ ಸಂಪಾದಕನಿಗೆ ದೊರೆತು ಸಹಾಯಕವಾಗುತ್ತದೆ. ಹೀಗೆ ಸಕಲ ಶಾಸ್ತ್ರಗಳಲ್ಲೂ, ಹಾಗೂ ಕಾವ್ಯ, ನಾಟಕಗಳಲ್ಲೂ ವಾಕ್ಯಗಳ ಪುನರಾವರ್ತನೆಯಾಗಿರುವುದರಿಂದ ಗ್ರಂಥ ಸಂಪಾದನೆಯನ್ನು ಕೈಗೊಳ್ಳುವ ಮೊದಲು ಇವೆಲ್ಲವನ್ನೂ ಕಲೆಹಾಕಿ ಅಭ್ಯಸಿಸಬೇಕಾಗುತ್ತದೆ.

ಈಗ, ಎಲ್ಲೂ ಪರಿಷ್ಕರಣೆಯಾಗದಿರುವ ಒಂದು ಹಸ್ತ

ಪ್ರತಿಯನ್ನು ತೆಗೆದುಕೊಳ್ಳೋಣ. ಸಂಪಾದಕನ ಮೊದಲ ಕರ್ತವ್ಯವೆಂದರೆ, ಆ ಹಸ್ತಪ್ರತಿಗೆ ಸಂಬಂಧಿಸಿದ ಪುರಾವೆಗಳನ್ನು ಸಂಗ್ರಹಿಸುವುದು. ಇಂಥ ಪುರಾವೆಗಳು ಅದೇ ಹೆಸರಿನ ಇತರ ಹಸ್ತಪ್ರತಿಗಳಲ್ಲಾಗಲಿ ಅಥವಾ ದೊರಕಿರುವ ಹಸ್ತಪ್ರತಿಯ ನಕಲುಗಳಲ್ಲಾಗಲೀ ದೊರೆಯುವ ಸಂಭವವುಂಟು. ಇದಲ್ಲದೇ, ನಾನಾ ಪ್ರಾಚ್ಯವಿದ್ಯಾ ಸಂಶೋಧನಾಲಯುಗಳಲ್ಲಿ ತಯಾರಿಸಿರುವ ಹಸ್ತಪ್ರತಿಗಳ ಪಟ್ಟಿ (ಕ್ಯಾಟಲಾಗ್) ಗಳಿಂದಲೂ, ವಿವರಣಾತ್ಮಕ ಗ್ರಂಥಸೂಚಿಗಳಿಂದಲೂ (ಡಿಸ್ಕ್ರಿಪ್ಟಿವ್ ಕ್ಯಾಟಲಾಗ್), ಇತರ ಉಪಯುಕ್ತ ಪ್ರಕಟಣೆಗಳಿಂದಲೂ ಕೂಡ ಸಂಪಾದನೆಗೆ ಆಯ್ದು ಕೊಂಡಿರುವ ಹಸ್ತಪ್ರತಿಯ ಬಗ್ಗೆ ಮಾಹಿತಿಯು ದೊರಕಬಹುದು. ಇಂಥ ಮಾಹಿತಿಗಳು ಸಂಸ್ಕೃತ ಒಂದೇ ಅಲ್ಲದೇ ಇತರ ಭಾಷೆ ಗಳಲ್ಲೂ ದೊರೆಯಬಹುದು. ಒಂದೊಂದು ವೇಳೆ ಪಂಡಿತರು ಗಳ ವೈಯಕ್ತಿಕ ಸಂಗ್ರಹಗಳಲ್ಲೂ ಪ್ರಕೃತ ಗ್ರಂಥದ ಸಂಪಾದನೆಗೆ ಸಹಾಯಕವಾಗುವ ವಿವರಗಳು ದೊರೆಯಬಹುದು. ಆಫ್ರೆಕ್ಟ್‌ನ "ಕ್ಯಾಟಲಾಗಸ್ ಕ್ಯಾಟಲಾಗೋರಮ್," ರೈಸ್‌ನ ಕ್ಯಾಟಲಾಗ್, ಮದ್ರಾಸಿನ "ನ್ಯೂ ಕ್ಯಾಟಲಾಗಸ್ ಕ್ಯಾಟಲಾಗೋರಮ್" ಮುಂತಾದವು ಈ ದೃಷ್ಟಿಯಲ್ಲಿ ಮಾರ್ಗದರ್ಶಕಗಳಾಗಿವೆ. ಇವು ಗಳ ಸಲಹೆಯನ್ನು ಪಡೆಯುವಾಗ ಪ್ರಕೃತ ಹಸ್ತಪ್ರತಿಯ ಸಂಪಾದನೆಗೆ ಸಹಾಯಕವಾಗುವ ಇತರ ಹಸ್ತಪ್ರತಿಗಳೊಡನೆ ತುಲನೆ ಮಾಡಲು ಸಾಧ್ಯವಾಗುತ್ತದೆ. ಈ ವಿಷಯದಲ್ಲಿ ಸಂಪಾದಕನು ಹೆಚ್ಚು ಜಾಗರೂಕನಾಗಿದ್ದು ಮನಃಪೂರ್ವಕವಾಗಿ ವಿಚಾರ ಮಾಡಬೇಕು.

ಹೀಗೆ ದೊರೆತ ಎಲ್ಲಾ ಹಸ್ತಪ್ರತಿಗಳನ್ನೂ ತುಲನೆಮಾಡಿದ ಮೇಲೆ, ಅವುಗಳಲ್ಲಿ ಯಾವ ಹಸ್ತಪ್ರತಿಯು ಹೆಚ್ಚು ನಿಖರ

ವಾಗಿದ್ದು ವಿಶ್ವಾಸಾರ್ಹವಾಗಿರುವುದೋ ಅದನ್ನು ತನ್ನ ವಿಮರ್ಶಾತ್ಮಕ ಗ್ರಂಥರಚನೆಗೆ ಆಯ್ದುಕೊಳ್ಳಬೇಕು. ಇದನ್ನು ವಿವರವಾಗಿ ಪರಿಶೀಲಿಸೋಣ.

ವಿಂಗಡಣೆ :

ಒಂದೇ ವಿಷಯಕ್ಕೆ ಸಂಬಂಧಿಸಿದ ನಾಲ್ಕು ಹಸ್ತಪ್ರತಿಗಳು ನಮಗೆ ದೊರಕಿವೆಯೆಂದು ಭಾವಿಸೋಣ. ಮೇಲೆ ಹೇಳಿದ ತುಲನಾತ್ಮಕ ಅಧ್ಯಯನಾನಂತರ ಈ ನಾಲ್ಕನ್ನು ಆರಿಸಿಕೊಳ್ಳಲಾಗಿದೆ. ಅವುಗಳನ್ನು ಕ್ರಮವಾಗಿ 'ಕ' 'ಖ' 'ಗ' ಮತ್ತು 'ಘ' ಎಂದು ವಿಂಗಡಿಸೋಣ. ಈ ನಾಲ್ಕು ಪ್ರತಿಗಳಲ್ಲಿ 'ಕ' ಎಂಬ ಪ್ರತಿಯು ಹೆಚ್ಚು ವಿವರಣೆಗಳಿಂದ ಕೂಡಿದ್ದು ಯಾವ ಅನುಮಾನಕ್ಕೂ ಆಸ್ಪದ ಕೊಡದೆ ವಿಶ್ವಾಸಾರ್ಹವಾಗಿದೆ. ಇದರಲ್ಲಿರುವ ವಿಷಯ ವಿವರಣೆಗಳು 'ಖ' ಹಸ್ತಪ್ರತಿಯಲ್ಲಿದ್ದರೂ ಸಹ ಸಮರ್ಪಕವಾಗಿರಲಾರದು. ಹಾಗೆಯೆ 'ಗ' 'ಘ' ಪ್ರತಿಗಳಲ್ಲೂ ಭೇದಗಳಿವೆ. ಆದರೂ ಕೂಡ 'ಘ' ಅಥವಾ 'ಗ' ಪ್ರತಿಯಲ್ಲಿರುವ ಒಂದು ವಿಶಿಷ್ಟ ವಿಷಯ ಅಥವಾ ಅದರ ಪ್ರತಿಪಾದನೆ 'ಕ' ಮತ್ತು 'ಖ' ಗಳಲ್ಲಿ ಇಲ್ಲದೆ ಇರಬಹುದು. ಆದ್ದರಿಂದಲೇ ಈ ನಾಲ್ಕು ಪ್ರತಿಗಳನ್ನೂ ಸಂಪಾದನೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಈಗ 'ಕ' ಹಸ್ತಪ್ರತಿಯಲ್ಲಿರುವ ವಿಷಯ, ವಿವರಣೆ, ಇತ್ಯಾದಿಗಳು, 'ಖ' 'ಗ' 'ಘ' ಗಳಲ್ಲೂ ಕಂಡು ಬಂದಾಗ 'ಕ' ಹಸ್ತಪ್ರತಿಯಲ್ಲಿರುವ ವಿವರಣೆ ಅಥವಾ ನಿರೂಪಣೆಯು ವಿಶ್ವಾಸಾರ್ಹವಾದದ್ದು. ಆದರೆ, ಅದೇ 'ಕ' ಹಸ್ತಪ್ರತಿಯಲ್ಲಿರುವ ವಿಷಯ (ಅದು ಪದ, ವಾಕ್ಯಗಳು ಕೂಡ ಆಗಿರಬಹುದು) 'ಖ' 'ಘ' ಪ್ರತಿಗಳಲ್ಲಿ ಕಾಣದೆ 'ಗ' ಪ್ರತಿಯಲ್ಲಿ ವ್ಯತ್ಯಾಸದಿಂದ ಕೂಡಿದ್ದಾಗ

ನಿಖರವಾದ ವಿವರಣೆ, ಅರ್ಥ ಅಥವಾ ವ್ಯಾಖ್ಯಾನ, ಯಾವುದೇ ಆದರೂ ಸಂಪಾದಕನ ಬುದ್ಧಿ ಶಕ್ತಿಯ ಮೇಲೆ ನಿರ್ಧರಿಸಬೇಕಾಗುತ್ತದೆ. ಇಂಥ ಸಂದರ್ಭಗಳಲ್ಲಿ ಗ್ರಂಥ ಸಂಪಾದನೆಯ ಕಾಠಿಣ್ಯತೆ ಹಾಗೂ ಜವಾಬ್ದಾರಿಯು ಅಧಿಕವಾಗುತ್ತದೆ.

ಸಂಪಾದನೆಗೆ ಆಯ್ಕೆಮಾಡಿರುವ ಹಸ್ತಪ್ರತಿಯ ಇತರ ನಕಲುಗಳನ್ನು ವಿಂಗಡಿಸಿ ಸಂಕೇತಗಳನ್ನು ಗುರುತು ಮಾಡುವಾಗ 'ಕ' 'ಖ' 'ಗ' 'ಘ' ಎಂದೇ ಹೆಸರಿಸಬೇಕಾಗಿಲ್ಲ. ಅದರಲ್ಲೂ ಒಂದು ಕ್ರಮವಿದೆ. ದೊರಕಿರುವ ಒಂದು ನಕಲು ಪಂಜಾಬಿನ ಪಾಠಾಂತರವೆಂದು ಭಾವಿಸಿದರೆ, ಆಗ ವ್ಯವಹಾರ ದೃಷ್ಟಿಯಿಂದ ಅದನ್ನು 'ಪ' ಎಂದು ಕರೆಯುವುದಾಗಲಿ ಅಥವಾ ಅದರ ವಿಶಿಷ್ಟತೆಯ ಕುರುಹಾಗಿ ಅದರಂತೆ ಸಂಕೇತವನ್ನು ನಿಗದಿ ಮಾಡುವುದಾಗಲಿ ಅನುಕೂಲಕರವಾದದ್ದು. ಈ ವಿಧಾನದಿಂದ ಎಂಟು–ಹತ್ತು ನಕಲುಗಳನ್ನು ವಿಮರ್ಶೆಮಾಡುವಾಗ ಯಾವ ಪ್ರತಿಯನ್ನಾಗಲಿ ಸಂದರ್ಭಾನುಸಾರ ಅದರ ಸಂಕೇತದಿಂದ ವ್ಯವಹರಿಸುವಾಗ ಅದರ ವೈಶಿಷ್ಟ್ಯವೂ ಸಹ ಸಂಪಾದಕನ ಗಮನದಲ್ಲಿರಲು ಸಾಧ್ಯವಾಗುತ್ತದೆ.

ಹೀಗೆ ನಾಲ್ಕು ಹಸ್ತಪ್ರತಿಗಳನ್ನೂ ಕ್ರಮವಾಗಿ, ಅಂದರೆ ಅವುಗಳ ವಿಶಿಷ್ಟತೆಗನುಗುಣವಾಗಿ, ವಿಂಗಡಿಸಿದ ಮೇಲೂ ಕೂಡ ಒಂದೊಂದು ನಕಲೂ ವ್ಯತ್ಯಾಸದಿಂದ ಕೂಡಿರುವ ಸಂಭವವಿದೆ. ಈ ನಕಲುಗಳನ್ನು ಹೆಚ್ಚು ಗಮನವಿಟ್ಟು ಪದೇಪದೇ ಅಭ್ಯಸಿಸಿದಾಗ ಇಂತಹ ವ್ಯತ್ಯಾಸಗಳು ಗೋಚರವಾಗುತ್ತವೆ. ಈ ರೀತಿಯಾದ ಅಭ್ಯಾಸವು ಗ್ರಂಥಸಂಪಾದನೆಯಲ್ಲಿ ಅವಶ್ಯಕವಾದ ಒಂದು ಕರ್ತವ್ಯ. ಒಂದು ಗ್ರಂಥದ ಏಕೈಕ ಹಸ್ತಪ್ರತಿ ಇದ್ದರಂತೂ

ಇಂತಹ ಅಭ್ಯಾಸವನ್ನು ಪದೇ ಪದೇ ಮಾಡಲೇಬೇಕು. ವಿಶ್ವನಾಥನ "ಕೋಶಕಲ್ಪತರು" ಮತ್ತು ನಾನ್ಯದೇವನ "ಭರತಭಾಷ್ಯ" ಎಂಬ ಗ್ರಂಥಗಳು ಈ ಮಾದರಿಯ ಹಸ್ತಪ್ರತಿಯ ಉದಾಹರಣೆಗಳು.

'ಕ' ಮಾದರಿಯು, ಕರ್ತೃವಿನ ಹೆಸರನ್ನೊಳಗೊಂಡ, ಆ ಕರ್ತೃವಿನಿಂದಲೇ ರಚಿಸಲ್ಪಟ್ಟ, ಇತರ ನಕಲುಗಳಿಗಿಂತ ಹೆಚ್ಚು ವಿಶ್ವಾಸಾರ್ಹವಾದ ಹಸ್ತಪ್ರತಿಗೆ "ಆಟೋಗ್ರಾಫ್" ಎಂದು ಹೆಸರು, ಈ ಹಸ್ತಪ್ರತಿಯನ್ನೇ ಆಧಾರವಾಗಿಟ್ಟುಕೊಂಡು ಇತರ ನಕಲುಗಳ ಸಹಾಯದಿಂದ ಸಿದ್ಧಪಡಿಸುವ ಗ್ರಂಥವೇ ಮುದ್ರಣಕ್ಕೆ ಆಖೈರು ಪ್ರತಿಯಾಗುವುದು. ಇದನ್ನು "ರಿಸೆನ್ಷನ್" ಎಂದು ಕರೆಯುತ್ತಾರೆ. ಈ ಆಖೈರು ಪ್ರತಿಯನ್ನು ರಚಿಸುವಾಗ ಸಂಪಾದಕನು ಗಮನದಲ್ಲಿಡಬೇಕಾದ ಕೆಲವು ಮುಖ್ಯ ಅಂಶಗಳಿವೆ. ಅವುಗಳನ್ನು ಪರಿಶೀಲಿಸೋಣ.

'ಕ' ಮಾದರಿಯ ಹಸ್ತಪ್ರತಿಯು ಸಿದ್ಧವಾದಮೇಲೆ, ಅದರ ಪುನರಾವೃತ್ತಿಯು ಸರ್ವ ಸಮರ್ಪಕವಾಗಿ ಸಂಪಾದಕನಿಂದ ರಚಿತವಾಗುತ್ತದೆ. ಹಾಗೆ ರಚನೆಮಾಡುವಾಗ ಪರಿಶೀಲನೆಗೆ ಆಯ್ಕೆ ಮಾಡಿರುವ ನಾಲ್ಕು ಹಸ್ತಪ್ರತಿಗಳಲ್ಲೂ ಸಂಪಾದಕನ ದೃಷ್ಟಿಯಲ್ಲಿ ಕೆಲವು ಪದಗಳು ಅಥವಾ ವಾಕ್ಯಗಳು ವಿಷಯಕ್ಕೆ ಸಂಬಂಧಿಸಿದ, ಸಮರ್ಪಕವಾದ ಅರ್ಥವನ್ನು ಒದಗಿಸಲಾರವೆಂಬ ಅಭಿಪ್ರಾಯ ಉಂಟಾದಲ್ಲಿ, ಅದನ್ನು ತಿದ್ದುವ ಭಾರ ಸಂಪಾದಕನದೇ ಆಗಿರುತ್ತದೆ. ಈ ದೃಷ್ಟಿಯಲ್ಲಿ ಸಂಪಾದಕನು ನಿರ್ದಿಷ್ಟ ವಿಷಯದಲ್ಲಿ ಪಂಡಿತನಾಗಿರಬೇಕು. ಕೆಲವು ವೇಳೆ ಆಯ್ಕೆ ಮಾಡಿದ ಹಸ್ತಪ್ರತಿಗಳಲ್ಲಿ ಕೆಲವು ಸಾಲುಗಳೇ ಅಳಿಸಿಹೋಗಿರುವ

ಸಂಭವವುಂಟು. ಪುರಾತನವಾದ ತಾಳಪತ್ರದಂಥ ಬರವಣಿಗೆಯ ಸಾಧನವು ಕ್ರಿಮಿಕೀಟಗಳ ದೆಸೆಯಿಂದ ಬೇಗ ನಶಿಸಿಹೋಗುವ ಸಂಭವವುಂಟು. ಇಂತಹ ಸಂದರ್ಭಗಳಲ್ಲಿ ಹಸ್ತಪ್ರತಿಯ ಆಯಾ ಸ್ಥಳಗಳಲ್ಲಿ ಮೂಲ ವಿಷಯವು ಕುಂಠಿತವಾಗದಂತೆ ವಿಶ್ವಾಸಾರ್ಹ ವಾದ ಪದ ಅಥವಾ ವಾಕ್ಯಗಳ ಜೋಡಣೆಯೂ ಸಂಪಾದಕನಿಗೆ ಸೇರುತ್ತದೆ.

ಎರಡನೆಯದಾಗಿ, ಹಸ್ತಪ್ರತಿಯಲ್ಲಿ ಬಳಸಿರುವ ಪದ ಅಥವಾ ವಾಕ್ಯಗಳು ಸಂದರ್ಭಾನುಸಾರ ಇಲ್ಲದಿದ್ದಲ್ಲಿ ಅವು ನಿಷ್ಪ್ರಯೋಜಕ ವಾಗುವುವು. ಆದ್ದರಿಂದ ಅವುಗಳನ್ನು ಸಮರ್ಪಕವಾಗಿ ತಿದ್ದುವ ಭಾರವೂ ಸಂಪಾದಕನದೇ. ಪಿಷೆಲ್ ಎಂಬ ಜರ್ಮನ್ ವಿದ್ವಾಂಸರು ಪರಿಷ್ಕರಿಸಿ ಸಂಪಾದಿಸಿದ "ಶಾಕುಂತಲ" ನಾಟಕದಲ್ಲಿ, ಅವರು ಉಪಯೋಗಿಸಿದ ಹಸ್ತಪ್ರತಿಯಲ್ಲಿ 'ಅಮುಷ್ಮಾನ್' ಎಂಬ ಪದ ವಿದ್ದು, ಆ ಪದಕ್ಕೆ ಯಾವ ಅರ್ಥವೂ ಬರುವುದಿಲ್ಲವಾದ್ದರಿಂದ, ಅದನ್ನು 'ಆಯುಷ್ಮಾನ್' ಎಂದು ತಿದ್ದಲಾಯಿತು. ಇಂಥ ನ್ಯೂನತೆಗಳು ಒಂದು ಹಸ್ತಪ್ರತಿಯನ್ನು ನಕಲು ಮಾಡುವಾಗ ಬರವಣಿಗೆಗಾರರ ಉದಾಸೀನತೆಯಿಂದ ಉಂಟಾಗುತ್ತವೆ. ಒಂದೊಂದು ವೇಳೆ ಮೂಲ ಕರ್ತೃವು ಗ್ರಂಥದಲ್ಲಿ ಪ್ರಯೋಗಿ ಸಿರುವ ಪದವು ಅದರ ವಿಶಿಷ್ಟತೆಗೆ ತಕ್ಕಂತೆ ಇಲ್ಲವೆಂಬ ಅಭಿ ಪ್ರಾಯ ಉಂಟಾದರೆ, ಅಂಥವು ಅರ್ಥಸಹಿತವಾಗಿದ್ದರೂ ಕೂಡ ಸಂಪಾದಿತ ಗ್ರಂಥದ ಅಮೂಲ್ಯತೆಯ ದೃಷ್ಟಿಯಿಂದ ಅವುಗಳನ್ನು ತಿದ್ದಬೇಕಾಗುತ್ತದೆ. ಹೀಗೆ 'ಶಯನಾತ್' ಎಂಬುದನ್ನು 'ಸಲಿಲಾತ್' ಎಂದು ಸಂದರ್ಭಾನುಸಾರ ಬದಲಾವಣೆ ಮಾಡು ವುದೂ ಸಂಪಾದಕನ ಹೊಣೆಗಳಲ್ಲೊಂದು. ಇದಕ್ಕೆ 'ಎಮೆಂಡೇಷನ್' ಎಂದು ಹೆಸರು.

ಉದಾಹರಣೆಗಾಗಿ ಎ. ಎ. ಮ್ಯಾಕ್‌ಡೊನೆಲ್‌ರವರು "ಬೃಹದ್ದೇವತಾ" ಎಂಬ ಗ್ರಂಥವನ್ನು ಪರಿಷ್ಕರಿಸಿ ಸಂಪಾದಿಸಿದ ರೀತಿಯನ್ನು ಗಮನಿಸೋಣ.

ವೈದಿಕ ಗ್ರಂಥಗಳಲ್ಲಿ "ಬೃಹದ್ದೇವತಾ" ಎಂಬುದು ವೈದಿಕ ವಿದ್ವಾಂಸರ ವಿಶೇಷ ಗಮನವನ್ನು ಸೆಳೆದಿರುವ ಮಹಾ ಗ್ರಂಥ. ರುಡಾಲ್ಫ್ ರಾತ್ ಎಂಬುವರು ೧೮೪೬ರಲ್ಲಿ ಆಗ ಲಭ್ಯವಾದ ಈ ಗ್ರಂಥದ ಏಕೈಕ ಪ್ರತಿಯನ್ನು ಸಂಪಾದಿಸಿ ಪ್ರಕಟಿಸಿದರೂ ಕೂಡ ಇದೇ ಗ್ರಂಥದ ಇತರ ಹಸ್ತಪ್ರತಿಗಳು ಪ್ರಾಯಶಃ ಭಾರತ ದೇಶದಲ್ಲಿ ದೊರಕಬಹುದೆಂಬ ಆಶಯವನ್ನು ವ್ಯಕ್ತಪಡಿಸಿದ್ದರು. ರಾತ್‌ರವರು ಸಂಪಾದಿಸಿದ ಆವೃತ್ತಿಯು ಪ್ರಕಟವಾದ ಕೆಲವೇ ಕಾಲದಲ್ಲಿ "ಬೃಹದ್ದೇವತಾ" ಗ್ರಂಥದ ಮತ್ತೊಂದು ಹಸ್ತಪ್ರತಿಯು ಬರ್ಲಿನ್ನಿನ (ಜರ್ಮನಿ) ರಾಯಲ್ ಲೈಬ್ರರಿಯಲ್ಲಿ ಛೇಂಬರ್ಸ್ ಸಂಗ್ರಹದಲ್ಲಿ ದೊರಕಿತು. ಅಡಾಲ್ಬರ್ಟ್ ಕುನ್ ಎಂಬುವರು ಈ ಹೊಸದಾಗಿ ದೊರಕಿದ ಹಸ್ತಪ್ರತಿಯನ್ನು ತಳಹದಿ (ಬೇಸಿಕ್) ಯಾಗಿಟ್ಟುಕೊಂಡು "ಇಂಡಿಷೆ ಸ್ಟಡಿಯನ್" ಎಂಬ ಗ್ರಂಥದ ಮೊದಲನೆಯ ಸಂಪುಟ (೧೮೫೦)ದಲ್ಲಿ ಪ್ರಕಟಿಸಿದರು ಹೀಗೆ ಮಾಡುವಾಗ, ಕುನ್‌ರವರು ಹಾಗ್ ಎಂಬುವರಿಗೆ ೧೮೬೫ರಲ್ಲಿ ಪೂನಾದಲ್ಲಿ ದೊರೆತ (ಈಗ ಮ್ಯೂನಿಚ್‌ನ ರಾಯಲ್ ಲೈಬ್ರರಿಯಲ್ಲಿ ರಕ್ಷಿಸಲಾಗಿದೆ) ಹಸ್ತಪ್ರತಿಯೊಡನೆ ತುಲನೆಮಾಡಿದರು. ಇವೆರಡರಲ್ಲೂ ಸಂಪಾದನೆಗೆ ಸಮರ್ಪಕವಾದ ವಸ್ತುವು ದೊರೆಯದೇ ಹೋದುದರಿಂದ ಕುನ್‌ರವರು ತಮ್ಮ ಗ್ರಂಥವನ್ನು ಪೂರ್ಣವಾಗಿ ಪ್ರಕಟಿಸಲಿಲ್ಲ.

ಈ ಸಂದರ್ಭದಲ್ಲಿ ಮ್ಯಾಕ್ಸ್‌ಮುಲರ್‌ರವರು ೧೮೬೦ರ ಸುಮಾರಿನಲ್ಲಿ ಭಾರತದೇಶದಿಂದ ಭೂಲರ್ ಮತ್ತು ಭಾವು ದಾಜಿ

ಯವರ ಸಹಾಯದಿಂದ ಮೂರು ಆಧುನಿಕ ಪ್ರತಿಗಳನ್ನು ಸಂಗ್ರಹಿಸಿದ್ದರು. ಇವುಗಳಲ್ಲೂ ಕೂಡ ಸಾಕಾದಷ್ಟು ವಸ್ತು ವಿಶೇಷಗಳು ದೊರಕದೇ ಸಂಪಾದನೆಯ ಕಾರ್ಯವನ್ನು ಕೈಗೊಂಡಿರಲಿಲ್ಲ. ಮ್ಯಾಕ್ಸ್‌ಮುಲರ್‌ರವರ ಸಹಾಯಕರಾಗಿದ್ದ ಥಿಬಾಟ್ ರವರೂ ಸಹ "ಬೃಹದ್ದೇವತಾ" ಗ್ರಂಥ ಸಂಪಾದನೆಯನ್ನು ಉದ್ದೇಶಿಸಿ ಕೈಬಿಟ್ಟಿದ್ದರು. ೧೮೮೭ರಲ್ಲಿ ಛಾರಲ್ಸ್ ರಾಕ್‌ವೆಲ್ ಲ್ಯಾನ್‌ಮನ್ ಎಂಬುವರು ಈ ಗ್ರಂಥವನ್ನು ಪರಿಷ್ಕರಿಸಿ ಸಂಪಾದಿಸಬೇಕೆಂದು ನಿಯೋಜಿಸಿಕೊಂಡು, ಅದಕ್ಕೆ ಸಂಬಂಧಿಸಿದಂತೆ ಅತ್ಯಗತ್ಯವಾಗಿ ಬೇಕಾಗಿದ್ದ ಆ ಗ್ರಂಥದ ಇತರ ಹಸ್ತಪ್ರತಿಗಳನ್ನು ಸಂಗ್ರಹಿಸುವುದರಲ್ಲಿ ಬಂದ ಕಷ್ಟಗಳಿಂದಲೂ ಹಾಗೂ ತಮ್ಮ ಇತರ ಕಾರ್ಯಭಾರದಿಂದಲೂ ಪರಿಷ್ಕರಣ ಕಾರ್ಯವನ್ನು ಕೈಗೊಳ್ಳಲಿಲ್ಲ. ಹಾಗಾಗಿ ಲ್ಯಾನ್‌ಮನ್ ರವರ ಕೋರಿಕೆಯ ಮೇಲೆ ಮ್ಯಾಕ್-ಡೊನೆಲ್‌ರವರು "ಬೃಹದ್ದೇವತಾ" ಗ್ರಂಥದ ಪರಿಷ್ಕರಣೆ ಮತ್ತು ಸಂಪಾದನೆಯನ್ನು ಕೈಗೊಂಡದ್ದಲ್ಲದೆ, ಆ ಗ್ರಂಥದ ಆಂಗ್ಲ ಅನುವಾದವನ್ನೂ ಮತ್ತು ಅನುಬಂಧವನ್ನೂ ಬರೆದು ೧೯೦೪ರಲ್ಲಿ 'ಹಾರ್ವರ್ಡ್ ಓರಿಯಂಟಲ್ ಸೀರೀಸ್' ನಲ್ಲಿ ಪ್ರಕಟಿಸಿದರು.

"ಬೃಹದ್ದೇವತಾ" ಗ್ರಂಥದ ವಿಮರ್ಶಾತ್ಮಕ ಸಂಪಾದನೆಗೆ ಮ್ಯಾಕ್‌ಡೊನೆಲ್‌ರವರು ಒಂಭತ್ತು ಹಸ್ತಪ್ರತಿಗಳನ್ನು ಆಮೂಲಾಗ್ರವಾಗಿ ಪರಿಶೋಧಿಸಿದರು. ಇವುಗಳಲ್ಲಿ ಎಂಟು ಹಸ್ತಪ್ರತಿಗಳನ್ನು ಒಂದು ಗುಂಪಾಗಿ ವಿಂಗಡಿಸಿ ಅದನ್ನು 'ಎ' ಗುಂಪೆಂದು ಕರೆದರು. ಈ ಗುಂಪಿನ ಹಸ್ತಪ್ರತಿಗಳ ಪಾಠಾಂತರವು ಚಿಕ್ಕದಾಗಿದ್ದು, ಎರಡನೆಯ ಗುಂಪಿನದು ವಿಶಾಲವಾದ ಪಾಠಾಂತರವುಳ್ಳದ್ದಾಗಿದ್ದಿತು. ಇದನ್ನು 'ಬಿ' ಗುಂಪೆಂದು ಕರೆದರು (ಇದು ಬರ್ಲಿನ್ ಪಾಠಾಂತರವಾದುದರಿಂದ ಅದನ್ನು ಸುಲಭವಾಗಿ

ಸೂಚಿಸುವ ಸಲುವಾಗಿ 'ಬಿ' ಎಂದು ಸಂಕೇತ). ಒಂಭತ್ತನೇ ಪ್ರತಿಯೂ ಬರ್ಲಿನ್ ಮತ್ತು ಬೋಡ್ಲಿಯೆನ್ ಸಂಗ್ರಹಕ್ಕೆ ಸೇರಿದ್ದಾಗಿದೆ. ಈ ಒಂಭತ್ತು ಪ್ರತಿಗಳಿಗೆ, ೧೮೮೯ರಲ್ಲಿ ರಾಜೇಂದ್ರ ಲಾಲ ಮಿತ್ರ ಎಂಬುವರು ಸಂಗ್ರಹಿಸಿದ್ದ ಏಳು ಹಸ್ತಪ್ರತಿಗಳನ್ನೂ ಮ್ಯಾಕ್‌ಡೊನೆಲ್ ರವರು ಸೇರಿಸಿಕೊಂಡರು. ಹೀಗೆ ತಮ್ಮ ಸಂಪಾದನಾಕಾರ್ಯಕ್ಕೆ "ಬೃಹದ್ದೇವತಾ" ಗ್ರಂಥದ ಹದಿನಾರು ಹಸ್ತಪ್ರತಿಗಳನ್ನು ಸಂಗ್ರಹಿಸಿದರು. ಇವುಗಳಲ್ಲಿ ಮೂಲಗ್ರಂಥಕ್ಕೆ ಬಹು ಹತ್ತಿರವಾದ ಪಾಠಾಂತರವುಳ್ಳ ಪ್ರತಿಗಳನ್ನು ಪ್ರತ್ಯೇಕ ಗುಂಪುಗಳಾಗಿ ವಿಂಗಡಿಸಿ, ಅಭ್ಯಾಸಕ್ಕೆ ಸಿದ್ಧಪಡಿಸಿಕೊಂಡರು. ಇವುಗಳಲ್ಲಿ ಹಿಂದೆ ಹೇಳಿದ ಹಾಗ್ ರವರ ಸಂಗ್ರಹದ ಹಸ್ತಪ್ರತಿಯು ಅತ್ಯಲ್ಪವಾದ ನ್ಯೂನತೆಯನ್ನು ಮಾತ್ರ ಹೊಂದಿದ್ದಿತು. ಇವೇ ಅಲ್ಲದೆ, ದ್ಯಾ ದ್ವಿವೇದನ "ನೀತಿಮಂಜರಿ" ಎಂಬ ಗ್ರಂಥದಲ್ಲಿ ಸೇರಿಸಲಾಗಿರುವ ಸುಮಾರು ೧೮೦ ಬೃಹದ್ದೇವತಾ ಶ್ಲೋಕಗಳನ್ನೂ ಪರಿಶೀಲನೆಗೆ ತೆಗೆದುಕೊಂಡರು.

ಮ್ಯಾಕ್‌ಡೊನೆಲ್‌ರವರು ವಿಭಾಗಿಸಿದ ಎರಡು ಗುಂಪುಗಳಲ್ಲಿ 'ಎ' ಗುಂಪಿನಲ್ಲಿಲ್ಲದ ೧೩೩ ಶ್ಲೋಕಗಳು 'ಬಿ' ಗುಂಪಿನಲ್ಲೂ, ಹಾಗೂ 'ಬಿ' ಗುಂಪಿನಲ್ಲಿಲ್ಲದ ೧೮ ಶ್ಲೋಕಗಳು 'ಎ' ಗುಂಪಿನಲ್ಲೂ ಕಂಡುಬಂದವು. ಇದಕ್ಕೆ ಕಾರಣವನ್ನು ಜಾಗರೂಕತೆಯಿಂದ ಪರಿಶೀಲಿಸಿದಾಗ 'ಎ' ಗುಂಪಿನ ಹಸ್ತಪ್ರತಿಗಳು ಮೂಲಗ್ರಂಥಕ್ಕೆ ತೀರ ಹತ್ತಿರವಾಗಿದ್ದುದು ಅರಿವಾಯಿತು. ಈ ಹಸ್ತಪ್ರತಿಗಳೇ ಅಲ್ಲದೇ, ಗ್ರಂಥಕ್ಕೆ ಸಂಬಂಧಿಸಿದ ಇತರ ಗ್ರಂಥಗಳನ್ನೂ ಪರಿಶೀಲಿಸಿದುದರಿಂದ ಸಂಪಾದನ ಕಾರ್ಯದಲ್ಲಿ ಹೆಚ್ಚು ಸಹಕಾರಿಯಾಯಿತು. 'ಎ' ಮತ್ತು 'ಬಿ' ಎರಡು ಗುಂಪುಗಳಲ್ಲೂ ಕಂಡು

ಬಂದ ತಪ್ಪುಗಳನ್ನು ನಿವಾರಿಸುವ ಪ್ರಯತ್ನದಲ್ಲಿ ಈ ಯಾವ ಗುಂಪಿಗೂ ಸೇರದ ಇತರ ಗ್ರಂಥಗಳ ಸಹಾಯದಿಂದ ಅಂತಹ ತಪ್ಪುಗಳನ್ನು ತಿದ್ದಿದರು. ಉದಾಹರಣೆಗೆ, 'ರೌಶಮಃ', 'ಸತ್ಪತಿಃ', 'ಅಂತಃಪರಿಧಿ', 'ಐನ್ದ್ರಾಗ್ನೀ', 'ಅನುಪಾಸೀಯಾಃ', ಇತ್ಯಾದಿ. ಇಂತಹ ಪದ ವಿಶೇಷಗಳ ಪರಶೀಲನೆಗೆ "ಸರ್ವಾನುಕ್ರಮಣೀ", "ನಿರುಕ್ತ" ಮುಂತಾದ ವೈದಿಕಗ್ರಂಥಗಳ ಸಹಾಯವನ್ನೂ ಅಪೇಕ್ಷೆ ಪಡಬೇಕಾಯಿತು.

ಮ್ಯಾಕ್‌ಡೊನೆಲ್‌ರವರು ಸಂಪಾದಿಸಿದ "ಬೃಹದ್ದೇವತಾ" ಗ್ರಂಥದಲ್ಲಿ ಸುಮಾರು ೧೦೭ ತಪ್ಪುಗಳನ್ನು ಅವರು ತಿದ್ದಿದ್ದಾರೆ. ಇವುಗಳು ಹೆಚ್ಚಾಗಿ ಪದಗಳು ಮತ್ತು ಅಕ್ಷರಗಳು. ಪೂರ್ಣ ವಾಗಿ ಒಂದು ಸಾಲನ್ನು ("ಕರ್ಮ ದೃಷ್ಟೇ ಚ ಯತ್ಕಿಂಚಿದ್ ವಿಷಯೇ ಪರಿವರ್ತತೇ" ೧.೧೯ ಸಿಡಿ) ಬದಲಾವಣೆ ಮಾಡಿ ರುವುದು ಒಂದೇಸಲ; ಅದೂ ಸಹ ಅತ್ಯಗತ್ಯವಾದ ಬದಲಾವಣೆ ಯಾಗಬೇಕಾದ್ದರಿಂದ. ಹೀಗೆಯೇ,

> ತಯಾ ತಸ್ಯ ಚ ಸಂವಾಸಮ್ ಅಸೂಯನ್ ಪಾಕಶಾಸನಃ।
> ಪೈತಾಮಹಂ ಚಾನುರಾಗಂ ಇಂದ್ರವಚ್ಚಾಪಿ ತಸ್ಯ ತು॥
>
> ಬೃ. ದೇ. ೭. ೧೪೮.

ಎಂಬ ಶ್ಲೋಕದಲ್ಲಿ 'ಸಂವಾಸಮ್' ಎಂಬ ಪದವು ಹಾಗ್, ಮ್ಯಾಕ್ಸ್ ಮುಲರ್ ಮತ್ತು ರಾಜೇಂದ್ರ ಲಾಲ ಮಿತ್ರರ ಹಸ್ತಪ್ರತಿಗಳಲ್ಲಿ ಪ್ರಯೋಗವಾಗಿದ್ದು, 'ಸಂವಾದಮ್' ಎಂದು ಇತರ ಆರು ಹಸ್ತ ಪ್ರತಿಗಳಲ್ಲಿ ಪ್ರಯೋಗವಾಗಿದೆ. ಇವುಗಳಲ್ಲಿ, ಮ್ಯಾಕ್‌ಡೊನೆಲ್ ರವರ ದೃಷ್ಟಿಯಲ್ಲಿ 'ಸಂವಾಸಮ್' ಎಂಬ ಪದವೇ ಹೆಚ್ಚು ವಿಶ್ವಾ ಸಾರ್ಹವಾದದ್ದರಿಂದ 'ಸಂವಾದಮ್' ಎಂಬ ಪದವನ್ನು ಕೈ ಬಿಟ್ಟಿ

ದ್ದಾರೆ. ಹೀಗೆಯೇ 'ಅನಿಚ್ಛನ್' ಗೆ ಬದಲಾಗಿ 'ಅಸೂಯನ್', 'ತ್ರಿಂದ್ರವರ್ಚಾಪಿ', 'ಇಂದ್ರನ್ಯೋಷಿತಾನಿ ತು' ಮತ್ತು 'ಇಂದ್ರ ತ್ರೋಷಿತಾನಿ ತು' ಎಂಬುವುಗಳಿಗೆ ಬದಲಾಗಿ 'ಇಂದ್ರವಚ್ಚಾಪಿ ತಸ್ಯ ತು' ಎಂದು ತಿದ್ದಿದ್ದಾರೆ. ಇಂತಹ ಬದಲಾವಣೆಗಳನ್ನು ಮಾಡುವಾಗ ಕಾತ್ಯಾಯನನ "ಸರ್ವಾನುಕ್ರಮಣೀ", ಯಾಸ್ಕನ "ನಿರುಕ್ತ", "ಆರ್ಷಾನುಕ್ರಮಣೀ" ಮುಂತಾದ ವೈದಿಕಗ್ರಂಥಗಳ ಸಮಾಲೋಚನೆಯಿಂದ ಮೂಲ ಗ್ರಂಥಕ್ಕೆ ಚ್ಯುತಿಬರದಂತೆ "ಬೃಹದ್ದೇವತಾ" ಗ್ರಂಥವನ್ನು ಪರಿಷ್ಕರಿಸಿ, ಸಂಪಾದಿಸಿ, ಪ್ರಕಟಿಸಿದ್ದಾರೆ.

ಮೇಲೆ ಹೇಳಿದ ಉದಾಹರಣೆಯಿಂದ ಸಂಪಾದನೆಯ ಜವಾಬ್ದಾರಿಯ ಅರಿವು ಸ್ವಲ್ಪಮಟ್ಟಿಗಾದರೂ ಆಗಬಹುದು.

ಆರ್ಷೇಯವಾಗಿ ಬಳಕೆಗೆ ಬಂದ, ವ್ಯಾಕರಣ ದೃಷ್ಟಿಯಿಂದ ತಪ್ಪಾದ, ಪದ-ವಾಕ್ಯಗಳನ್ನು ತಿದ್ದುವುದು ಸರಿಯಲ್ಲವೆಂಬುದು ಬಹುತೇಕ ಭಾರತೀಯ ಪಂಡಿತರುಗಳ ಅಭಿಪ್ರಾಯ. ಆದರೆ, ಭಾರತೀಯ ಗ್ರಂಥಗಳ ವಿಮರ್ಶಾತ್ಮಕ ಅಧ್ಯಯನ ಮತ್ತು ಪರಿಷ್ಕರಣದ ವೈಜ್ಞಾನಿಕ ಪ್ರಗತಿಯ ದೃಷ್ಟಿಯಲ್ಲಿ ಅಂಥ ಪದ-ವಾಕ್ಯಗಳನ್ನು ವ್ಯಾಕರಣ ದೃಷ್ಟಿಯಿಂದ ತಿದ್ದಿ ಸರಿಪಡಿಸುವುದು ಸಂಪಾದಕನ ಗುರುತರ ಜವಾಬ್ದಾರಿಯಾಗುವುದು.

೬. ಮೂಲಗ್ರಂಥದ ಪ್ರತಿಗಳಲ್ಲಿ ಉಂಟಾಗಬಹುದಾದ ಭಾಷಾಮಾಲಿನ್ಯಕ್ಕೆ ಕಾರಣಗಳು

ಒಂದು ಗ್ರಂಥದ ಪರಿಶುದ್ಧತೆ ಹಾಗೂ ನಿಖರತೆಯನ್ನು ತೀರ್ಮಾನಿಸುವಾಗ ಅದಕ್ಕೆ ಪೂರಕವಾಗುವಂತೆ ಒದಗಿಸಬಹುದಾದ ಪುರಾವೆಗಳು ಮತ್ತು ದಾಖಲೆಗಳು ಅವುಗಳ ವೈಶಿಷ್ಟ್ಯ ಹಾಗೂ ಕಾಲಮಾನದಿಂದ ವಿಶ್ವಾಸಾರ್ಹವಾಗಿದ್ದರೆ ಮಾತ್ರ ಅಂತಹ ತೀರ್ಮಾನವು ಸಾಧ್ಯವಾಗುತ್ತದೆ. ಹಾಗಿದ್ದರೂ ಸಹ ಎಷ್ಟೋ ಸಲ ತಪ್ಪಾದ ಅಕ್ಷರಗಳೂ, ವಾಕ್ಯಗಳೂ ಅಥವಾ ಕೆಲವು ಭಾಗಗಳೂ ಕೂಡ ಸಲಹೆಯನ್ನು ಪಡೆದ ಹಸ್ತಪ್ರತಿಗಳ ಸ್ವರೂಪವಿಶೇಷದಿಂದ ಪರಿಷ್ಕೃತ ಗ್ರಂಥದಲ್ಲಿ ಉಳಿದುಬಿಡಬಹುದು. ಇಂತಹ ಭಾಗವನ್ನು ಸಾಮಾನ್ಯವಾಗಿ 'ಭಾಷಾಮಾಲಿನ್ಯ' (ಕರಪ್ಷನ್) ಎಂದು ವ್ಯವಹರಿಸುತ್ತಾರೆ. ಈ ರೀತಿಯಾದ ಮಾಲಿನ್ಯವು ಸ್ಥಿರಪಟ್ಟರೆ ಅದನ್ನು ಬಹಳ ಜಾಗರೂಕತೆಯಿಂದ ತಿದ್ದಿ ಸರಿಪಡಿಸಬಹುದು. ಅದಕ್ಕೆ ಮೊದಲು ಅಂತಹ ಮಾಲಿನ್ಯವು ಹೇಗಾಯಿತು ಎಂಬುದನ್ನು ಯೋಚಿಸಿ ಅದಕ್ಕೆ ಕಾರಣವನ್ನು ಕಂಡು ಹಿಡಿದು ಪರಿಶೀಲನೆಮಾಡುವುದು ಅಗತ್ಯ. ಭಾಷಾಮಾಲಿನ್ಯವು ಸಂಭವಿಸುವುದಕ್ಕೆ ಅನೇಕ ಕಾರಣಗಳುಂಟು. ಪದ ವಾಕ್ಯಗಳು ಕಣ್ಣು ತಪ್ಪಿಯೋ, ಮಾನಸಿಕವಾಗಿಯೋ, ಆಕಸ್ಮಿಕವಾಗಿಯೋ, ಉದ್ದೇಶಪೂರ್ವಕವಾಗಿಯೋ, ತಿಳಿದೋ, ತಿಳಿಯದೆಯೋ ತಪ್ಪಾಗಬಹುದು. ಆದರೆ ತಪ್ಪುಗಳು ಇಂಥದ್ದರಿಂದಲೇ ಸಂಭವಿಸಿತೆಂದು ನಿರ್ದಿಷ್ಟವಾಗಿ ತೀರ್ಮಾನಿಸುವುದು ಕಷ್ಟ. ಜೆಬ್ ಎಂಬುವರ ಸಲಹೆಯ ಪ್ರಕಾರ ಭಾಷಾಮಾಲಿನ್ಯಕ್ಕೆ ಇರಬಹುದಾದ ಕಾರಣಗಳ

ಒಂದು ಪಟ್ಟಿಯನ್ನೇ ತಯಾರಿಸಿ ಗ್ರಂಥ ಸಂಪಾದನೆಯ ಕಾಲದಲ್ಲಿ ಗಮನವಿಟ್ಟುಕೊಂಡಿರಬೇಕಾಗುತ್ತದೆ. ಇದು ಮನುಷ್ಯನ ಬುದ್ಧಿಗೆ ನಿಲುಕುವಂಥಾದ್ದಾದುದರಿಂದ ಗ್ರಂಥಪರಿಷ್ಕರಣೆಯು ಸ್ವಲ್ಪ ಮಟ್ಟಿಗಾದರೂ ಶುದ್ಧವಾಗಿರಲು ಅವಕಾಶವಾಗುವುದು.

ಭಾಷಾಮಾಲಿನ್ಯಕ್ಕೆ ಇರುವ ಕೆಲವು ಕಾರಣಗಳನ್ನು ಹಾಲ್ ಎಂಬುವರು ಕೆಳಗೆ ಪಟ್ಟಿಮಾಡಿರುವಂತೆ ವಿಂಗಡಿಸಿದ್ದಾರೆ :

೧. ಅಸ್ತವ್ಯಸ್ತತೆ ಮತ್ತು ಅದನ್ನು ನಿವಾರಿಸುವ ಪ್ರಯತ್ನ

(ಅ) ಒಂದೇ ತರಹದ ಅಕ್ಷರಗಳಿಂದುಂಟಾಗುವ ಅಸ್ತವ್ಯಸ್ತತೆ ಅಥವಾ ತೊಡಕು.

(ಆ) ಪದಗಳ ಸಾಮಾನ್ಯ ಹೋಲಿಕೆಯ ಮೇಲೆ ನಕಲು ಮಾಡುವುದು.

(ಇ) ಸಂಕ್ಷಿಪ್ತ ರೂಪಗಳನ್ನು ತಪ್ಪಾಗಿ ಅರ್ಥಮಾಡುವುದು.

(ಈ) ಪದಗಳನ್ನು ತಪ್ಪಾಗಿ ಸಂಯೋಜಿಸುವುದು ಅಥವಾ ಬೇರ್ಪಡಿಸುವುದು.

(ಉ) ವಾಕ್ಯದ ಒಂದು ಭಾಗವನ್ನು ಅಂತ್ಯವೆಂದು ಭಾವಿಸಿ ಉಳಿದ ಭಾಗವನ್ನು ನೆರೆಯ ಭಾಗದೊಂದಿಗೆ ಸೇರಿಸುವುದು.

(ಊ) ವಾಕ್ಯಗಳನ್ನು, ಭಾಗಗಳನ್ನು ಮತ್ತು ಪುಟಗಳನ್ನು ಸಂಕ್ಷೇಪಿಸುವುದು, ಹಾಗೂ ಅಕ್ಷರಗಳ, ಪದಗಳ ಮತ್ತು ವಾಕ್ಯಗಳ ಸ್ಥಾನಗಳನ್ನು ಬದಲಾಯಿಸುವುದು.

(ಋ) ಸಂಸ್ಕೃತ ಪದವನ್ನು ಪ್ರಾಕೃತಕ್ಕೆ ಅಥವಾ ಪ್ರಾಕೃತ

ಪದವನ್ನು ಸಂಸ್ಕೃತಕ್ಕೆ ತಪ್ಪಾಗಿ ಬದಲಾಯಿಸುವುದು ಅಥವಾ ತಪ್ಪಾಗಿ ಭಾಷಾಂತರಿಸುವುದು.

ಋ) ಉಚ್ಚಾರಣೆಯ ಬದಲಾವಣೆಯಿಂದ ಉಂಟಾಗುವ ತಪ್ಪುಗಳು.

(ಎ) ಅಂಕಿಗಳ ತೊಡಕು.

(ಏ) ನಾಮಪದಗಳ ತೊಡಕು.

(ಐ) ಅಪರೂಪವಾದ ಪದಗಳ ಬದಲಾಗಿ ಪ್ರಚಲಿತವಾದ ಮತ್ತು ಸಮಾನಾರ್ಥಕ ಪದಗಳನ್ನು ಉಪಯೋಗಿಸುವುದು.

(ಒ) ಹಳೆಯ ಅಕ್ಷರ ಜೋಡಣೆಗೆ ಬದಲಾಗಿ ಹೊಸ ಅಕ್ಷರ ಜೋಡಣೆ ಮಾಡುವುದು.

(ಓ) ಉಪೇಕ್ಷಿತ ತಪ್ಪುಗಳಿಂದುಂಟಾದ ಫಲಿತಾಂಶಗಳನ್ನೇರ್ಪಡಿಸಲು ಪ್ರಯತ್ನಿಸುವುದು.

೨. ಲೋಪಗಳು :

(ಔ) ಏಕರೀತಿಯ ಸಾಲಿನ ಆದಿ ಮತ್ತು ಅಂತ್ಯಗಳಲ್ಲಿ ಅಕ್ಷರಗಳನ್ನು ಮತ್ತು ಪದಗಳನ್ನು ಬಿಟ್ಟುಬಿಡುವುದು (ಹ್ಯಾಪ್ಲೋಗ್ರಫಿ).

(ಅಂ) ಸಾಧಾರಣವಾದ ಯಾವುದೇ ರೀತಿಯ ಲೋಪಗಳು (ಲಿಪೋಗ್ರಫಿ).

೩. ಸಂಯೋಜನೆ :

(ಅಃ) ಒಂದು ಗ್ರಂಥವಚನದ ಅರ್ಥವನ್ನು ಸ್ಪಷ್ಟಗೊಳಿಸುವ

ಅದರ ಹಿಂದಿನ ಅಥವಾ ಮುಂದಿನ ಭಾಗಗಳನ್ನು ಪುನರಾವೃತ್ತಿ ಮಾಡುವುದು.

(ಕ) ಎರಡು ಸಾಲುಗಳ ಮಧ್ಯದಲ್ಲಿ ಅಥವಾ ಪತ್ರದ ಪಾರ್ಶ್ವದಲ್ಲಿ ಬರೆದ ಸಾಲುಗಳನ್ನು ಮೂಲ ಪಾಠಕ್ಕೆ ಸೇರಿಸುವುದು.

(ಖ) ಬೆರಕೆಯ ಪಾಠಾಂತರಗಳು.

(ಗ) ಸಂಬಂಧಿಸಿದ ಬರವಣಿಗೆಗಳ ಪ್ರಭಾವದಿಂದ ಪದವಾಕ್ಯಗಳನ್ನು ಸಂಯೋಜಿಸುವುದು.

ಮೇಲೆ ಹೇಳಿದ ಹತ್ತೊಂಭತ್ತು ಕಾರಣಗಳು ಗ್ರಂಥ ಪರಿಷ್ಕರಣೆಯಲ್ಲಿ ಉಂಟಾಗುವ ಭಾಷಾಮಾಲಿನ್ಯಕ್ಕೆ ಪೂರಕವಾದವುಗಳು. ಸಾಮಾನ್ಯವಾಗಿ ದೇವನಾಗರೀ ಲಿಪಿಯು ಜೈನಗ್ರಂಥಗಳಲ್ಲಿ ಇಂತಹ ತಪ್ಪುಗಳಿಗೆ ಅವಕಾಶಮಾಡಿದೆಯೆಂದು ವಿದ್ವಾಂಸರ ಅಭಿಮತ. "ಮಹಾವೀರಚರಿತೆ" ಯಲ್ಲಿ 'ಸ್ಥ' ಎಂಬುದು 'ಚ್ಛ' ಆಗಿ, 'ಸ್ವಸ್ಥಾಯ' ಎಂಬುದು 'ಸ್ವಚ್ಛಾಯ' ಎಂದಾಗಿದೆ. ಹಾಗೆಯೇ 'ಮಹಾದೋಸೋ' — 'ಮಹಾದಾಸೋ'; 'ವಾಕ್ಯನಿಷ್ಯಂದ'— 'ವಾಕ್ಯನಿಷ್ಪಂದ'; ಇತ್ಯಾದಿ. ಇವು ಸಾಮಾನ್ಯವಾಗಿ ದೃಷ್ಟಿದೋಷದಿಂದುಂಟಾದ ಮಾಲಿನ್ಯಗಳು. ಶಾರದಾ ಮತ್ತು ದೇವನಾಗರೀ ವರ್ಣಮಾಲೆಯಲ್ಲಿ ಹೆಚ್ಚು ಸಾಮ್ಯವು ಕಂಡುಬರುತ್ತದೆ. ಉದಾಹರಣೆಗೆ, 'ಮ'–'ಸ'; 'ಉ'—'ತ'; 'ಸ'—'ಥ'; ಇತ್ಯಾದಿ ಅಕ್ಷರಗಳ ಸಾಮ್ಯ–"ಮಹಾಭಾರತ"ದಲ್ಲಿ 'ವೃಥೈವ ಸೋ ವಿನಂಕ್ಷ್ಯಸಿ' ಗೆ ಬದಲಾಗಿ 'ವಿನಂಕ್ಷಸಿ'. ಇದು ಅಕ್ಷರ ಲೋಪದಿಂದುಂಟಾದ ಮಾಲಿನ್ಯ. "ರಾಮಾಯಣ"ದಲ್ಲಿ 'ಯೇ ಮದ್ವಿಷಯವಾಸಿನಃ' ಎಂಬ ಒಂದು ಪಠಾಂತರವಿದ್ದರೆ, ಅದರ ಮತ್ತೊಂದು ಹಸ್ತಪ್ರತಿ

ಯಲ್ಲಿ 'ವಿಷವಾಸಿನಃ' ಎಂದಿದೆ. ತಿಳಿದೋ ತಿಳಿಯದೆಯೋ ಮಾಡುವ ತಪ್ಪಿಗೆ "ಇದಂ ವಚನಮಬ್ರವೀತ್" (ರಾಮಾಯಣ)- "ವಚನಂ ತ್ವ ಇದಂ ಅಬ್ರವೀತ್"; 'ತಸ್ಮಿನ್ ಕಾಲೇ ಸಹ ತ್ವಯಾ'- 'ತಸ್ಮಿನ್ ಕಾಲೇ ತ್ವಯಾ ಸಹ' ಎಂಬುವು ಉದಾಹರಣೆಗಳು. ಹೀಗೆ, "ಭಗವದ್ಗೀತೆ"ಯಲ್ಲಿ ಬರುವ 'ಅಹಂ ವೈಶ್ವಾನರೋ ಭೂತ್ವಾ' ಎಂಬುದನ್ನು ಅನೇಕರು ಪಾರಾಯಣ ಮಾಡುವಾಗ 'ಅಹಂ ವೈ ಶ್ವಾ ನರೋ ಭೂತ್ವಾ' ಎಂದು ತಪ್ಪಾಗಿ ಉಚ್ಚರಿಸುತ್ತಾರೆ. ಪದಗಳನ್ನು ತಪ್ಪಾಗಿ ವಿಭಾಗಿಸುವುದರಿಂದುಂಟಾಗುವ ಭಾಷಾಮಾಲಿನ್ಯ ಇದು. ಇದರಂತೆಯೇ 'ಪರಮಶೋಭನಂ' ಎಂಬುದು 'ಪರಂ ಅಶೋಭನಂ' ಆಗಿಬಿಡಬಹುದು.

ಪ್ರಾಚೀನ ಹಸ್ತಪ್ರತಿಯ ಪರಿಷ್ಕರಣೆ ಮತ್ತು ಸಂಪಾದನ ಕಾರ್ಯದಲ್ಲಿ ಪದೇ ಪದೇ ಸಂಪಾದಕನ ಬುದ್ಧಿ ಚಾತುರ್ಯವನ್ನು ಒರೆಗೆ ಹಚ್ಚುವುದು 'ಪ್ರಕ್ಷಿಪ್ತ' ಭಾಗಗಳು. ಇಂಥವುಗಳು ಒಂದು ಗ್ರಂಥದಲ್ಲಿ ಸಂಯೋಜಿತವಾದದ್ದೋ ಅಥವಾ ಲೋಪವಾದದ್ದೋ ಆಗಿರಬಹುದು. ಮೂಲಗ್ರಂಥದ ಹಲ-ಕೆಲವು ಭಾಗಗಳನ್ನು ಹೆಚ್ಚು ಪಕ್ವವಾಗಿ ಮಾಡುವ ದೃಷ್ಟಿಯಿಂದಲೋ ಅಥವಾ ಪಾಠದ ಸುಧಾರಣೆಯ ದೃಷ್ಟಿಯಿಂದಲೋ ಹೊಸ ಭಾಗಗಳನ್ನು ಸೇರಿಸಿಬಿಟ್ಟಿರುತ್ತಾರೆ. ಇದನ್ನು ಕಂಡುಹಿಡಿಯುವುದೇ ಮಹಾ ಕಷ್ಟದ ಕೆಲಸ. ಇಂತಹ ಪ್ರಕ್ಷಿಪ್ತ ಭಾಗಗಳನ್ನು ಉದ್ದೇಶಪೂರ್ವಕವಾಗಿಯೇ ಮಾಡಿರುತ್ತಾರೆಂದು ನಂಬಬಹುದು. ವಿದ್ವಾಂಸರುಗಳು ಈ ಪ್ರಕ್ಷಿಪ್ತಗಳಿಗೆ ಕೆಲವು ಕಾರಣಗಳನ್ನು ಕಂಡುಹಿಡಿದಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟಿದೆ:

೧. ಗ್ರಂಥದ ಕಠಿಣ ಭಾಗಗಳನ್ನು ಮರೆಮಾಚಲು ಸಾಮಾನ್ಯ

ವಾಗಿ ಆ ಭಾಗವನ್ನು ಹೊಸ ಬರವಣಿಗೆಯಿಂದ ಬದಲಾಯಿಸುವುದು.

೨. ಒಂದು ಪಂಕ್ತಿಯನ್ನೋ ಅಥವಾ ಒಂದು ಶ್ಲೋಕವನ್ನೋ ಹೊಸದಾಗಿ ಸೇರಿಸಿ ವಿಸ್ತಾರವಾದ ಭಾಗವನ್ನು ಅಳವಡಿಸುವುದು. ಇಂಥ ಸಂಯೋಜನೆಯು ಹಸ್ತಪ್ರತಿಯ ನಕಲು ಮಾಡುವವರಿಂದ ಸಂಭವಿಸಲಾರದೆಂದು ಸಾಮಾನ್ಯ ಅಭಿಪ್ರಾಯ.

೩. ಆಖ್ಯಾನ-ಉಪಾಖ್ಯಾನಗಳನ್ನು ಸೇರಿಸುವುದು.

೪. ಸಂದರ್ಭಕ್ಕೆ ಹೊಂದುವಂತೆ ವಿಷಯವನ್ನು ವಿಸ್ತರಿಸುವುದು.

೫. ಹಸ್ತಪ್ರತಿಯಲ್ಲಿ ಬಿಟ್ಟುಹೋಗಿರುವ ಸಾಲುಗಳನ್ನು ಊಹೆಯ ಮೇಲೆ ಅಳವಡಿಸುವುದು.

೬. ಗ್ರಂಥದ ಯಾವುದೇ ಭಾಗವು ಮನಸ್ಸಿಗೆ ಹಿಡಿಸದಿದ್ದರೆ ಅದು ಸರಿಯಾಗಿರಲಿ ಅಥವಾ ತಪ್ಪಾಗಿರಲಿ ಅದನ್ನು ಇಷ್ಟಾನುಸಾರ ತಿದ್ದಿಬಿಡುವುದು, ಅಥವಾ ಬೇಕಾದ ವಿಷಯವನ್ನು ಸೇರಿಸಿಬಿಡುವುದು, ಅಥವಾ ಇರುವ ವಿಷಯವನ್ನು ತೆಗೆದುಹಾಕಿಬಿಡುವುದು.

ಹೀಗೆ ಒಂದು ಗ್ರಂಥದ ಸ್ವರೂಪ ಬದಲಾವಣೆಯಲ್ಲಿ ಇಂತಹ ಕಾರಣದಿಂದಲೇ ಆ ಬದಲಾವಣೆಯಾಗಿರಬೇಕೆಂದು ಸಿದ್ಧಪಡಿಸುವುದು ಅಸಾಧ್ಯ. ಆದ್ದರಿಂದ ಸಂಪಾದಕನು ಮೇಲೆ ಹೇಳಿದಂತಹ ಅನೇಕ ಕಾರಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಗ್ರಂಥ ಸಂಪಾದನೆಯಲ್ಲಿ ತೊಡಗಬೇಕಾಗುವುದು. ಅದರಲ್ಲೂ ಭಾಷಾ

ಮಾಲಿನ್ಯಕ್ಕೆ ಸಾಮಾನ್ಯವಾಗಿ ಇರಬಹುದಾದ ಕಾರಣಗಳನ್ನು ಗಮನಿಸಿ ಸಂಪಾದನ ಕಾರ್ಯದಲ್ಲಿ ಮುಂದುವರಿಯಬೇಕು. ಇಲ್ಲದಿದ್ದರೆ ಗ್ರಂಥವು ಆದಿಯಿಂದ ಅಂತ್ಯದವರೆಗೂ ಮಲಿನವಾಗಿ ಮೂಲ ಗ್ರಂಥದ ಸ್ವರೂಪ-ವೈಶಿಷ್ಟ್ಯವೇ ಅದೃಶ್ಯವಾಗಬಹುದು.

೭. ವಿಮರ್ಶಾತ್ಮಕ ಪರಿಷ್ಕರಣದಲ್ಲಿ ಅನುಸರಿಸಬೇಕಾದ ಕೆಲವು ಮುಖ್ಯ ಅಂಶಗಳು

ಹಿಂದೆ ಹೇಳಿದಂತೆ ಒಂದು ಪ್ರಾಚೀನ ಹಸ್ತಪ್ರತಿಯನ್ನು ವಿಮರ್ಶಾತ್ಮಕವಾಗಿ ಪರಿಷ್ಕರಿಸುವಾಗ, ಗ್ರಂಥಕ್ಕೆ ಸಂಬಂಧಿಸಿದ ಭಾಷಾಂತರಗಳು, ಸಂಕಲನಗಳು, ಇತ್ಯಾದಿ ಪುರಾವೆಗಳು ಹಾಗೂ ಅದೇ ಹೆಸರನ್ನು ಹೊಂದಿರುವ ಗ್ರಂಥಗಳ ನಕಲುಗಳ ವಿಷಯ ವಿಶೇಷಗಳನ್ನು ಸ್ಥೂಲವಾಗಿ ಪರಿಚಯ ಮಾಡಿಕೊಂಡ ನಂತರ ಅವುಗಳನ್ನು ಮುಖ್ಯದಾಖಲೆಗಳೆಂದು ಪರಿಗಣಿಸಬೇಕು. ಅವುಗಳು ದೊರೆಯುವ ನಾನಾ ಸ್ಥಳಗಳ ಸಂಪರ್ಕವನ್ನು ಹೊಂದಿ, ಪಾಠಾಂತರ ಮಾಡಿದ ಗ್ರಂಥಗಳು, ಅಥವಾ ಮೈಕ್ರೋಫಿಲಂ ಮೂಲಕ ತಯಾರಿಸಿದ ನಕಲುಗಳು, ಇತ್ಯಾದಿ ಉಪಕರಣಗಳನ್ನು ಸಂಗ್ರಹಿಸಿಕೊಳ್ಳಬೇಕು. ಅನಂತರ ಪ್ರತಿಯೊಂದು ಪುರಾವೆ ಯನ್ನೂ ಕೂಲಂಕಷವಾಗಿ ಅಧ್ಯಯನಮಾಡಿ ಸಂಪಾದನೆಗೆ ಸಹಾಯಕವಾಗುವ ವಿಷಯವಿಶೇಷಗಳನ್ನು ಶೇಖರಿಸಬೇಕು. ಈ ವಿಧಾನವನ್ನು ಕಾರ್ಯಗತಮಾಡುವಾಗಲೇ ಸಂಪಾದನೆಗೆ ಆಯ್ಕೆ ಮಾಡಿದ ಪ್ರಾಚೀನ ಹಸ್ತಪ್ರತಿಯ ಇತಿಹಾಸ, ವಿಷಯ ವಿಶೇಷಗಳು ಸಂಪಾದಕನ ಗಮನಕ್ಕೆ ಬಂದು ಗ್ರಂಥದ ಆಳವಾದ ಅಧ್ಯಯನಕ್ಕೆ ನಾಂದಿಯಾಗುತ್ತದೆ.

ಪೀಠಿಕೆಯ ವಿಚಾರ: ಪರಿಷ್ಕೃತ ಗ್ರಂಥಕ್ಕೆ ಪೀಠಿಕೆಯನ್ನು ಬರೆಯುವಾಗ ಕೆಲವು ಅಂಶಗಳನ್ನು ಗಮನದಲ್ಲಿಡಬೇಕು ಪ್ರಾರಂಭದಲ್ಲಿ ಪರಿಷ್ಕರಣಕ್ಕೆ ಸಹಾಯಕವಾಗುವಂತೆ ಸಂಪಾದಕ ನಿಂದ ಉಪಯೋಗಿಸಲ್ಪಟ್ಟ ಸಲಕರಣೆಗಳನ್ನು ವಿಶದವಾಗಿ

ನಿರೂಪಿಸಬೇಕು. ಅನಂತರ, ವಿಷಯಕ್ಕೆ ಸಂಬಂಧಿಸಿದ ಹಸ್ತ ಪ್ರತಿಗಳ ಪಟ್ಟಿ, ಅವುಗಳಲ್ಲಿ ಸಂಪಾದನೆಗೋಸ್ಕರ ಕ್ರಮವಾಗಿ ಆಯ್ಕೆಮಾಡಿದ ಹಸ್ತಪ್ರತಿಗಳ ಪಟ್ಟಿ, ಅವುಗಳಲ್ಲಿ ಮೂಲ ಹಸ್ತ ಪ್ರತಿಯೊಂದಿಗೆ ತುಲನೆ (ಕೊಲೇಷನ್) ಮಾಡಿದ ನಕಲುಗಳ ಪಟ್ಟಿ ಮತ್ತು ಅವುಗಳನ್ನು ಆಯ್ಕೆಮಾಡಲು ಇರಬಹುದಾದ ಕಾರಣಗಳು ಮುಂತಾದ ಸಂಗತಿಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಇವೇ ಅಲ್ಲದೆ, ಆಯಾ ಹಸ್ತಪ್ರತಿಗಳ ಸಂಗ್ರಹವು ಯಾವ ಯಾವ ಸ್ಥಳಗಳಲ್ಲಿ ಸಂರಕ್ಷಿಸಲಾಗಿದೆ ಎಂಬುದನ್ನೂ ವಿವರಿಸಬೇಕು. ಉದಾ ಹರಣೆಗೆ, ಹಸ್ತಪ್ರತಿಗಳ ಕೋಶಾಗಾರಗಳು, ಪ್ರಾಚ್ಯವಿದ್ಯಾ ಸಂಶೋಧನಾಲಯಗಳು, ಗ್ರಂಥಾಲಯಗಳು, ಮಠಗಳು, ದೇವಾಲಯಗಳು, ಪಂಡಿತರುಗಳ ವೈಯಕ್ತಿಕ ಸಂಗ್ರಹಗಳು, ಇತ್ಯಾದಿ. ಹಾಗೆ ಮಾಡುವಾಗ, ಪ್ರತಿ ನಕಲೂ, ಹಸ್ತಪ್ರತಿಯೂ ಎಷ್ಟು ಪ್ರಾಚೀನವಾದದ್ದೆಂಬುದನ್ನು ವಿಶದಪಡಿಸಬೇಕು. ಗ್ರಂಥ ಸಂಪಾದನೆಗೆ ಉಪಯುಕ್ತವಾದ ಮೇಲಿನ ಮಾಹಿತಿಗಳನ್ನು ಅವಶ್ಯಕವಾಗಿ ಪರಿಷ್ಕೃತ ಗ್ರಂಥದ ಪೀಠಿಕೆಯಲ್ಲಿ ವಿವರಿಸಬೇಕು. ಅದರಿಂದ ಆ ಗ್ರಂಥವನ್ನು ಅಧ್ಯಯನಮಾಡುವವರಿಗೆ ಹಸ್ತ ಪ್ರತಿಯ ಇತಿಹಾಸ, ಸಂಬಂಧಿಸಿದ ವಿಷಯ ಮತ್ತು ಪರಿಷ್ಕರಣ ವಿಧಾನಗಳು ವಿಶ್ವಾಸಾರ್ಹವೆಂಬ ಅಭಿಪ್ರಾಯ ಉಂಟಾಗಬೇಕು.

ಅನಂತರ, ಸಂಪಾದನೆಗೆ ಆಯ್ದ ಹಸ್ತಪ್ರತಿಯ ನಕಲುಗಳ ತುಲನಾತ್ಮಕ ಅಧ್ಯಯನದ ಮೂಲಕ ವಿಂಗಡಣೆಯ ವಿಧಾನ ವನ್ನೂ, ಹಾಗೆ ಉಪಯೋಗಿಸಿಕೊಂಡ ನಕಲುಗಳ ಪೂರ್ಣ ವಿವರಣೆಯನ್ನೂ ನಮೂದಿಸಬೇಕು. ಇವರ ಜೊತೆಯಲ್ಲಿ ನಕಲುಗಳಿಗೆ ಗುರುತುಮಾಡಿರುವ ಸಂಕೇತ (ಸಿಗ್ಲಂ) ಗಳನ್ನೂ,

ಆಯಾ ನಕಲುಗಳನ್ನು ಬರೆಯಲಾಗಿರುವ ಲಿಪಿಗಳನ್ನೂ ತಿಳಿಸಬೇಕು. ನಕಲುಗಳ ವಿವರಣೆಯನ್ನು ಮಾಡುವಾಗ, ಅವು ಬರೆಯಲ್ಪಟ್ಟಿರುವ ಸಾಮಗ್ರಿ, ಉದಾಹರಣೆಗೆ, ತಾಳಪತ್ರ, ಭೂರ್ಜಪತ್ರ, ಕಾಗದ, ಅಥವಾ ಇನ್ನಾವುದಾದರೂ ಬರವಣಿಗೆಯ ಸಾಧನ ; ಆ ನಕಲಿನಲ್ಲಿರುವ ಪತ್ರಸಂಖ್ಯೆ, ಒಂದು ಪತ್ರದಲ್ಲಿನ ಸಾಲುಗಳ ಸಂಖ್ಯೆ, ಒಂದು ಸಾಲಿನಲ್ಲಿರುವ ಅಕ್ಷರಗಳ ಸಂಖ್ಯೆ : ಗ್ರಂಥವು ಸಮಗ್ರವೇ ಅಥವಾ ಅಸಮಗ್ರವೇ, ಅಸಮಗ್ರವಾದಲ್ಲಿ ಕರ್ತೃವೇ ಬರವಣಿಗೆಯನ್ನು ಮಧ್ಯದಲ್ಲಿ ಕೈಬಿಟ್ಟಿರಬಹುದೇ ಅಥವಾ ಬರವಣಿಗೆಗಾರನು (ಸ್ಕ್ರೈಬ್) ಅದಕ್ಕೆ ಕಾರಣನೇ, ಅಥವಾಕ್ರಿಮಿಕೀಟಗಳ ಧಾಳಿಗಾಗಲೀ,ಪ್ರಕೃತಿವಿಕೋಪಕ್ಕೊಳಗಾಗಿಯಾಗಲಿ ಗ್ರಂಥವು ಅಪೂರ್ಣವಾಗಿರಬಹುದೇ ಎಂಬ ವಿಚಾರಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಬೇಕು.

ಆಯ್ಕೆ ಮಾಡಿರುವ ಹಸ್ತಪ್ರತಿಯು ನಕಲುಗಳ ಕೂಲಂಕಷ ವಿವರಣೆಯನ್ನು ಕೊಡುವಾಗ ಆಯಾ ಪ್ರತಿಗಳ ಇತಿಹಾಸವನ್ನು ಅವುಗಳ ಯೋಗ್ಯತೆಗನುಗುಣವಾಗಿ ಕ್ರಮವಾಗಿ ವಿವರಿಸಬೇಕು. ಇದರ ಜೊತೆಗೆ, ಕರ್ತೃವಿನಿಂದಲೇ ಆಗಲೀ ಅಥವಾ ಬೇರೆಯವರಿಂದಾಗಲಿ ನಮೂದಿಸಿರಬಹುದಾದ ತಿದ್ದುಪಡಿಗಳು ಮತ್ತು ಇತರ ಲೋಪದೋಷಗಳು ಹಸ್ತಪ್ರತಿಯಲ್ಲಿ ಕಂಡುಬಂದರೆ ಅದನ್ನೂ ಪೀಠಿಕೆಯಲ್ಲಿ ಪ್ರಸ್ತಾಪಿಸಬೇಕು. ಪರಿಷ್ಕರಣ ಮಾಡುವಾಗ ಇಂತಹ ತಿದ್ದುಪಡಿಗಳು ಕರ್ತೃವಿನಿಂದಲೇ ಮಾಡಲಾದುವೆಂದು ಸಂಪಾದಕನಿಗೆ ಖಚಿತವಾದರೆ ಅವುಗಳನ್ನು ಮಾನ್ಯ ಮಾಡಬೇಕಾಗುತ್ತದೆ. ಇಷ್ಟೇ ಅಲ್ಲದೆ, ಹಸ್ತಪ್ರತಿಯ ಪ್ರಾರಂಭ ಮತ್ತು ಅಂತ್ಯದ ಕೆಲವು ಸಾಲುಗಳನ್ನು (ಕೊಲಫೋನ್) ಉದಾಹರಿಸುವುದರಿಂದ ಆ ಪ್ರತಿಯ ವಿಷಯವಿಶೇಷಗಳೂ ಹಾಗೂ ಕರ್ತೃವಿನ ವಿಚಾರವೂ

ತಿಳಿಯಲು ಸಹಾಯವಾಗುತ್ತದೆ. ಕೆಲವು ಹಸ್ತಪ್ರತಿಗಳಲ್ಲಿ ಒಂದಕ್ಕಿಂತ ಹೆಚ್ಚು ಶೀರ್ಷಿಕೆ (ಟೈಟಲ್) ಗಳಿರುವುದೂ ಉಂಟು. ಹಾಗಿದ್ದ ಪಕ್ಷದಲ್ಲಿ ಅವುಗಳನ್ನೂ ಪೀಠಿಕೆಯಲ್ಲಿ ಪ್ರಸ್ತಾಪಿಸಬೇಕು. ಇವೆಲ್ಲವೂ ಕೂಡ ಸಂಪಾದಕನಿಗೆ ಹಸ್ತಪ್ರತಿಯ ನಿಜಸ್ವರೂಪವನ್ನು ಅರಿಯಲು ಸಹಾಯಕವಾಗಿ ವಿಮರ್ಶೆಯ ದೃಷ್ಟಿಯಿಂದ ಪರಿಷ್ಕರಣ ಕಾರ್ಯವು ಸಫಲವಾಗಲು ದಾರಿಯಾಗುವುದು.

ಅನೇಕ ಹಸ್ತಪ್ರತಿಗಳಲ್ಲಿ ಅವುಗಳ ನಕಲು ಮಾಡುವವರಿಂದ ನಮೂದಿಸಲಾದ 'ಪ್ರಶಸ್ತಿ'ಗಳು ಆಯಾ ಗ್ರಂಥದ ಮೊದಲು ಅಥವಾ ಕೊನೆಯಲ್ಲಿ ಕಂಡುಬರುವುದುಂಟು. ಇಂಥ ಪ್ರಶಸ್ತಿಗಳು ಗ್ರಂಥ ಪರಿಷ್ಕರಣಕ್ಕೆ ಯಾವ ಸಂಬಂಧವೂ ಇಲ್ಲದಿದ್ದರೂ ಅವು ಗಳಲ್ಲಿರಬಹುದಾದ ಚಾರಿತ್ರಿಕ ಸಂದೇಶಗಳು ಗ್ರಂಥದ ಅಥವಾ ಅದರ ಕರ್ತೃವಿನ ದೇಶಕಾಲಗಳನ್ನು ತಿಳಿಯುವುದರಲ್ಲಿ ಸಹಾಯಕ ವಾಗಬಹುದು. ಆದ್ದರಿಂದ ಇಂಥ ಪ್ರಶಸ್ತಿಗಳನ್ನು ಪೀಠಿಕೆಯಲ್ಲಿ ಕೂಲಂಕಷವಾಗಿ ಪ್ರಸ್ತಾಪಿಸಬೇಕು. ಹೀಗೆ ಹಸ್ತಪ್ರತಿಗಳ ವಿವ ರಣೆಯನ್ನು ಮಾಡಿದಮೇಲೆ ಅವುಗಳ ಬಗ್ಗೆ ದೊರಕಬಹುದಾದ ಇತರ, ಅಂದರೆ, ಹಸ್ತಪ್ರತಿಯಲ್ಲೇ ನಮೂದಿಸಿರಬಹುದಾದ ಪುರಾವೆಗಳ ಜತೆಗೆ ಪರಿಷ್ಕರಣಕ್ಕೆ ಉಪಯೋಗಿಸಿದ ಬೇರೆ ಬೇರೆ ವ್ಯಾಖ್ಯಾನಗಳು, ಭಾಷಾಂತರಗಳು, ಇತ್ಯಾದಿ ಕೃತಿಗಳಿಂದ ಸಿಗ ಬಹುದಾದ ನೇರವಾದ ಪುರಾವೆಗಳನ್ನೂ ವಿವರಿಸಬೇಕು. ಹಸ್ತ ಪ್ರತಿಯ ನಕಲುಗಳು ಯಾವ ಶತಮಾನಕ್ಕೆ ಸೇರಿದುದೆಂದು ಸೂಚಿಸುವಾಗ ಸಾಮಾನ್ಯವಾಗಿ ಅವುಗಳ ನಿರ್ದಿಷ್ಟ ಗುರುತಿನ (ಸಿಗ್ಲಂ) ಮೇಲೆ ಆಯಾ ಶತಮಾನವನ್ನು ಅಂಕಿಯಲ್ಲಿ ಸೂಚಿಸು ವುದು ಒಂದು ಗಮನಾರ್ಹವಾದ ಅಂಶ. ಉದಾಹರಣೆಗೆ, 'ಖ' ಎಂದು ಗುರುತು ಮಾಡಿರುವ ಹಸ್ತಪ್ರತಿ ಅಥವಾ ಅದರ ನಕಲು

ಹನ್ನೆರಡನೇ ಶತಮಾನಕ್ಕೆ ಸೇರಿದ್ದೆಂದು ಖಚಿತವಾದರೆ, ಆ ಹಸ್ತಪ್ರತಿ ಅಥವಾ ನಕಲನ್ನು ಗುರುತಿನಿಂದ ವ್ಯವಹರಿಸುವಾಗ 'ಖ^{12}' ಎಂದು ಸೂಚಿಸಬಹುದು. ಒಂದು ವೇಳೆ ಅದರ ಕಾಲವು ಊಹೆಯ ಮೇಲೆ ಗೊತ್ತುಪಡಿಸಲಾಗಿದ್ದು ಅನುಮಾನಾಸ್ಪದವಾಗಿದ್ದಲ್ಲಿ 'ಖ^{12*}' ಎಂದು ಒಂದು ಸಣ್ಣ ನಕ್ಷತ್ರದೊಂದಿಗೆ ಗುರುತುಮಾಡಬೇಕು. ಮೇಲೆ ಹೇಳಿದ ಅಂಶಗಳನ್ನು ಪೂರೈಸಿದ ಮೇಲೆ ಸಂಪಾದಕನು ಹಸ್ತಪ್ರತಿಯ ಕರ್ತೃವಿನ ವಿಷಯವನ್ನು ಪೀಠಿಕೆಯಲ್ಲಿ ಪ್ರಸ್ತಾಪಿಸಬೇಕು. ಕರ್ತೃವಿನ ದೇಶ, ಕಾಲ, ಅವನು ಬರೆದಿರಬಹುದಾದ ಇತರ ಗ್ರಂಥಗಳು, ಇತ್ಯಾದಿಗಳನ್ನು ವಿವರಿಸುವುದರ ಜತೆಗೆ ಅವನ ಗ್ರಂಥದ ವಿಷಯ, ಶೈಲಿ ಮತ್ತು ಆ ಗ್ರಂಥದ ಉಪಯುಕ್ತತೆಗಳನ್ನು ಕೂಲಂಕಷವಾಗಿ, ವಿಚಾರಾತ್ಮಕವಾಗಿ, ಶಾಸ್ತ್ರ-ಸಾಹಿತ್ಯ ದೃಷ್ಟಿಯಿಂದ ಪಾಂಡಿತ್ಯಪೂರ್ಣವಾಗಿ ವಿಮರ್ಶಿಸಬೇಕು. ಗ್ರಂಥದಲ್ಲಿ ಕಂಡುಬರಬಹುದಾದ ಚಾರಿತ್ರಿಕ ಅಂಶಗಳು, ಅಂದರೆ, ರಾಜಮಹಾರಾಜರುಗಳ ಹೆಸರುಗಳು, ಸ್ಥಳಗಳ ಹೆಸರುಗಳು, ವಂಶದ ಹೆಸರುಗಳು, ಉದಾಹರಿಸಲ್ಪಟ್ಟ ಇತರ ಗ್ರಂಥಗಳ ಹೆಸರುಗಳು, ಮತ್ತು ಅವುಗಳ ಕರ್ತೃಗಳ ಹೆಸರುಗಳು, ಇತ್ಯಾದಿಗಳನ್ನು ವಿಶೇಷವಾಗಿ ಸಂಗ್ರಹಿಸಬೇಕು.

ಪರಿಷ್ಕೃತ ಗ್ರಂಥದ ಮೊದಲು ಪೀಠಿಕಾ ಪ್ರಕರಣದಷ್ಟೇ ಗ್ರಂಥದ ಕೊನೆಯಲ್ಲಿ ಸೇರಿಸುವ ಅನುಬಂಧವೂ ಮುಖ್ಯವಾದದ್ದು. ಇವುಗಳಲ್ಲಿ ಪದಸೂಚಿ, ಅದರಲ್ಲೂ ವಿಶೇಷವಾಗಿ ಬಳಸಿರುವ ಅಪರೂಪದ ಪದಗಳ ಪಟ್ಟಿ, ಅಕಾರಾದಿ ಶ್ಲೋಕಗಳ ಪಟ್ಟಿ, ಐತಿಹಾಸಿಕ ಮತ್ತು ಭೌಗೋಳಿಕ ಪದಗಳ ಪಟ್ಟಿ, ಮುಂತಾದುವನ್ನು

ಅನುಬಂಧದಲ್ಲಿ ಸೇರಿಸುವುದರಿಂದ ಪರಿಷ್ಕೃತ ಗ್ರಂಥವನ್ನು ಅಭ್ಯಾಸ ಮಾಡುವ ಸಂಶೋಧಕರಿಗೆ ಶ್ರಮವು ತಪ್ಪಿ ಹೆಚ್ಚಿನ ಅನುಕೂಲವಾಗುತ್ತದೆ.

ಈ ಅಂಶಗಳೆಲ್ಲವೂ ಸಾಮಾನ್ಯವಾಗಿ ವಿಮರ್ಶಾತ್ಮಕ ಅಧ್ಯಯನದಲ್ಲಿ ಹೆಚ್ಚಿನ ಪ್ರಾಶಸ್ತ್ಯವನ್ನು ಪಡೆಯುತ್ತವೆ. ಅವುಗಳನ್ನು ಸಾಧ್ಯವಾದಷ್ಟು ಅನುಕರಣೆಮಾಡುವುದರಿಂದ ಪರಿಷ್ಕರಣ ಮಾಡಿದ ಗ್ರಂಥದ ಉಪಯುಕ್ತತೆಯೂ, ಮೂಲ್ಯವೂ ಹೆಚ್ಚಿ ಗ್ರಂಥವು ವಿಶ್ವಾಸಾರ್ಹವಾಗುತ್ತದೆ; ಸಂಪಾದಕನ ಶ್ರಮವೂ ಸಾರ್ಥಕವಾಗುತ್ತದೆ.